

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮೇ 30 ಸೋಮವಾರ 2022

ಸಂಪುಟ: 43 | ಸಂಚಿಕೆ: 44 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಮೈಸೂರಿನ ವಿಶೇಷಚೇತನ ವಿದ್ಯಾರ್ಥಿನಿಗೆ ಮೋದಿ ಪ್ರಶಂಸೆ

ಉತ್ತರಾಖಂಡ ಮೂಲದ ವಿದ್ಯಾರ್ಥಿನಿಗೆ ನೆರವಾದ ಪ್ರೊ. ತಾರಾಮೂರ್ತಿ ಬಗ್ಗೆಯೂ ಮೆಚ್ಚುಗೆ

ಮೈಸೂರು, ಮೇ 29(ಎಸ್‌ಬಿಡಿ)– ಪ್ರಧಾನಿ ನರೇಂದ್ರ ಮೋದಿ 'ಮನ್ ಕಿ ಬಾತ್'ನಲ್ಲಿ ಉತ್ತರಾಖಂಡ ಮೂಲದ ಮೈಸೂರಿನ ವಿಶೇಷಚೇತನ ವಿದ್ಯಾರ್ಥಿನಿ ಕಲ್ಪನಾ ಹಾಗೂ ಆಕೆಗೆ ಆಸರೆಯಾದ ಪ್ರೊ.ತಾರಾಮೂರ್ತಿ ಅವರನ್ನು ಪ್ರಶಂಸಿಸುವ ಮುಖೇನ ದೇಶದ ಭಾಷೆ, ಲಿಪಿ, ಸಂಸ್ಕೃತಿ ವೈವಿಧ್ಯತೆ ಬಗ್ಗೆ ಮಾತನಾಡಿದರು.



ರೇಡಿಯೋದಲ್ಲಿ ಭಾನುವಾರ ಪ್ರಸಾರವಾದ ಮನ್ ಕಿ ಬಾತ್ ಕಾರ್ಯಕ್ರಮದ 89ನೇ ಎಪಿಸೋಡ್‌ನಲ್ಲಿ ಪ್ರಧಾನಿ ಮೋದಿ, ಹಲವಾರು ಭಾಷೆ, ಲಿಪಿ, ಉಪಭಾಷೆ (ಆಡು ಭಾಷೆ)ಗಳ ಸಂಪತ್ತನ್ನು ಭಾರತ ಹೊಂದಿದೆ. ವಿವಿಧ ಪ್ರದೇಶದಲ್ಲಿ ವಿಭಿನ್ನ ರೀತಿಯ ಉಡುಗೆ-ತೊಡುಗೆ, ಆಹಾರ ಪದ್ಧತಿ, ಸಂಸ್ಕೃತಿ ಹಾಸುಹೊಕ್ಕಾಗಿದೆ. ಇದು ನಮ್ಮ ದೇಶದ ಹೆಗ್ಗುರುತು ಹಾಗೂ ವಿವಿಧತೆಯಲ್ಲಿ ಏಕತೆಯ ಪ್ರತೀಕ. ಈ ವೈವಿಧ್ಯತೆ ನಮ್ಮನ್ನು ಸಶಕ್ತಗೊಳಿಸುವುದರ ಜೊತೆಗೆ ಎಲ್ಲರನ್ನೂ ಒಂದುಗೂಡಿಸುತ್ತದೆ ಎಂದರು.



ಕಲ್ಪನಾ

ಇದಕ್ಕೆ ಪೂರಕವಾಗಿ ನಮ್ಮ ದೇಶದ ಮಗಳು ಕಲ್ಪನಾಳ ಪ್ರೇರಣಾತ್ಮಕ ಉದಾಹರಣೆಯನ್ನು ನಿಮ್ಮ ಮುಂದೆ ಪ್ರಸ್ತುತಪಡಿಸುತ್ತೇನೆ. ಅವರ ಒಂದು ಪ್ರಯತ್ನ 'ಏಕ್ ಭಾರತ್-ಶ್ರೇಷ್ಠ ಭಾರತ್' ▶ 8ನೇ ಪುಟಕ್ಕೆ

ತುಂಬಾ ಆಶ್ಚರ್ಯವಾಯಿತು...



ನಾನು ಏನು ಹೇಳಲಿ, ಇದು ನಿಜಕ್ಕೂ ಆಶ್ಚರ್ಯಕರ ಸಂಗತಿ. ಈ ವಿಚಾರ ಪ್ರಧಾನಿಯವರ 'ಮನ್ ಕಿ ಬಾತ್'ವರೆಗೂ ತಲುಪುತ್ತದೆ ಎಂಬ ನಿರೀಕ್ಷೆಯೂ ಇರಲಿಲ್ಲ. ಇದರಿಂದ ಆ ಮಗುವಿನ ಶಿಕ್ಷಣ ಹಾಗೂ ಭವಿಷ್ಯಕ್ಕೆ ಬೇರೆಯವರೂ ಸಹಾಯ ಮಾಡಲು ಅವಕಾಶವಾಗಬಹುದು ಎನ್ನುವುದು ಖುಷಿಯ ವಿಚಾರ. ತಾರಾಮೂರ್ತಿ ಅವರು ಕಲ್ಪನಾಳನ್ನು ಪ್ರೋತ್ಸಾಹಿಸಿ, ಆಕೆಗೆ ಸಹಾಯ ಮಾಡುತ್ತಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿಯವರು ಹೇಳಿದ್ದನ್ನು ಕೇಳಿ ಖುಷಿ ಆಯಿತು. ನನಗೆ ಪ್ರಚಾರದ ಅಗತ್ಯವಿರಲಿಲ್ಲ. ಕಲ್ಪನಾಳ ಬಗ್ಗೆ ಮೊದಲು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್'ನಲ್ಲಿ ನಂತರ ಬೇರೆ ಪತ್ರಿಕೆಗಳಲ್ಲೂ ವರದಿ ಪ್ರಕಟವಾಯಿತು. ಒಟ್ಟಾರೆ ಕಲ್ಪನಾಳಿಗೆ ಅನುಕೂಲವಾದರೆ ಅಷ್ಟೇ ಸಾಕು.

–ಪ್ರೊ. ತಾರಾಮೂರ್ತಿ, ಮೈಸೂರು

ವಿಧಾನಸಭೆಯಿಂದ ರಾಜ್ಯಸಭೆಗೆ ಚುನಾವಣೆ ಬಿಜೆಪಿಯಿಂದ ನಿರ್ಮಲಾ ಸೀತಾರಾಮನ್, ನಟ ಜಗ್ಗೇಶ್, ಕಾಂಗ್ರೆಸ್‌ನಿಂದ ಜೈರಾಂ ರಮೇಶ್ ಅಭ್ಯರ್ಥಿಗಳು

ಬೆಂಗಳೂರು,ಮೇ 29–ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಜೂ.10ರಂದು ನಡೆಯಲಿರುವ ಚುನಾವಣೆಗೆ ಬಿಜೆಪಿ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಮಾಜಿ ಶಾಸಕರೂ ಆದ ನಟ ಜಗ್ಗೇಶ್ ಅವರ ಹೆಸರನ್ನು ಪ್ರಕಟಿಸಿದೆ.



ನಿರ್ಮಲಾ ಸೀತಾರಾಮನ್



ನಟ ಜಗ್ಗೇಶ್



ಜೈರಾಂ ರಮೇಶ್

ವಿಧಾನಸಭಾ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಬಿಜೆಪಿ ಎರಡು ಸ್ಥಾನಗಳನ್ನು ಸುಲಭವಾಗಿ ಗೆಲ್ಲಬಹುದಾಗಿದ್ದು, ಈ ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದೆ. ಉಳಿದ ಎರಡು ಸ್ಥಾನಗಳ ಪೈಕಿ ಒಂದು ಸ್ಥಾನವನ್ನು ಕಾಂಗ್ರೆಸ್ ಸುಲಭವಾಗಿ ಗೆಲ್ಲಲಿದೆ. ಮತ್ತೊಂದು ಸ್ಥಾನವನ್ನು ಯಾವುದೇ ಪಕ್ಷ ಪಡೆಯಬೇಕಾದರೂ ಅದಕ್ಕೆ ಜೆಡಿಎಸ್ ಬೆಂಬಲ ಅತ್ಯಗತ್ಯ. ಬಿಜೆಪಿ ತನ್ನ ಪಾಲಿನ ಇಬ್ಬರು ಅಭ್ಯರ್ಥಿಗಳನ್ನು ಘೋಷಿಸಿದ್ದು, ಕಾಂಗ್ರೆಸ್ ತನ್ನ ಪಾಲಿನ ಒಂದು ಸ್ಥಾನದ ಜೊತೆಗೆ ಮತ್ತೊಂದು ಸ್ಥಾನಕ್ಕಾಗಿ ಜೆಡಿಎಸ್ ಅನ್ನು ಅವಲಂಬಿಸಬೇಕಾಗಿದೆ. ಒಂದು ವೇಳೆ ಜೆಡಿಎಸ್ ಅಭ್ಯರ್ಥಿಯನ್ನು ಕಣಕ್ಕಿಳಿಸಿದರೆ, ಆ ಪಕ್ಷಕ್ಕೆ ಕಾಂಗ್ರೆಸ್ ಅಥವಾ ಬಿಜೆಪಿ ಬೆಂಬಲ ಬೇಕಾಗುತ್ತದೆ. ಕಳೆದ ಬಾರಿ ನಡೆದ ಚುನಾವಣೆಯಲ್ಲಿ ನಿರ್ಮಲಾ ಸೀತಾರಾಮನ್, ಕೆ.ಸಿ.ರಾಮಮೂರ್ತಿ, ಜೈರಾಂ ರಮೇಶ್ ಮತ್ತು ಆಸ್ಕರ್ ಫರ್ನಾಂಡಿಸ್ ಆಯ್ಕೆಯಾಗಿದ್ದರು. ಆಸ್ಕರ್ ಫರ್ನಾಂಡಿಸ್ ಅವರು ನಿಧನರಾಗಿದ್ದು, ಉಳಿದ ಮೂವರ ಅವಧಿ ಜೂ.30ಕ್ಕೆ ಮುಕ್ತಾಯಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಚುನಾವಣಾ ಆಯೋಗವು ಜೂ.10ಕ್ಕೆ ಚುನಾವಣೆ ಘೋಷಿಸಿದೆ.

ಮೇ 24ರಂದೇ ಚುನಾವಣಾ ಆಯೋಗ ಅಧಿಸೂಚನೆ ಹೊರಡಿಸಲಾಗಿದ್ದು, ಮೇ 31ಕ್ಕೆ ನಾಮಪತ್ರ ಸಲ್ಲಿಸಲು ಕೊನೇ ದಿನ. ಜೂನ್ 3ಕ್ಕೆ ನಾಮಪತ್ರ ಹಿಂಪಡೆಯಲು ಕೊನೇ ದಿನವಾಗಿದ್ದು, ನಾಲ್ವರಿಗಿಂತ ಹೆಚ್ಚು ಅಭ್ಯರ್ಥಿಗಳು ಸ್ಪರ್ಧೆಗಿಳಿದರೆ, ಜೂನ್ 10ಕ್ಕೆ ಚುನಾವಣೆ ನಡೆಯಲಿದೆ. ನಟ ಜಗ್ಗೇಶ್ ಅವರು ಈ ಹಿಂದೆ ತುರುವೇಕೆರೆ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ▶ 8ನೇ ಪುಟಕ್ಕೆ

ಯುನಿಕಾರ್ನ್ ಮೂಲಕ 25 ಲಕ್ಷ ಕೋಟಿಗೂ ಹೆಚ್ಚು ಹಣ ಸಂಗ್ರಹ

ನವದೆಹಲಿ, ಮೇ 29– ಇದೇ ತಿಂಗಳ 5ರಂದು ದೇಶದಲ್ಲಿ ಯುನಿಕಾರ್ನ್ ಕಂಪನಿಗಳ ಸಂಖ್ಯೆ 100ರ ಗಡಿ ತಲುಪಿದ್ದು, ಯುನಿಕಾರ್ನ್ ಮೂಲಕ 25 ಲಕ್ಷ ಕೋಟಿ ರೂಪಾಯಿಗೂ ಹೆಚ್ಚು ಹಣ ಸಂಗ್ರಹಿಸಲಾಗಿದೆ. ಇದು ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆಯ ವಿಷಯ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಪ್ರಧಾನಿ ಮೋದಿ 'ಮನ್ ಕಿ ಬಾತ್' ಕಾರ್ಯಕ್ರಮದ ಮೂಲಕ ದೇಶವನ್ನುದ್ದೇಶಿಸಿ ಮಾತನಾಡಿದ್ದು, ಕೆಲ ದಿನಗಳ ಹಿಂದಷ್ಟೇ ದೇಶ ನಮಗೆಲ್ಲರಿಗೂ ಸ್ಫೂರ್ತಿ ನೀಡುವಂತಹ ಸಾಧನೆ ಮಾಡಿದೆ. ಕ್ರಿಕೆಟ್ ಮೈದಾನದಲ್ಲಿ ಶತಕದ ಬಗ್ಗೆ ಕೇಳುತ್ತಲೇ ಇರುತ್ತೀರಿ. ಇನ್ನೊಂದು ಮೈದಾನದಲ್ಲಿ ಭಾರತ ಶತಕ ಬಾರಿಸಿದೆ. ಇದು ತುಂಬಾ ವಿಶೇಷವಾಗಿದೆ. ಇದೇ ತಿಂಗಳ 5ರಂದು ದೇಶದಲ್ಲಿ ಯುನಿಕಾರ್ನ್ ಕಂಪನಿಗಳ ಸಂಖ್ಯೆ 100ರ ಗಡಿ ತಲುಪಿದೆ ಎಂದರು.

ನಮ್ಮ ಒಟ್ಟು ಯುನಿಕಾರ್ನ್‌ಗಳ ಪೈಕಿ 44 ಕಳೆದ ವರ್ಷವೇ ಮಾಡಲಾಗಿತ್ತು. ಈ ವರ್ಷ ಮೂರ್ನಾಲ್ಕು ತಿಂಗಳಲ್ಲಿ ಇನ್ನೂ 14 ಯುನಿಕಾರ್ನ್‌ಗಳನ್ನು ತಯಾರಿಸಲಾಗಿದೆ. ಭಾರತ ಮತ್ತೊಂದು ಪ್ರದೇಶದಲ್ಲಿ ಶತಕ ಬಾರಿಸಿದ್ದು ಸಾಕಷ್ಟು ವಿಶಿಷ್ಟವಾಗಿದೆ. ಪ್ರಸ್ತುತ, ಈ ಯುನಿಕಾರ್ನ್‌ಗಳ ಒಟ್ಟು ಮೌಲ್ಯವು ಸುಮಾರು 330 ಶತಕೋಟಿ ಡಾಲರ್‌ಗಳಾಗಿದ್ದರೆ, ಪ್ರತಿ ಯುನಿಕಾರ್ನ್‌ನ ಮೌಲ್ಯವು 7,500 ಕೋಟಿ ರೂ.ಗಳಾಗಿದೆ. ನಮ್ಮ ಸ್ಟಾರ್ಟ್‌ಅಪ್‌ಗಳು ಕೊರೊನಾ ಅವಧಿಯಲ್ಲಿಯೂ ಸಂಪತ್ತು ಮತ್ತು ಮೌಲ್ಯಗಳಿಸುವುದನ್ನು ಮುಂದುವರೆಸಿದವು. ದೇಶದಲ್ಲಿ ಸ್ಟಾರ್ಟ್‌ಅಪ್‌ಗಳಿಗೆ ಅನುಕೂಲಕರ ವಾತಾವರಣವಿದೆ. ದೊಡ್ಡ ಮಹಾನಗರಗಳಷ್ಟೇ ಅಲ್ಲ, ಸಣ್ಣ ಪಟ್ಟಣಗಳಲ್ಲೂ ಸ್ಟಾರ್ಟಪ್‌ಗಳು ರೂಪುಗೊಳ್ಳುತ್ತಿವೆ ಎಂದು ಹೇಳಿದರು.

ಜೊಹೊ ಕಾರ್ಪೊರೇಷನ್‌ನ ಸಿಇಒ ಶ್ರೀಧರ್ ವೆಂಬು ಅವರನ್ನು ಪ್ರಧಾನಿ ಮೋದಿ ಶ್ಲಾಘಿಸಿದರು. "ಸ್ಟಾರ್ಟ್‌ಅಪ್‌ಗಳ ವಿಷಯಕ್ಕೆ ಬಂದಾಗ ಸರಿಯಾದ ಮಾರ್ಗದರ್ಶನ ▶ 8ನೇ ಪುಟಕ್ಕೆ

ಇಂದು ಪಿಎಂ ಕೇರ್ಸ್ ಯೋಜನೆ ಬಿಡುಗಡೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ನಾಳೆ ಮಕ್ಕಳಿಗಾಗಿ ಪಿಎಂ ಕೇರ್ಸ್ ಯೋಜನೆಗಳನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಬಿಡುಗಡೆ ಮಾಡಲಿದ್ದಾರೆ ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಹೇಳಿದೆ. ಕೋವಿಡ್–19 ಸಾಂಕ್ರಾಮಿಕದಿಂದ ತಂದೆ-ತಾಯಿ, ಪೋಷಕರು, ದತ್ತು ಪೋಷಕರನ್ನು ಕಳೆದುಕೊಂಡ ಮಕ್ಕಳಿಗೆ ಬೆಂಬಲ ನೀಡುವ ಸಲುವಾಗಿ ಕಳೆದ ವರ್ಷ ಮೇ 29ರಂದು ಸರ್ಕಾರ ಯೋಜನೆ ಆರಂಭಿಸಿದ್ದು, ಶಾಲೆಗೆ ಹೋಗುವ ಮಕ್ಕಳಿಗೆ ಮೋದಿ ಸ್ಕಾಲರ್‌ಶಿಪ್ ವರ್ಗಾವಣೆ ಮಾಡಲಿದ್ದಾರೆ.

ಮಕ್ಕಳಿಗಾಗಿ ಪಿಎಂ ಕೇರ್ಸ್ ಯೋಜನೆ ಅಡಿಯಲ್ಲಿ ಪಾಸ್ ಬುಕ್, ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಅಡಿಯಲ್ಲಿ ಹೆಲ್ತ್ ಕಾರ್ಡ್‌ಗಳನ್ನು ಕೂಡಾ ಅವರಿಗೆ ನೀಡಲಾಗುವುದು. ವರ್ಚುಯಲ್ ಮಾದರಿಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪೋಷಕರೊಂದಿಗೆ ಮಕ್ಕಳು, ಸಂಬಂಧಿತ ಜಿಲ್ಲಾಧಿಕಾರಿಗಳು, ಸಚಿವರು, ಸಂಸದರು, ಶಾಸಕರು ಪಾಲ್ಗೊಳ್ಳಲಿದ್ದಾರೆ ಎಂದು ಸಚಿವಾಲಯದ ಪ್ರಕಟಣೆ ಹೇಳಿದೆ.

15ನೇ ಆವೃತ್ತಿ ಇಂಡಿಯನ್ ಪ್ರೀಮಿಯರ್ ಲೀಗ್‌ಗೆ ವರ್ಣರಂಜಿತ ತೆರೆ

ಪಾದಾರ್ಪಣೆ ಆವೃತ್ತಿಯಲ್ಲೇ ಗುಜರಾತ್ ಚಾಂಪಿಯನ್



ಅಹಮದಾಬಾದ್, ಮೇ 29– ರೋಚಕ ಫೈನಲ್ ಕದನದಲ್ಲಿ ಭರ್ಜರಿ ಜಯ ಗಳಿಸುವ ಮೂಲಕ ಗುಜರಾತ್ ಟೈಟಾನ್ಸ್ ಚೊಚ್ಚಲ ಹಾಗೂ ಪಾದಾರ್ಪಣೆ ಆವೃತ್ತಿಯಲ್ಲೇ ಐಪಿಎಲ್ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಈ ಮೂಲಕ ಗುಜರಾತ್ ಟೈಟಾನ್ಸ್ ಐಪಿಎಲ್ ಟ್ರೋಫಿಯೊಂದಿಗೆ 20 ಕೋಟಿ ರೂ. ನಗದು ಬಹುಮಾನವನ್ನು ತನ್ನದಾಗಿಸಿಕೊಂಡರೇ, ರಾಜಸ್ಥಾನ್ ರಾಯಲ್ಸ್ ಟ್ರೋಫಿ ಹಾಗೂ 12.5 ಕೋಟಿ ರೂ. ನಗದು ಬಹುಮಾನದೊಂದಿಗೆ ರನ್ನರ್ಸ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟಿದೆ. ಇದರೊಂದಿಗೆ ಕಳೆದ 2 ತಿಂಗಳಿಂದ ಕ್ರಿಕೆಟ್ ಅಭಿಮಾನಿಗಳಿಗೆ ಬೌಂಡರಿ, ಸಿಕ್ಸರ್‌ಗಳ ಮೂಲಕ ರಸದೌತಣ ನೀಡಿದ 15ನೇ ಆವೃತ್ತಿಯ ಇಂಡಿಯನ್ ಪ್ರೀಮಿಯರ್ ಲೀಗ್(ಐಪಿಎಲ್)ಗೆ ವರ್ಣರಂಜಿತ ತೆರೆಬಿದ್ದಿದೆ. ಮತ್ತೊಂದೆಡೆ ಗುಜರಾತ್ ತಾವಾಡಿದ ಮೊದಲ ಸೀಸನ್‌ನಲ್ಲೇ ಟ್ರೋಫಿ ಗೆದ್ದ ಸಾಧನೆ ಮಾಡಿದ್ದ ರಾಜಸ್ಥಾನ್ ರಾಯಲ್ಸ್ ದಾಖಲೆ ▶ 5ನೇ ಪುಟಕ್ಕೆ

ಮಂಡ್ಯ ಕಲಾವಿದರ ಕಲರವ

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ 15ನೇ ಆವೃತ್ತಿಯ ಐಪಿಎಲ್ ಸಮಾರೋಪದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಂಡ್ಯ ಜಿಲ್ಲೆಯ ಜಾನಪದ ಕಲಾವಿದರ ತಂಡ ಪಾಲ್ಗೊಂಡು ಮೆರಗು ನೀಡಿತು. ಜಿಲ್ಲೆಯ ಚಿಕ್ಕರಸಿನಕೆರೆ, ಚಿಕ್ಕಬೋರಯ್ಯ, ಸಂತೆ ಕಸಲಗೆರೆ ಬಸವರಾಜು ನೇತೃತ್ವದ ಜಾನಪದ ಕಲಾ ತಂಡ ಪೂಜಾ ಕುಣಿತ, ಡೊಳ್ಳು ಕುಣಿತ, ವೀರಗಾಸೆ, ಚರ್ಮ ವಾದ್ಯಗಳ ಪ್ರದರ್ಶನ ನೀಡಿ ನೆರೆದ ಪ್ರೇಕ್ಷಕರನ್ನು ರಂಜಿಸಿದರು.

ಹೈದರಾಬಾದ್‌ನ ಮೂವರು ಪ್ರವಾಸಿಗರು ಕೊಡಗಿನ ಕೋಟೆ ಅಬ್ಬಿ ಜಲಪಾತದಲ್ಲಿ ನೀರು ಪಾಲು


ಮಡಿಕೇರಿ, ಮೇ 29(ಪಿ.ಎಸ್)– ಕೊಡಗಿಗೆ ಪ್ರವಾಸ ಬಂದಿದ್ದ ಹೈದರಾಬಾದ್ ಮೂಲದ ಮೂವರು ಮುಕ್ಕೋಡ್ಲು ಸಮೀಪದ ಕೋಟೆ ಅಬ್ಬಿ ಜಲಪಾತದಲ್ಲಿ ಮುಳುಗಿ ಮೃತಪಟ್ಟ ಘಟನೆ ಭಾನುವಾರ ಮಧ್ಯಾಹ್ನ ನಡೆದಿದೆ.



ಹೈದರಾಬಾದ್ ಮೂಲದ ಶ್ಯಾಮ (36), ಶಾಹೀಂದ್ರ(16) ಮತ್ತು ಶ್ರೀಹರ್ಷ(18) ಮೃತ ಪಟ್ಟವರಾಗಿದ್ದಾರೆ. ಅಗ್ನಿಶಾಮಕ ದಳದ ಸಿಬ್ಬಂದಿ ಮೃತದೇಹಗಳನ್ನು ನೀರಿನಿಂದ ಹೊರ ತೆಗೆದಿದ್ದು, ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಘಟನೆ ಹಿನ್ನೆಲೆ: ಹೈದರಾಬಾದ್ ಮೂಲದ 13 ಮಂದಿ ಶನಿವಾರ ಕೊಡಗಿಗೆ ಪ್ರವಾಸಕ್ಕೆ ಬಂದಿದ್ದು, ಕುಶಾಲನಗರದ ಹೋಂ ಸ್ಟೇ ಒಂದರಲ್ಲಿ ತಂಗಿದ್ದರು. ಭಾನುವಾರ ಮಾಂದಲ್‌ಪಟ್ಟಿಗೆ ತೆರಳಿದ್ದ ಈ ಪ್ರವಾಸಿಗರ ತಂಡ, ಬಳಿಕ ಮುಕ್ಕೋಡ್ಲು ಬಳಿಯ ಕೋಟೆ ಅಬ್ಬಿ ಜಲಪಾತ ನೋಡಲು ತೆರಳಿದ್ದಾರೆ. ಈ ವೇಳೆ ಕೆಲವರು ಅಲ್ಲಿನ ಜಲಪಾತದ ಕಲ್ಲುಗಳ ಮೇಲೆ ಕುಳಿತ್ತಿದ್ದರು ಎನ್ನಲಾಗಿದ್ದು, ಈ ವೇಳೆ ಓರ್ವ ಕಾಲುಜಾರಿ ನೀರಿಗೆ ಬಿದ್ದಿದ್ದು, ರಕ್ಷಣೆಗಾಗಿ ಕೂಗಿದ್ದಾನೆ. ಆತನನ್ನು ರಕ್ಷಿಸಲು ಮತ್ತಿಬ್ಬರು ನೀರಿಗಿಳಿದಾಗ ಅವರೂ ಕೂಡ ನೀರಿನ ಸೆಳೆತಕ್ಕೆ ಸಿಲುಕಿ ಮುಳುಗಿ ಮೃತಪಟ್ಟಿದ್ದಾರೆ.

ವಿಷಯ ತಿಳಿದ ಅಗ್ನಿಶಾಮಕ ದಳದ ಸಿಬ್ಬಂದಿ ಘಟನಾ ಸ್ಥಳಕ್ಕೆ ತೆರಳಿ ಕಾರ್ಯಾಚರಣೆ ನಡೆಸಿ 3 ಮಂದಿಯ ಮೃತದೇಹಗಳನ್ನು ಹೊರ ತೆಗೆದಿದ್ದಾರೆ. ಮಡಿಕೇರಿ ಗ್ರಾಮಾಂತರ ಪೊಲೀಸರು ಸ್ಥಳ ಮಹಜರು ನಡೆಸಿ ಮೃತದೇಹಗಳನ್ನು ಮಡಿಕೇರಿ ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಿದರು. ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಚೀರ ಅಯ್ಯಪ್ಪ ಭೇಟಿ ನೀಡಿ ಘಟನೆಯ ಬಗ್ಗೆ ಮಾಹಿತಿ ಪಡೆದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಎಸ್.ಪಿ. ಅಯ್ಯಪ್ಪ, ಈ ಮೂರು ಮಂದಿಗೂ ಈಜು ಬಾರದ ಹಿನ್ನೆಲೆಯಲ್ಲಿ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಮೃತದೇಹಗಳ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಹಸ್ತಾಂತರ ಮಾಡುವುದಾಗಿ ಮಾಹಿತಿ ನೀಡಿದರು.



ಒಂದೆಡೆ ಅಂತಾರಾಷ್ಟ್ರೀಯ ಯೋಗಕ್ಕೆ ಸಿದ್ಧತೆ, ಮತ್ತೊಂದೆಡೆ ಕಸದ ರಾಶಿಯ ಸ್ವಾಗತ

ಮೈಸೂರು ಲಲಿತಮಹಲ್ ರಸ್ತೆ ಸುತ್ತ-ಮುತ್ತ ಕಸವೋ ಕಸ

●ಪಾಲಿಕೆಯಿಂದಲೇ ಕಸ ತಂದು ಸುರಿಯುತ್ತಿರುವ ಆರೋಪ ●ದೂರು ನೀಡಿದರೂ ತಲೆ ಕೆಡಿಸಿಕೊಳ್ಳದ ಅಧಿಕಾರಿಗಳು ●ಪ್ರವಾಸಿಗರಿಗೂ ಮುಜುಗರ ತಂದ ಕಸದ ರಾಶಿ

ಮೈಸೂರು, ಮೇ 29(ಎಂಟಿವೈ)– ಸಾಂಸ್ಕೃತಿಕ ನಗರಿ ಹಾಗೂ ಸ್ವಚ್ಛನಗರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ 'ಮೈಸೂರು'ನಗರದಲ್ಲಿ ಅಂತರರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳುವ ದಿನ ಸಮೀಪಿಸುತ್ತಿದ್ದು, ಮೈಸೂರಿನ ಹೊರ ವಲಯದಲ್ಲಿ ಬಿದ್ದಿರುವ ಕಸದ ರಾಶಿ ಸುಂದರ ನಗರಿಯನ್ನು ಅಣಕಿಸುವಂತಿದೆ.

ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಲಲಿತಾದ್ರಿಪುರದ ರಸ್ತೆ, ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಸಮೀಪ ರಸ್ತೆ ಬದಿ, ಪೃಥ್ವಿ ಲೇಔಟ್, ಮೈಸೂರು-ಬನ್ನೂರು ಮುಖ್ಯ ರಸ್ತೆಯ ದೇವೇಗೌಡ ಸರ್ಕಲ್ ಬಳಿ, ಜೆ.ಪಿ.ನಗರ ರೈಲ್ವೆ ಹಳಿ, ನರ್ಮ್ ಯೋಜನೆಯ ವಸತಿ ಸಮುಚ್ಛಯದ ಬಳಿ, ಮೈಸೂರು-ತಿ.ನರಸೀಪುರ ರಸ್ತೆಯ ಆಲನಹಳ್ಳಿ ಬಳಿ, ಸಾತಗಳ್ಳಿ ಬಸ್ ನಿಲ್ದಾಣದ ಸಮೀಪವಿರುವ ಖಾಲಿ ಮೈದಾನ ಸೇರಿದಂತೆ ವಿವಿಧೆಡೆ ಕಸದ ರಾಶಿಯೇ ಬಿದ್ದಿದ್ದು, ಯೋಗ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮೈಸೂರಿಗೆ ಬರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕಸದ ರಾಶಿಯೇ ಸ್ವಾಗತ ಕೋರುವಂತೆ ಭಾಸವಾಗುತ್ತಿದೆ.

ಅದರಲ್ಲೂ ಮೈಸೂರಿನ ಪ್ರಮುಖ ಧಾರ್ಮಿಕ ಹಾಗೂ ಪ್ರವಾಸಿ ಕೇಂದ್ರವಾಗಿರುವ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಲಲಿತಾದ್ರಿಪುರದ ರಸ್ತೆ ಕಸದ ರಾಶಿಯಿಂದ ದುರ್ನಾತ ಬೀರುತ್ತಿದೆ. ಲಲಿತಾದ್ರಿಪುರದ ರಸ್ತೆಯಲ್ಲಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಸಮೀಪ ಕಸದ ರಾಶಿ, ಪ್ಲಾಸ್ಟಿಕ್



ಕವರ್ ಸೇರಿದಂತೆ ನಿರುಪಯುಕ್ತ ವಸ್ತುಗಳ ರಾಶಿಯೇ ಬಿದ್ದಿರುವುದು ಅಸಹ್ಯ ತರಿಸುತ್ತಿದೆ.

ಪಾಲಿಕೆಯಿಂದಲೇ ಕಸದ ರಾಶಿ: ಲಲಿತಾದ್ರಿಪುರ ರಸ್ತೆಯಲ್ಲಿರುವ ಪೃಥ್ವಿ ಲೇಔಟ್ ಹಾಗೂ ಸುತ್ತಮುತ್ತಲಿನ ಲೇಔಟ್‌ಗಳಲ್ಲಿನ ನಿವೇಶನದಾರರು ಮನೆ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಆದರೆ ಲೇಔಟ್‌ಗೆ ಸೇರಿದ ಖಾಲಿ ಜಾಗದಲ್ಲಿ ಮೈಸೂರು ಮಹಾನಗರ ಪಾಲಿಕೆಯ ವಾಹನಗಳಿಂದಲೇ ಕಸವನ್ನು ತುಂಬಿಕೊಂಡು ಬಂದು ಸುರಿಯಲಾಗುತ್ತಿದೆ. ಇದರಿಂದ ಪ್ರೇರಿತರಾದ ಸುತ್ತಮುತ್ತಲಿನ ಬಡಾವಣೆಯ ನಿವಾಸಿಗಳು ಕಾರು ಹಾಗೂ ಬೈಕ್‌ಗಳಲ್ಲಿ ಬಂದು ಕಸದ ಪೊಟ್ಟಣವನ್ನು ಎಸೆದು ಹೋಗುತ್ತಿದ್ದಾರೆ.

ರಿಂಗ್ ರಸ್ತೆ ಬದಿ ಸ್ವಚ್ಛಗೊಳಿಸಲಿ: ಮೈಸೂರು ರಕ್ಷಣಾ ವೇದಿಕೆಯ ಎಂ.ಎಸ್.ಗುರುರಾಜ ಶೆಟ್ಟಿ ಮಾತನಾಡಿ, ಈ ಹಿಂದೆ ಮೈಸೂರಿಗೆ ಸ್ವಚ್ಛ ನಗರಿ ಎಂಬ ಬಿರುದು ಬಂದಿತ್ತು. ಈ ಸಾಲಿನ ಸ್ವಚ್ಛ ಸರ್ವೇಕ್ಷಣೆ ಚಟುವಟಿಕೆ ಆರಂಭವಾಗುವ ಸಂದರ್ಭದಲ್ಲೇ ಮೈಸೂರಿಗೆ ಪ್ರವೇಶ ಪಡೆಯುವ ಎಲ್ಲಾ ರಸ್ತೆಗಳ ಜಂಕ್ಷನ್‌ಗಳಲ್ಲಿ ಕಸದ ರಾಶಿ ಪ್ರವಾಸಿಗರನ್ನು ಸ್ವಾಗತಿಸುವಂತಹ ದುಸ್ಥಿತಿ ಎದುರಾಗಿದೆ. ಮೈಸೂರು ಬನ್ನೂರು ರಸ್ತೆ, ಮೈಸೂರು ನರಸೀಪುರ ▶ 8ನೇ ಪುಟಕ್ಕೆ

ಇದೇನಾ ಬೃಹತ್ ಮೈಸೂರು, ಗ್ರೇಟರ್ ಮೈಸೂರು?

ಪೃಥ್ವಿ ಲೇಔಟ್, ಲಲಿತಾದ್ರಿಪುರ ರಸ್ತೆ ಸುತ್ತಮುತ್ತಲಿನ ಪ್ರದೇಶದಲ್ಲಿ ಮೈಸೂರು ನಗರ ಪಾಲಿಕೆ ಕಸ ಸಾಗಿಸುವ ವಾಹನಗಳಿಂದಲೇ ಕಸ ತಂದು ಸುರಿಯುತ್ತಿರುವುದು ವಿಷಾದ. ಇದರೊಂದಿಗೆ ಕೆಲ ಬಡಾವಣೆ ಜನರು ತಮ್ಮ ಮನೆ ಕಸವನ್ನು ಕಾರು, ಬೈಕ್‌ಗಳಲ್ಲಿ ತಂದು ಬಿಸಾಡುತ್ತಿದ್ದಾರೆ. ಇದರಿಂದ ಇಲ್ಲಿನ ಪರಿಸರ ಹಾಳಾಗುತ್ತಿದೆ. ಬೃಹತ್ ಮೈಸೂರು, ಗ್ರೇಟರ್ ಮೈಸೂರು ಮಾಡಲು ಮುಂದಾಗಿರುವುದು ಯಾವ ಪುರುಷಾರ್ಥಕ್ಕೆ? ಹೊಸ ಬಡಾವಣೆಗಳಲ್ಲೇ ಪಾಲಿಕೆಯೇ ಕಸ ಸುರಿಯುತ್ತಿರುವುದು ಎಷ್ಟು ಸರಿ. ಪಾಲಿಕೆ ಸಿಬ್ಬಂದಿ ಕೇಳಿದರೆ, ಮುಡಾ ಅಧಿಕಾರಿಗಳನ್ನು ಕೇಳಿ ಎನ್ನುತ್ತಾರೆ. ಈ ಎರಡೂ ಸಂಸ್ಥೆಗಳ ಅಧಿಕಾರಿಗಳು ಸಮನ್ವಯತೆ ಕೊರತೆಯಿಂದ ಸ್ಥಳೀಯರು ಸಮಸ್ಯೆ ಎದುರಿಸುವಂತಾಗಿದೆ. ಅಧಿಕಾರಿಗಳಿಗೆ ಈಗಾಗಲೇ ಹಲವು ಬಾರಿ ದೂರು ನೀಡಿದರೂ ಕಸ ತಂದು ಸುರಿಯುತ್ತಲೇ ಇದ್ದಾರೆ. ಇದಲ್ಲದೆ ರಾತ್ರಿ ವೇಳೆ ಕಟ್ಟಡ ತ್ಯಾಜ್ಯ ಸುರಿಯಲಾಗುತ್ತಿದೆ. ಈ ರಾಶಿಯಿಂದ ದುರ್ನಾತ ಬೀರುತ್ತಿರುವುದರಿಂದ ಸ್ಥಳೀಯರು ಮಾತ್ರವಲ್ಲದೆ, ದಾರಿಹೋಕರು ಮೂಗು ಮುಚ್ಚಿಕೊಂಡು ಹೋಗುವಂತಾಗಿದೆ.


–ಸುಧಾಕರ್ ರೆಡ್ಡಿ, ಪೃಥ್ವಿ ಲೇಔಟ್ ನಿವಾಸಿ.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮಳೆ ಅವಾಂತರ: ಪರಿಹಾರ ಕಾಮಗಾರಿಗಳಿಗೆ 27.50 ಕೋಟಿ ರೂ. ಅನುದಾನ ನೀಡಿ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಶಾಸಕ ಜಿ.ಟಿ.ದೇವೇಗೌಡ ಮನವಿ ಸಲ್ಲಿಕೆ

ಮೈಸೂರು,ಮೇ 29–ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಭಾನುವಾರ ಬೆಂಗಳೂರಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿ, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಇತ್ತೀಚೆಗೆ ಸುರಿದ ಭಾರೀ ಮಳೆಯಿಂದ ಅಪಾರ ಹಾನಿ ಸಂಭವಿಸಿದ್ದು, ಪರಿಹಾರ ಕಾಮಗಾರಿಗಳಿಗೆ 27.50 ಕೋಟಿ ರೂ. ಅನುದಾನ ನೀಡುವಂತೆ ಮನವಿ ಮಾಡಿದರು.

ಕ್ಷೇತ್ರದ ಹಿನಕಲ್ ಕೆರೆ, ಬೋಗಾದಿ ಕೆರೆ, ಲಿಂಗಾಂಬುದಿ ಕೆರೆಗಳು ಸುಮಾರು 20 ವರ್ಷಗಳ ನಂತರ ಕೋಡಿ ಬಿದ್ದ ಪರಿಣಾಮ ಜನವಸತಿ ಪ್ರದೇಶಗಳು ಜಲಾವೃತಗೊಂಡು ಸಾರ್ವಜನಿಕರು ಅಪಾರ ಪ್ರಮಾಣದ ನಷ್ಟಕ್ಕೊಳಗಾಗಿದ್ದಾರೆ. ಸಾರ್ವಜನಿಕ ರಸ್ತೆ, ಸೇತುವೆ, ಚರಂಡಿಗಳು ತೀವ್ರವಾಗಿ ಹಾಳಾಗಿದ್ದು, ಸಂಸದರು, ಜಿಲ್ಲಾಧಿಕಾರಿಗಳು, ಪಾಲಿಕೆ ಆಯುಕ್ತರು, ಸಂಬಂಧಿಸಿದ ಇತರೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದ್ದಾರೆ. ಮುಂದಿನ ದಿನಗಳಲ್ಲಿ ಇಂತಹ ಘಟನೆ ಪುನರಾವರ್ತನೆಯಾಗದಂತೆ ತಡೆಯಲು ಪಾಲಿಕೆ ಆಯುಕ್ತರು ವಿವರವಾದ ಮಾಹಿತಿಗಳೊಂದಿಗೆ ಕಾಮಗಾರಿಗಳಿಗೆ 27.50 ಕೋಟಿ ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು, ಈ ಅನುದಾನವನ್ನು ಶೀಘ್ರ ಬಿಡುಗಡೆ ಮಾಡಬೇಕು ಎಂದು ಮನವಿ ಮಾಡಿದರು. ಶೀಘ್ರ ಅನುದಾನ ಬಿಡುಗಡೆ ಮಾಡಿದರೆ ತುರ್ತಾಗಿ ಕಾಮಗಾರಿಗಳನ್ನು ಕೈಗೊಳ್ಳಬಹುದು. ಇದರಿಂದ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಕೊಟ್ಟು ನೆರವಾಗಬಹುದಾಗಿದೆ ಎಂದು ಅವರು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದರು. ಇದಕ್ಕೆ ಸ್ಪಂದಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಜಿ.ಟಿ.ದೇವೇಗೌಡ ನಂತರ ಮಾಧ್ಯಮಗಳಿಗೆ ತಿಳಿಸಿದ್ದಾರೆ.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಶಾಸಕ ಜಿ.ಟಿ.ದೇವೇಗೌಡ ಮನವಿ ಸಲ್ಲಿಸುತ್ತಿರುವುದು.

ಕಳೆದ ವರ್ಷದ ಅಕ್ಟೋಬರ್, ನವೆಂಬರ್ ತಿಂಗಳಲ್ಲಿಯೂ ಸುರಿದ ಭಾರೀ ಮಳೆಯಿಂದ ಜನವಸತಿ ಪ್ರದೇಶಗಳಾದ ಬೋಗಾದಿ 2ನೇ ಹಂತ, ಸಿಎಫ್‌ಟಿಆರ್‌ಐ ಬಡಾವಣೆ, ಆನಂದನಗರ ಆಶ್ರಯ ಬಡಾವಣೆ, ಆನಂದ ಬಡಾವಣೆ, ಪ್ರೀತಿ ಬಡಾವಣೆ, ರಾಮಕೃಷ್ಣನಗರ, ದಟ್ಟಗಳ್ಳಿ, ಶಾರದಾದೇವಿನಗರ ಸೇರಿದಂತೆ ಹಲವು ಪ್ರದೇಶಗಳು ಜಲಾವೃತಗೊಂಡು ಈ ಪ್ರದೇಶದ ನಿವಾಸಿಗಳು ಅಪಾರ ಪ್ರಮಾಣದ ನಷ್ಟಕ್ಕೆ ಒಳಗಾಗಿದ್ದರು. ಆ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರು ಸಭೆ ನಡೆಸಿ, ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಳ್ಳಲು 138 ಕೋಟಿ ರೂ. ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು ಎಂದು ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಮುಂಬರುವ ಚುನಾವಣೆಯಲ್ಲಿ ಶೇ.60ರಷ್ಟು ಕ್ಷೇತ್ರಗಳಲ್ಲಿ ಲೋಕ್ ಶಕ್ತಿ ಪಕ್ಷ ಸ್ಪರ್ಧೆ



ಮೈಸೂರು,ಮೇ 29(ಪಿಎಂ)– ಗಗನ್ ಸಿನಿ ಕ್ರಿಯೇಷನ್ಸ್ ವತಿಯಿಂದ ನಿರ್ಮಿಸಿ, 'ಯು ಟ್ಯಾಬ್'ಗೆ ಅಪ್‌ಲೋಡ್ ಮಾಡಿರುವ 'ಗ್ಯಾಸ್ ಉಚಿತ, ಕ್ಯಾಶ್ ಖಚಿತ' 18 ನಿಮಿಷ ಅವಧಿಯ ಕಿರುಚಿತ್ರದ ಪೋಸ್ಟರ್ ಅನ್ನು ಭಾನುವಾರ ಬಿಡುಗಡೆ ಮಾಡಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಪೋಸ್ಟರ್ ಬಿಡುಗಡೆ ಮಾಡಿದರು. ಬಳಿಕ ಮಾತನಾಡಿದ ಅವರು, ಕಿರುಚಿತ್ರಗಳು ಇಂದು ಹೆಚ್ಚು ಪರಿಣಾಮಕಾರಿಯಾಗಿ ಪ್ರೇಕ್ಷಕರನ್ನು ತಲುಪುವಂತಾಗಿದೆ. ಇದನ್ನು ಬಳಸಿಕೊಂಡು ಜನಜಾಗೃತಿ ಮೂಡಿಸಬಹುದು. ಜೊತೆಗೆ ಸಾಮಾಜಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಲೋಕ್ ಶಕ್ತಿ ಪಕ್ಷದ ರಾಜ್ಯಾಧ್ಯಕ್ಷ ಚಂದ್ರಶೇಖರ ವಿ.ಸ್ವಾವಲಂಬಿ ಮಾಧ್ಯಮದವರ ಪ್ರಶ್ನೆಗಳಿಗೆ ಉತ್ತರಿಸಿ, ಪಕ್ಷದ ಚಟುವಟಿಕೆಗಳಿಗೆ ಪುನರ್ ಚಾಲನೆ ನೀಡಲಾಗಿದೆ. ಜಾತಿ ಮತ್ತು ಹಣ ಬಲದ ರಾಜಕೀಯ ದೂರ ಮಾಡುವ ಉದ್ದೇಶ ಹೊಂದಿದ್ದು, ನಮ್ಮದು ಕನ್ನಡದ ಅಸ್ಮಿತೆ ಇರುವ ಪಕ್ಷ ಎಂದರು.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಶೇ.60ರಷ್ಟು ಕ್ಷೇತ್ರಗಳಲ್ಲಿ ಪಕ್ಷ ಸ್ಪರ್ಧೆ ಮಾಡಲಿದೆ. ಜೊತೆಗೆ ಬಿಬಿಎಂಪಿ, ಜಿಪಂ ಮತ್ತು ತಾಪಂ ಚುನಾವಣೆಗಳಲ್ಲಿಯೂ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ ಎಂದರಲ್ಲದೆ, ಇಂದಿನ ರಾಜ್ಯ ಬಿಜೆಪಿ ಸರ್ಕಾರ ಓದುವ ಮಕ್ಕಳ ಮನಸ್ಸಿನಲ್ಲಿ ವಿಷಬೀಜ ಬಿತ್ತಲು ಮುಂದಾಗಿದೆ ಎಂದು ಆರೋಪಿಸಿದರು. ಕಿರುಚಿತ್ರದ ನಿರ್ದೇಶಕ ಎ.ಸಿ.ಪೂರ್ಣಚಂದ್ರ, ಮುಖಂಡರಾದ ಕೆ.ಮಲ್ಲು, ಡಾ.ವಿಜಯಕುಮಾರ್, ಅಂಕಪ್ಪ, ಶಿವಣ್ಣ ಮತ್ತಿತರರು ಹಾಜರಿದ್ದರು.

ಡಿಸಿ ಡಾ.ಬಗಾದಿ ಗೌತಮ್‌ರಿಗೆ ಇಂದು ಸನ್ಮಾನ



ಮೈಸೂರು, ಮೇ 29– ಮೈಸೂರು ನಗರ–ಕನ್ನಡಪರ ಸಂಘಟನೆಯ ನಾಗರಿಕ ಹಿತರಕ್ಷಣಾ ವೇದಿಕೆ 32ನೇ ವರ್ಷೋತ್ಸವ ಹಾಗೂ ಡಾ.ಪುನೀತ್ ರಾಜ್‌ಕುಮಾರ್ ಸವಿನೆನಪು ಕಾರ್ಯಕ್ರಮದ ಅಂಗವಾಗಿ ಮೈಸೂರಿನಲ್ಲಿ ಮೇ 30ರ ಸಂಜೆ 5 ಗಂಟೆಗೆ ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಅವರನ್ನು ಸನ್ಮಾನಿಸಲಾಗುತ್ತಿದೆ. ಸಮಾರಂಭದ ಮುಖ್ಯ ಅತಿಥಿಗಳಾಗಿ ಸಮಾಜ ಸೇವಕ ಡಾ. ಮಹೇಶ್ ಶೆಣೈ, ಯೂನಿಯನ್ ಲಾಗ್ ಉಪಾಧ್ಯಕ್ಷ ರಾಮಚಂದ್ರ ಅರಸ್, ಬ್ರಿಗೇಡ್ ಡೆವಲಪರ್ಸ್ ಡಾ.ರಾಜೇಂದ್ರ, ಸುಚೇಂದ್ರ, ಸಮಾಜ ಸೇವಕರಾದ ಮೋಹನ್, ಮಯೂರ್ ಉಪಸ್ಥಿತರಿರುವರು.

ನಾಳೆ ರಾಜಮಾತೆ ಅಹಲ್ಯಾಬಾಯಿ ಹೋಳ್ಕರ್ 297ನೇ ಜಯಂತ್ಯುತ್ಸವ

ಮೈಸೂರು,ಮೇ 29(ಪಿಎಂ)–ಶೆಫರ್ಡ್ ಇಂಡಿಯಾ ಇಂಟರ್‌ನ್ಯಾಷನಲ್ ವತಿಯಿಂದ ಮೇ 31ರಂದು ಭಾರತೀಯ ಅಸ್ಮಿತೆ ಕಾಶಿ ವಿಶ್ವನಾಥನ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ, ಅಪ್ರತಿಮ ಆಡಳಿತ ನೀಡಿದ ರಾಜಮಾತೆ ಅಹಲ್ಯಾಬಾಯಿ ಹೋಳ್ಕರ್ ಅವರ 297ನೇ ಜಯಂತ್ಯುತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಸಂಘಟನೆಯ ಜಿಲ್ಲಾಧ್ಯಕ್ಷ ಹೆಚ್.ಬೀರಪ್ಪ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಮುಕ್ತ ಗಂಗೋತ್ರಿಯ ಮುಕ್ತ ವಿವಿಯ ಕಾವೇರಿ ಸಭಾಂಗಣದಲ್ಲಿ ಅಂದು ಬೆಳಗ್ಗೆ 11 ಗಂಟೆಗೆ ಜಯಂತಿಯ ಉದ್ಘಾಟನೆ ನೆರವೇರಲಿದೆ ಮುಖ್ಯ ಅತಿಥಿಯಾಗಿ ಹರಿಯಾಣ ರಾಜ್ಯಪಾಲ ಬಂಡಾರು ದತ್ತಾತ್ರೇಯ ಪಾಲ್ಗೊಳ್ಳಲಿದ್ದಾರೆ ಸಂಘಟನೆಯ ಸಂಸ್ಥಾಪಕರೂ ಆದ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು. ಕುರುಬ ಸಮುದಾಯಕ್ಕೆ ಸೇರಿದ ಅಹಲ್ಯಾಬಾಯಿ ಹೋಳ್ಕರ್ ಮರಾಠರ ಸಂಸ್ಥಾನ ಮಾಲ್ವಾವನ್ನು ಆಳಿದ ರಾಣಿ. ರಾಷ್ಟ್ರದ ಇತಿಹಾಸದಲ್ಲಿ ಸಾಮ್ರಾಜ್ಯವನ್ನಾಳಿದ ರಾಜಮಾತೆಯರಲ್ಲಿ ಇವರು ಅಗ್ರಸ್ಥಾನ ಪಡೆದಿದ್ದಾರೆ. ದೇಶದ 12 ಕಡೆಗಳಲ್ಲಿ ಜ್ಯೋತಿರ್ಲಿಂಗದ ಜೀರ್ಣೋದ್ಧಾರಗೊಳಿಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಸೇರಿದಂತೆ ಸಮುದಾಯದ ಎಲ್ಲಾ ಹಿರಿಯ ನಾಯಕರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ ಎಂದು ತಿಳಿಸಿದರು.

ಅಧ್ಯಯನ ಪ್ರವಾಸ: ಜೂನ್‌ನಲ್ಲಿ ಎ.ಹೆಚ್.ವಿಶ್ವನಾಥ್ ಸೇರಿದಂತೆ ದೇಶದ 45 ಮಂದಿ ಸಮುದಾಯದ ನಾಯಕರು ವಿವಿಧ ದೇಶಗಳ ಕುರಿ ಸಾಕಾಣಿಕೆ ಸಮುದಾಯಗಳ ಕುರಿತು ಅಧ್ಯಯನಕ್ಕಾಗಿ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ಬೀರಪ್ಪ ತಿಳಿಸಿದರು. ಸಂಘಟನೆಯ ಜಿಲ್ಲಾ ಘಟಕದ ಪದಾಧಿಕಾರಿಗಳಾದ ಶಶಾಂಕ್, ವಿವನ್ ಈಶ್ವರ್, ಹರೀಶ್, ಚಂದ್ರು ಬಿ.ಕನಕ, ಅಭಿಷೇಕ್ ಶಿವಣ್ಣ, ವಿನೋದ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

ತತ್ವಜ್ಞಾನಿಗಳ ದಿನಾಚರಣೆ: ವಿವಿಧ ಕ್ಷೇತ್ರಗಳ ಸಾಧಕರಿಗೆ ಶ್ರೀ ಶಂಕರಾಚಾರ್ಯ ಸೇವಾ ರತ್ನ ಪ್ರಶಸ್ತಿ ಪ್ರದಾನ



ಮೈಸೂರು, ಮೇ 29(ಆರ್‌ಕೆಬಿ)– ಶ್ರೀ ಶಂಕರಾಚಾರ್ಯರ ಜಯಂತಿ ಹಾಗೂ ತತ್ವಜ್ಞಾನಿಗಳ ದಿನಾಚರಣೆ ಅಂಗವಾಗಿ ಕರ್ನಾಟಕ ಸೇನಾಪಡೆ ವತಿಯಿಂದ ಭಾನುವಾರ ವಿವಿಧ ಕ್ಷೇತ್ರಗಳ ಸಾಧಕರಿಗೆ ಶಂಕರಾಚಾರ್ಯ ಸೇವಾ ರತ್ನ ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಲಾಯಿತು.

ಮೈಸೂರಿನ ಗನ್‌ಹೌಸ್ ಬಳಿಯ ಶಂಕರಮಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಜೇಸುದಾನ್ (ರಾಜಕೀಯ), ಎಸ್.ಗಣೇಶ್‌ರಾವ್ (ಸಮಾಜ ಸೇವೆ), ಮಹೇಶ್ ಕಾಮತ್ (ಹೋಟೆಲ್ ಉದ್ಯಮ), ಟಿ.ಸುರೇಶ್ (ಸೇವೆ), ಉದಯ ಶಂಕರ್ (ಶಿಕ್ಷಣ), ಎಸ್.ವಾಣಿ (ಬರಹ), ರಾಘವೇಂದ್ರ ಸೇಠ್ (ವಾಣಿಜ್ಯ), ಮಡ್ಡೀಕೆರೆ ಗೋಪಾಲ್ (ಕನ್ನಡ ಸಾಹಿತ್ಯ) ಅವರಿಗೆ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಪ್ರಶಸ್ತಿ ಪ್ರದಾನ ಮಾಡಿದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ 45 ಮಂದಿ ವಿದ್ಯಾರ್ಥಿಗಳಿಗೆ ಅದರಲ್ಲೂ ವಿಶೇಷವಾಗಿ 625ಕ್ಕೆ 625 ಅಂಕ ಪಡೆದ ಇಬ್ಬರು ವಿದ್ಯಾರ್ಥಿಗಳಾದ ಯಶಸ್ವಿ ಅರಸ್ ಮತ್ತು ಚಾರುಕೀರ್ತಿ ಅವರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ನಂತರ ಮಾತನಾಡಿದ ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಶಂಕರಮಠದ ಶಾರದಾದೇವಿ ಸನ್ನಿಧಾನದಲ್ಲಿ 600ಕ್ಕೂ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸುತ್ತಿರುವುದು ಶ್ಲಾಘನೀಯ ಕಾರ್ಯ. ಜೊತೆಗೆ ವಿವಿಧ ಕ್ಷೇತ್ರಗಳ ಸಾಧಕರನ್ನು ಗುರುತಿಸಿ, ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದರು. ಜೆಡಿಯು ಮಹಿಳಾ ರಾಜ್ಯಾಧ್ಯಕ್ಷೆ ಡಾ.ಮಂಜುಳಾ ಉಮೇಶ್ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಸೇನಾಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ರಾಜ್ಯ ಸರ್ಕಾರಿ ನೌಕರರ ಸಂಘದ ನಿಕಟಪೂರ್ವ ಅಧ್ಯಕ್ಷ ಹೆಚ್.ಕೆ.ರಾಮು, ಚಿಂತಕ ರಘುರಾಂ ಕೆ.ವಾಜಪೇಯಿ, ಸಾಹಿತಿ ಡಾ.ಲೀಲಾ ಕೆ.ಪ್ರಕಾಶ್, ಕವಯಿತ್ರಿ ಪುಷ್ಪಾ ಅಯ್ಯಂಗಾರ್, ಸೇನಾಪಡೆ ರಾಜ್ಯಾಧ್ಯಕ್ಷ ಶ್ರೀನಿವಾಸ್‌ಗೌಡ, ಮುಖಂಡರಾದ ಶಾಂತರಾಜೇ ಅರಸ್, ನರಸಿಂಹೇಗೌಡ, ಸಿ.ಕೃಷ್ಣಯ್ಯ, ಡಾ.ರಾಮಚಂದ್ರ, ಬಂಗಾರಪ್ಪ, ಅಂಬಾ ಅರಸ್, ಇಂದಿರಾ, ಜ್ಯೋತಿ, ಪದ್ಮ, ರವಿ ನಾಯಕ, ಪ್ರಭಾಕರ ಇತರರಿದ್ದರು.

ಹೊರವರ್ತುಲ ರಸ್ತೆಯಲ್ಲಿ ಬೀದಿದೀಪಗಳ ಅಸಮರ್ಪಕ ನಿರ್ವಹಣೆ ಆರೋಪ; ಪ್ರತಿಭಟನೆ

ಮೈಸೂರು,ಮೇ 29(ಪಿಎಂ)– ಮೈಸೂರು ನಗರದ ಹೊರವರ್ತುಲ ರಸ್ತೆಯಲ್ಲಿ ಬೀದಿದೀಪಗಳ ಅಸಮರ್ಪಕ ನಿರ್ವಹಣೆಯಿಂದ ರಾತ್ರಿ ವೇಳೆ ಕಗ್ಗತ್ತಲು ಆವರಿಸಿದೆ ಎಂದು ಆರೋಪಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.



ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಚೆಸ್ಕಾಂ, ಮುಡಾ ಹಾಗೂ ಪಾಲಿಕೆ ಸಮನ್ವಯದ ಕೊರತೆಯಿಂದ ಹೊರವರ್ತುಲ ರಸ್ತೆಯಲ್ಲಿ ರಾತ್ರಿ ವೇಳೆ ಕತ್ತಲು ಆವರಿಸುವಂತಾಗಿದೆ. ಇದರಿಂದ ನಾಗರಿಕರು ಪರಿತಪಿಸುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೀದಿದೀಪದ ಸಮಸ್ಯೆ ಬಗ್ಗೆ ಚೆಸ್ಕಾಂಗೆ ದೂರು ಸಲ್ಲಿಸಿದರೆ, ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ಈ ಬಗ್ಗೆ ಲೋಕೋಪಯೋಗಿ ಇಲಾಖೆಗೆ ದೂರು ನೀಡುವಂತೆ ಹೇಳುತ್ತಾರೆ. ಈ ಇಲಾಖೆಯಲ್ಲಿ ವಿಚಾರಿಸಿದರೆ, ಮುಡಾ ಹಾಗೂ ಪಾಲಿಕೆಯಲ್ಲಿ ವಿಚಾರಿಸಿ ಎಂಬ ಬೇಜವಾಬ್ದಾರಿ ಉತ್ತರ ನೀಡುತ್ತಾರೆ. ಇನ್ನು ಸಂಸದರು ಹಾಗೂ ಜನಪ್ರತಿನಿಧಿಗಳ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ದೂರಿದರು. ಈ ಭಾಗಕ್ಕೆ ಬರುವ ಜಿಪಂ ಸದಸ್ಯರು, ಶಾಸಕರು ಮತ್ತು ಸಂಸದರು ಕೂಡಲೇ ಸಂಬಂಧಿಸಿದವರಿಗೆ ಸೂಚನೆ ನೀಡಿ, ಸಮರ್ಪಕ ಬೀದಿದೀಪ ನಿರ್ವಹಣೆಗೆ ಕ್ರಮ ವಹಿಸಿ, ಕಗ್ಗತ್ತಲಲ್ಲಿ ಇಲ್ಲಿ ನಡೆಯುತ್ತಿರುವ ಕಾನೂನುಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು. ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಮುಖಂಡರಾದ ನಾಲಾಬೀದಿ ರವಿ, ಬೋಗಾದಿ ಸಿದ್ದೇಗೌಡ, ಗುರುಬಸಪ್ಪ ಪ್ಯಾಲೇಸ್‌ಬಾಬು ಮತ್ತಿತರರು ಪ್ರತಿಭಟನೆಯಲ್ಲಿದ್ದರು.

ಕಾನೂನು ಪದವೀಧರರ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು,ಮೇ 29– ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಹಾಗೂ ಯೋಜನಾ ಸಮನ್ವಯಾಧಿಕಾರಿಗಳ ಕಚೇರಿ ಮತ್ತು ಗಿರಿಜನ ಅಭಿವೃದ್ಧಿ ಯೋಜನೆಯಡಿ ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣ ತರಬೇತಿ ನೀಡಲು ಅರ್ಹ ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಯನ್ನು www.tw.kar.nic.in ಮೂಲಕ ಮೇ 31ರಿಂದ ಜುಲೈ 5ರವರೆಗೆ ಸಲ್ಲಿಸಬಹುದಾಗಿದೆ. ಅರ್ಜಿಯನ್ನು ಯೋಜನಾ ಸಮನ್ವಯಾಧಿಕಾರಿ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಡಾ. ಬಾಬು ಜಗಜೀವನ ರಾಂ ಭವನ, ಆದಿಪಂಪ ರಸ್ತೆ, ಪಡುವಾರಹಳ್ಳಿ, ಒಂಟಿಕೊಪ್ಪಲು ಪೂರ್ವ ಬಡಾವಣೆ, ಇಲ್ಲಿ ಪಡೆಯಬಹುದು. ಮಾಹಿತಿಗಾಗಿ ದೂ.ಸಂಖ್ಯೆ: 0821–2427140, 2411113.

ಕೋಡಿಹಳ್ಳಿ ಚಂದ್ರಶೇಖರ್ ವಿರುದ್ಧದ ಆರೋಪ: ಸಿಬಿಐ ತನಿಖೆಗೆ ಆಗ್ರಹಿಸಿ ಪ್ರತಿಭಟನೆ

ಮೈಸೂರು,ಮೇ 29(ಪಿಎಂ)– ಕೋಡಿಹಳ್ಳಿ ಚಂದ್ರಶೇಖರ್ ವಿರುದ್ಧದ ಆರೋಪಗಳ ಸಂಬಂಧ ಸಿಬಿಐ ತನಿಖೆಗೆ ಆಗ್ರಹಿಸಿ ರಾಜ್ಯ ರೈತ ಸಂಘದ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.



ಮೈಸೂರಿನ ನ್ಯಾಯಾಲಯದ ಎದುರಿನ ಗಾಂಧಿ ಪುತ್ಥಳಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಕೋಡಿಹಳ್ಳಿ ಚಂದ್ರಶೇಖರ್ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರಲ್ಲದೆ, ಕೋಡಿಹಳ್ಳಿ ಚಂದ್ರಶೇಖರ್ ಸಾರಿಗೆ ನೌಕರರು ಹೋರಾಟ ವಾಪಸ್ಸು ಪಡೆಯಲು ಕಾರ್ಯತಂತ್ರ ರೂಪಿಸುವುದಾಗಿ ಹೇಳಿ ಹಗರಣದಲ್ಲಿ ಮುಳುಗಿರುವುದು ಸುದ್ದಿ ವಾಹಿನಿಯೊಂದರಲ್ಲಿ ಪ್ರಸಾರವಾಗಿದೆ. ಹಾಗಾಗಿ ಅವರ ಹಗರಣಗಳ ಆರೋಪ ಸಂಬಂಧ ಸಿಬಿಐ ಅಥವಾ ಹಾಲಿ ಹೈಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು. ರಾಜ್ಯದ ರೈತ ಚಳವಳಿ ಒಂದು ಚಾರಿತ್ರಿಕ ಹಿನ್ನೆಲೆ ಹೊಂದಿದೆ. ಇಂತಹ ಪವಿತ್ರ ಚಳುವಳಿಯಲ್ಲಿ ಕೋಡಿಹಳ್ಳಿ ಚಂದ್ರಶೇಖರ್ ಅವರಂತಹ ಕೆಲವರು ನುಸುಳಿಕೊಂಡು ರೈತ ಸ್ವಾಭಿಮಾನದ ಸಂಕೇತವಾದ ಹಸಿರು ಶಾಲನ್ನು ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಕೋಡಿಹಳ್ಳಿ ಚಂದ್ರಶೇಖರ್ ಅವರ ಇಂತಹ ವರ್ತನೆ ಹಿನ್ನೆಲೆಯಲ್ಲಿ ರೈತ ಚಳವಳಿ ಅವರನ್ನು ದೂರು ಇಟ್ಟಿದೆ. ಆದರೂ ಅವರು ಸ್ವಯಂ ಘೋಷಿತವಾಗಿ ರೈತ ಸಂಘದ ಅಧ್ಯಕ್ಷ ಎಂದು ಹೇಳಿಕೊಂಡು ರೈತ ಚಳವಳಿ ಮತ್ತು ಹಸಿರು ಶಾಲನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ದೂರಿದರು.

ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ಇವರ ಬಗ್ಗೆ ಗೊತ್ತಾಗಿ ಚಳವಳಿಯಿಂದಲೇ ದೂರವಿಟ್ಟರೂ ರೈತ ನಾಯಕ ಎಂದು ಸ್ವಯಂ ಘೋಷಣೆ ಮಾಡಿಕೊಂಡರು. ಅವರ ನಕಲಿತನ ಬಯಲಿಗೆ ಬಂದಿದೆ. ರಾಜಕಾರಣಿಗಳು, ಅಧಿಕಾರಿಗಳು ಭ್ರಷ್ಟಾಚಾರ ನಡೆಸುವುದಕ್ಕಿಂತಲೂ ಹೋರಾಟಗಾರರು ನಡೆಸುವ ಭ್ರಷ್ಟಾಚಾರ ಸಮಾಜಕ್ಕೆ ಹೆಚ್ಚು ಅಪಾಯಕಾರಿ. ಇವರ ಅಕ್ರಮ ಆಸ್ತಿಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಆಗ್ರಹಿಸಿದರು. ವಿಭಾಗೀಯ ಸಂಘಟನಾ ಕಾರ್ಯದರ್ಶಿ ಸರಗೂರು ನಟರಾಜು, ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಮೈಸೂರು ತಾಲೂಕು ಅಧ್ಯಕ್ಷ ಮರಂಕಯ್ಯ ಪ್ರತಿಭಟನೆಯಲ್ಲಿದ್ದರು.



ದಕ್ಷಿಣ ಪದವೀಧರ ಚುನಾವಣೆಯ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರವಾಗಿ ಕೆ.ಆರ್.ಯುವ ಮೋರ್ಚಾ ವತಿಯಿಂದ ಅರಮನೆ ಮಂಡಳಿ ಕಚೇರಿಯಲ್ಲಿ ಮತಯಾಚಿಸಲಾಯಿತು. ಈ ವೇಳೆ ಉಪ ಕಾರ್ಯದರ್ಶಿ ಟಿ.ಎಸ್.ಸುಬ್ರಹ್ಮಣ್ಯ, ಡಾ.ರಂಗನಾಥ್ ಉಪಸ್ಥಿತರಿದ್ದರು. ಇದಲ್ಲದೆ, ಕಾಡಾ ಕಚೇರಿ, ಇನ್ನಿತರ ಸರ್ಕಾರಿ ಕಚೇರಿಗಳಲ್ಲೂ ಮತಯಾಚನೆ ನಡೆಸಲಾಯಿತು. ಈ ಸಂದರ್ಭದಲ್ಲಿ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ, ಮೈಸೂರು ಬಿಜೆಪಿ ಯುವ ಮೋರ್ಚಾ ಉಸ್ತುವಾರಿ ರಮೇಶ್, ಮುಖಂಡರಾದ ಗಿರೀಶ್, ಕೆ.ಆರ್. ಯುವ ಮೋರ್ಚಾ ಅಧ್ಯಕ್ಷ ಮನು ಶೈವ್, ಪ್ರಧಾನ ಕಾರ್ಯದರ್ಶಿ ರವಿ ಕುಮಾರ್, ಅಕ್ಷಯ್, ಉಪಾಧ್ಯಕ್ಷ ರವಿಚಂದ್ರನ್, ಶಶಾಂಕ್, ಕೆ.ಆರ್.ಯುವ ಮೋರ್ಚಾ ಕಾರ್ಯಕರ್ತರು ಉಪಸ್ಥಿತರಿದ್ದರು.

ಜೆ.ಪಿ.ನಗರ ಬ್ರಾಹ್ಮಣ ಸಂಘಕ್ಕೆ ಆಯ್ಕೆ

ಮೈಸೂರು, ಮೇ 29–ಮೈಸೂರಿನ ಜೆ.ಪಿ.ನಗರ ಬ್ರಾಹ್ಮಣ ಸಂಘದ 2022–25ನೇ ಸಾಲಿನ ಆಡಳಿತ ಮಂಡಳಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಅಧ್ಯಕ್ಷರಾಗಿ ಹೆಚ್.ಸಿ.ಸಚ್ಚಿದಾನಂದ ಶಾಸ್ತ್ರಿ, ಉಪಾಧ್ಯಕ್ಷರಾಗಿ ಭಕ್ತವತ್ಸಲ, ಕಾರ್ಯದರ್ಶಿ–ಬಿ.ವಿ.ಶ್ರೀನಿವಾಸಮೂರ್ತಿ, ಸಹ ಕಾರ್ಯದರ್ಶಿ ಹೆಚ್.ವಿ.ದೀಪಕ್ ಮತ್ತು ಕೋಶಾಧ್ಯಕ್ಷರಾಗಿ ಎನ್.ಪ್ರಕಾಶ್ ಅವರುಗಳು ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಗಳ ಪ್ರಕಟಣೆ ತಿಳಿಸಿದೆ.

ಪುಷ್ಪಕುಮಾರ್‌ಗೆ ಉತ್ತಮ ಅಂಕ

ಮೈಸೂರು, ಮೇ 29– ಮೈಸೂರಿನ ಕಮಲಮ್ಮ ಸುಬ್ಬಣ್ಣ ಪ್ರೌಢಶಾಲೆಯ ವಿದ್ಯಾರ್ಥಿ ಪುಷ್ಪಕುಮಾರ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625 ಅಂಕಗಳಿಗೆ 583 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ ಎಂದು ಶಾಲೆಯ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರಿನ ಎನ್.ಆರ್.ಮೊಹಲ್ಲಾದ ಶಿವಾಜಿ ರಸ್ತೆಯಲ್ಲಿರುವ ಚನ್ನಕೇಶವ ಹಾಗೂ ಡಾ.ರಘು ಒಡೆತನದ ಯುನಿ ಜೀನ್ ಡಯಾಗ್ನೋಸ್ಟಿಕ್ ಮತ್ತು ಸ್ಕ್ಯಾನಿಂಗ್ ಸೆಂಟರ್ ಅನ್ನು ಜೆಡಿಎಸ್ ಮುಖಂಡ ಅಬ್ದುಲ್ಲಾ ಅಜೀಜ್ ಉದ್ಘಾಟಿಸಿದರು. ಈ ವೇಳೆ ನಗರಪಾಲಿಕೆ ಸದಸ್ಯರಾದ ಸಾಹಿದ್ ಖಾನ್, ರಫೀಕ್, ಅನ್ವರ್‌ಬೇಗ್, ಶೈಲೇಂದ್ರ, ಕಿರಣ್‌ಕುಮಾರ್ ಹಾಗೂ ಇತರರು ಪಾಲ್ಗೊಂಡಿದ್ದರು.

ನಾರಾಯಣಸ್ವಾಮಿ ನಿಧನ



ಮೈಸೂರು, ಮೇ 29– ಮೂಲತಃ ಪಾಂಡವಪುರ ತಾಲೂಕು ಮಾಣಿಕ್ಯನಹಳ್ಳಿ ಗ್ರಾಮದವರಾಗಿದ್ದು, ಮೈಸೂರಿನಲ್ಲಿ ವಾಸವಿದ್ದ ದಿ.ಶ್ರೀಕಂಠಯ್ಯನವರ ಪುತ್ರ ಎಂ.ಎಸ್.ನಾರಾಯಣಸ್ವಾಮಿ(70) ನಿಧನರಾದರು. ಮೃತರು ಕೆಎಸ್‌ಆರ್‌ಟಿಸಿ ನಿರ್ವಾಹಕರಾಗಿ ಕಾರ್ಯ ನಿರ್ವಹಿಸಿ ನಿವೃತ್ತಿ ಹೊಂದಿದ್ದರು. ಪತ್ನಿ, ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮೈಸೂರಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಲ್‌ಹಜ್ ಎಸ್. ಅಮೀರ್ ಜಾನ್



ಮೈಸೂರು, ಮೇ 29–ಮೈಸೂರಿನ ಕೆ.ಆರ್. ಮೊಹಲ್ಲಾ 5ನೇ ಕ್ರಾಸ್ ನಿವಾಸಿ ಮತ್ತು ಸದರನ್ ಟ್ರಾನ್ಸ್‌ಪೋರ್ಟ್‌ನ ಅಲ್‌ಹಜ್ ಎಸ್.ಅಮೀರ್ ಜಾನ್ (83) ಅನಾರೋಗ್ಯದಿಂದ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಇಬ್ಬರು ಪುತ್ರರು, ಐವರು ಪುತ್ರಿಯರು ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಕೆ.ಆರ್.ಮೊಹಲ್ಲಾದ ಮಸ್ಜಿದ್ ಎ ಆದಮ್ ಖಾನ್‌ನಲ್ಲಿ ಭಾನುವಾರ ಮಧ್ಯಾಹ್ನ 1.30ಕ್ಕೆ ನಮಾಜ್ ಎ ಜನಾಜ ನಡೆದ ನಂತರ ನಂಜನಗೂಡು ರಸ್ತೆಯ ಮುಸ್ಲಿಮರ ಖಬರಸ್ಥಾನದಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಲ್‌ಹಜಾ ಸೈದಾನಿ ಬಿ



ಮೈಸೂರಿನ ಉದಯಗಿರಿ 4ನೇ ಸ್ಟೇಜ್, 2ನೇ ಕ್ರಾಸ್‌ನ ಅಲ್ ಹಜ್ ಲೇಟ್ ಜಬ್ಬಾರ್ ಷರೀಫ್ ಅವರ ಪತ್ನಿ ಅಲ್‌ಹಜಾ ಸೈದಾನಿ ಬಿ(90) ಶನಿವಾರ ನಿಧನರಾದರು. ಮೃತರು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಮೆಡಿಸಿನ್ ವಿಭಾಗ ಮುಖ್ಯಸ್ಥರಾದ ಡಾ. ಮಹಮದ್ ಷರೀಫ್ ಗೌಸ್ ಸೇರಿದಂತೆ ನಾಲ್ವರು ಪುತ್ರರು ಹಾಗೂ ಓರ್ವ ಪುತ್ರಿ ಮತ್ತು ಅಪಾರ ಬಂಧು ವರ್ಗ ಅಗಲಿದ್ದಾರೆ. ಉದಯಗಿರಿಯ ಮಸ್ಜಿದ್ ಎ ಕ್ವಾಬಾದಲ್ಲಿ ಭಾನುವಾರ ಮಧ್ಯಾಹ್ನ 1.30ಕ್ಕೆ ನಮಾಜ್ ಎ ಜನಾಜ ನಡೆದ ನಂತರ ಟಿಪ್ಪು ಸರ್ಕಲ್ ಸಮೀಪದ ಖಬರಸ್ಥಾನದಲ್ಲಿ ಅಂತ್ಯಕ್ರಿಯೆ ನಡೆಯಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.05.2022 ಸೋಮವಾರ, ಮಳೆ ನಕ್ಷತ್ರ : ರೋಹಿಣಿ 25.05.2022 ರಿಂದ 7.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ
ತಿಥಿ: ಅಮಾವಾಸ್ಯೆ, ನಕ್ಷತ್ರ : ಕೃತ್ತಿಕಾ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮ ದಿನೋತ್ಸವ, ಬೆಳಗ್ಗೆ 9ಕ್ಕೆ ಶ್ರೀಚಕ್ರ ಪೂಜೆ, ನಾರಾಯಣ ಹೋಮ, ಬೆಳಗ್ಗೆ 10ಕ್ಕೆ ಚೈತನ್ಯಾರ್ಚನೆ, ವಿವಿಧ ಕ್ಷೇತ್ರಗಳಲ್ಲಿನ ಗಣ್ಯರಿಗೆ ಸನ್ಮಾನ, ಮುಖ್ಯ ಅತಿಥಿ ಉತ್ತರ ಪ್ರದೇಶ ರಾಜ್ಯಪಾಲರಾದ ಶ್ರೀಮತಿ ಆನಂದಿ ಬೆನ್ ಪಟೇಲ್, ನಾದ ನಿಧಿ–ಡಾ.ಟಿ.ಎಸ್.ಸತ್ಯವತಿ ಬೆಂಗಳೂರು (ಕರ್ನಾಟಕ ಶಾಸ್ತ್ರೀಯ ಸಂಗೀತ), ವಿದ್ವಾನ್ ರಾಜ್‌ಕುಮಾರ್ ಭಾರತಿ ಚೆನ್ನೈ(ಕರ್ನಾಟಕ ಶಾಸ್ತ್ರೀಯ ಸಂಗೀತ), ವಿದ್ವಾನ್ ಮೈಸೂರು ಎಂ.ನಾಗರಾಜು ಮೈಸೂರು(ಪಿಟೀಲು), ವಿದ್ವಾನ್ ಎನ್.ರವಿಕಿರಣ್, ಚೆನ್ನೈ (ಚಿತ್ರವೀಣೆ), ವಿದ್ವಾನ್ ಮೈಸೂರು ಎಂ.ಮಂಜುನಾಥ್, ಮೈಸೂರು (ಪಿಟೀಲು), ಆಸ್ಥಾನ ವಿದ್ವಾನ್–ಶ್ರೀ ಚನ್ನಕೇಶವ ಅವಧಾನಿ ಮತ್ತೂರು (ಯಜುರ್ವೇದ ಮತ್ತು ಶ್ರೌತ ಪ್ರಯೋಗ), ದಿವ್ಯ ಸಾನ್ನಿಧ್ಯ: ಮಂತ್ರಾಲಯ ರಾಘವೇಂದ್ರ ಮಠದ ಪೂಜ್ಯ ಶ್ರೀ ಸುಬುಧೇಂದ್ರ ಸ್ವಾಮೀಜಿ, ವಿಶಾಖ ಪಟ್ಟಣ ಶಾರದಾ ಪೀಠದ ಶ್ರೀ ಸ್ವರೂಪಾನಂದೇಂದ್ರ ಸ್ವಾಮೀಜಿ, ಪೂನಾ ಮಹರ್ಷಿ ವೇದವ್ಯಾಸ ಪ್ರತಿಷ್ಠಾನದ ಶ್ರೀ ಗೋವಿಂದದೇವ್‌ಗಿರಿ ಸ್ವಾಮೀಜಿ. ಸಂಜೆ 6.30ಕ್ಕೆ ಚೈತನ್ಯಾರ್ಚನೆ, ಜಯಲಕ್ಷ್ಮೀ ಪುರಸ್ಕಾರ ಮತ್ತು ದತ್ತ ಪೀಠ ಬಂಧು ಪ್ರಶಸ್ತಿ ಪ್ರದಾನ, ಜಯಲಕ್ಷ್ಮೀ ಪುರಸ್ಕಾರ: ಶ್ರೀಮತಿ ಮಾಕಂ ಅನುರಾಧ, ಪ್ರೊದ್ದಟೂರು, ಊಟುಕೂರು ಸುಂದರ ಕಾತ್ಯಾಯಿನಿ, ಕಾಮಾಕ್ಷಿ ಪೀಠಂ, ವಿಜಯವಾಡ, ಜಯಲಕ್ಷ್ಮೀ ವಾಸುದೇವ, ಮೈಸೂರು, ನೀಲಾ ಮುತ್ತುಸ್ವಾಮಿ, ಮೈಸೂರು, ಎ.ರೋಹಿಣಿ ಅನಂತಪುರ, ಹೀರಾ ದುವ್ವೂರಿ ಯು.ಎಸ್.ಎ, ವಿಜಯಲಕ್ಷ್ಮೀ ಮೈಸೂರು, ಚೂಡಾಮಣಿ ಮನೋಹರ್ ಮೈಸೂರು, ಶೋಭಾರಾಣಿ, ಗೋಣುಗುಂಟ್ಲ, ಅನಂತಪುರ, ಉದಯಗಿರಿ ಪುಷ್ಪವತಿ, ಬಳ್ಳಾರಿ, ದತ್ತಪೀಠ ಬಂಧು ಪುರಸ್ಕಾರ– ಜಿ.ಎಸ್.ಎನ್.ಮೂರ್ತಿ, ಮೈಸೂರು, ಹೆಚ್.ಆರ್.ಅಯ್ಯಂಗಾರ್, ಮೈಸೂರು, ಮುತ್ಯ ವಿಶ್ವನಾಥಂ, ಮೈಸೂರು, ಸಿ.ಎಸ್.ನರಸಿಂಹ, ಬೆಂಗಳೂರು, ಕೈಲಾಶ್ ಸಿ.ತಲ್ವಾರ್, ಬೆಂಗಳೂರು, ಸಿ.ಎಸ್. ವೆಂಕಟೇಶನ್, ಬೆಂಗಳೂರು, ಎಂ.ಎಸ್.ಆರ್.ಕೆ. ಮೂರ್ತಿ, ವಿಶಾಖಪಟ್ಟಣ, ಡಿ.ಆರ್.ರಾವ್, ಹೈದರಾಬಾದ್, ಕೆ.ನಾರಾಯಣರಾವ್ ಹೈದರಾಬಾದ್, ಪಿ.ನರಸಿಂಹಯ್ಯ ಶೆಟ್ಟಿ, ಬೆಂಗಳೂರು , ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ.

■ **ಇನಿದನಿ ಮಣ್ಣಮಕ್ಕಳ ಹೊನ್ನ ಪದಗಳ ಬಳಗ :** ಪಿಹೆಚ್‌ಡಿಯನ್ ಪಬ್ಲಿಷರ್ಸ್ ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ಸ್ಪಂದನಾ ರಾಮೇಶ್ವರ್ ವಿರಚಿತ ಮುಕ್ತ ವಿವಿಯಲ್ಲಿರುವ ಜೀವ ವೈವಿಧ್ಯಗಳ ಕುರಿತ ಅಧ್ಯಯನ ಕೃತಿ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ: ಮಾಜಿ ಸಚಿವ ಎ.ಹೆಚ್.ವಿಶ್ವನಾಥ್, ಅಧ್ಯಕ್ಷತೆ: ವಿವಿ ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್, ಮುಖ್ಯ ಅತಿಥಿಗಳು; ಶಾಸಕ ಎಲ್.ನಾಗೇಂದ್ರ, ಕುಲಸಚಿವ ಪ್ರೊ.ಆರ್.ರಾಜಣ್ಣ, ಉಪಸ್ಥಿತಿ: ಮೈಸೂರು ವಿವಿ ಬಯೋ ಟೆಕ್ನಾಲಜಿ ವಿಭಾಗದ ಪ್ರಾಧ್ಯಾಪಕ ಪ್ರೊ.ಎಸ್.ಉಮೇಶ, ಮುಕ್ತ ವಿವಿ ರಸಾಯನಶಾಸ್ತ್ರ ವಿಭಾಗ ಮುಖ್ಯಸ್ಥ ಡಾ. ಎಂ.ಉಮಾಶಂಕರ, ಸ್ಥಳ: ಮುಕ್ತ ವಿವಿ ಕಾವೇರಿ ಸಭಾಂಗಣ, ಸಮಯ: ಬೆಳಗ್ಗೆ 11.30.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ ಶತಮಾನದ ಸ್ಮೃತಿಗಳು: ಮಂಡ್ಯ ಜಿಲ್ಲೆಯ ಶತಮಾನದ ನೆನಪುಗಳು–ಲೇಖನ ಪ್ರಸ್ತುತಿ: ಡಿ.ಎನ್. ಶ್ರೀಪಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಅಮೃತಾ ನಿತಿನ್ ಶಾಸ್ತ್ರಿ ಮತ್ತು ಎನ್. ಹೇಮಾ, ವ್ಯಾಖ್ಯಾನ: ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 7.45 ನಿತ್ಯ ವಿಜ್ಞಾನ: ಪ್ರಾಯೋಜಿತ ಕಾರ್ಯಕ್ರಮ, 9.05 ಯಕ್ಷ ಸಂಪದ: ಯಕ್ಷಗಾನ ಬಡಗುತಿಟ್ಟಿನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಾಯೋಜಿತ ಕಾರ್ಯಕ್ರಮ, ನಿರ್ಮಾಣ: ದಿವಾಕರ ಹೆಗಡೆ, 9.35 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳುವಳಿಯ ಪಯಣ' ಆಕಾಶವಾಣಿಯೊಂದಿಗೆ, 10.00 ಲಯಸಂಭ್ರಮ: ತಾಳ, ಲಯ, ರಸಾಸ್ವಾದ, ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ: ಸುಬ್ರಹ್ಮಣ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ಭಕ್ತಿಗೀತೆಗಳು–ಬಸವರಾಜ್ ಗುರು, 12.45 ನಮ್ಮ ಆರೋಗ್ಯ: ಮಧುಮೇಹ ರೋಗಿಗಳಲ್ಲಿ ಕಂಡುಬರುವ ಚರ್ಮದ ಸಮಸ್ಯೆಗಳೂ ಮತ್ತು ಆರೈಕೆ ಕುರಿತು ಡಾ.ಎಂ.ಸಂದೀಪ್ ಅವರೊಂದಿಗೆ ಮಾತುಕತೆ, 1.20 ಭಾವಗೀತೆಗಳು–ಆರ್.ವಿ.ಅನುಪಮಾ, 3.00 ವಿ.ಕೆ.ರಾಮನ್– ವೇಣುವಾದನ, 4.00 ಮಹಿಳಾರಂಗ: ಡಾಕ್ಟರ್ ಸಮಯ: ಚರ್ಮದ ತೊಂದರೆಗಳನ್ನು ಕುರಿತು ನೇರ ಫೋನ್‌ಇನ್ ಕಾರ್ಯಕ್ರಮದಲ್ಲಿ ಭಾಗ ವಹಿಸುವವರು ಡಾ.ಸುಪ್ರಿಯಾ, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ: ಕಿಸಾನ್‌ವಾಣಿ, 9.30 ಅಮೃತ ಸ್ವಾತಂತ್ರ್ಯ ಮಾಲಿಕೆ ವಿಶೇಷ ಕಾರ್ಯಕ್ರಮ, 10.30 ಸವಿನೆನಪು.

ನಾಡಗೀತೆಗೆ ಅಪಮಾನ ಮಾಡಿದ ಆರೋಪ

ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷ ಸ್ಥಾನದಿಂದ ರೋಹಿತ್ ಚಕ್ರತೀರ್ಥ ವಜಾಗೆ ಆಗ್ರಹ

ರೋಹಿತ್ ಚಕ್ರತೀರ್ಥ ವಿರುದ್ಧ ವಿವಿಧ ಸಮುದಾಯದ ಮುಖಂಡರಿಂದ ಆಕ್ರೋಶ

ಮೈಸೂರು,ಮೇ 29(ಪಿಎಂ)– ರಾಷ್ಟ್ರಕವಿ ಕುವೆಂಪು ಮತ್ತು ನಾಡಗೀತೆಗೆ ಅಪಮಾನಿಸಿರುವ ರೋಹಿತ್ ಚಕ್ರತೀರ್ಥ ಅವರನ್ನು ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷ ಸ್ಥಾನದಿಂದ ಕೂಡಲೇ ವಜಾಗೊಳಿಸಬೇಕೆಂದು ವಿವಿಧ ಸಮುದಾಯಗಳ ಮುಖಂಡರು ಆಗ್ರಹಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮುಖಂಡರು, ರೋಹಿತ್ ಚಕ್ರತೀರ್ಥ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ರೋಹಿತ್ ಚಕ್ರತೀರ್ಥ ಎಂಬ ವ್ಯಕ್ತಿಯು ಕನ್ನಡನಾಡಿನ ಹೃದಯ ಗೀತೆಯಾಗಿರುವ ನಾಡಗೀತೆಯನ್ನು ವಿಕೃತಗೊಳಿಸಿ, ಅಪಮಾನ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ ಎಂದು ಕಿಡಿಕಾರಿದರು.

ಜೊತೆಗೆ ನಾಲ್ಕನೇ ತರಗತಿಯ ಪಠ್ಯ ಪುಸ್ತಕದಲ್ಲಿ ರಾಷ್ಟ್ರಕವಿ ಕುವೆಂಪು ಅವರ ಪರಿಚಯವನ್ನು ಅವಮಾನಕಾರಿ ರೀತಿಯಲ್ಲಿ ಪ್ರಕಟಿಸಲಾಗಿದೆ. ಇದೇ ರೀತಿ ಲಕ್ಷ್ಮಣ ಆಕಾಶೆ ಕಾರ್ಕಳ ಎಂಬ ವ್ಯಕ್ತಿ ರಾಷ್ಟ್ರಕವಿ ಕುವೆಂಪು ಅವರನ್ನು ಅತ್ಯಂತ ಕೆಟ್ಟಭಾಷೆ ಬಳಸಿ ನಿಂದಿಸಿದ್ದಾರೆ. ಈ ಇಬ್ಬರ ವಿರುದ್ಧ ಕಾನೂನಿನಂತೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.



ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಮತ್ತು ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್ ಮಾತನಾಡಿ, ನಾಡಿನ ಸಮಸ್ತ ಜನತೆ ನಾಡಗೀತೆಯನ್ನು ಭಕ್ತಿಗೀತೆಯಂತೆ ಗೌರವಿಸುತ್ತಾರೆ. ಇಡೀ ನಾಡು ಪಕ್ಷಾತೀತ, ಜಾತ್ಯತೀತವಾಗಿ ಒಪ್ಪಿಕೊಂಡಿರುವ ಗೀತೆ ಇದಾಗಿದೆ. ಅಂತಹ ನಾಡಗೀತೆಯನ್ನು ರೋಹಿತ್ ಚಕ್ರತೀರ್ಥ ಅವಹೇಳನ ಮಾಡಿದ್ದಾರೆ. ಇಂತಹ ವಿಕೃತ ಮನೋಭಾವದ ವ್ಯಕ್ತಿಯನ್ನು ಪಠ್ಯ ಪುಸ್ತಕ ಪರಿಷ್ಕರಣೆ ಸಮಿತಿಗೆ ಅಧ್ಯಕ್ಷರಾಗಿ ಮಾಡಿರುವುದು ಸರಿಯಲ್ಲ. ಈ ವ್ಯಕ್ತಿಯ ಅಧ್ಯಕ್ಷತೆಯಲ್ಲಿ ಪರಿಷ್ಕರಣೆಗೊಂಡ ಪಠ್ಯ ಪುಸ್ತಕ ಓದಿದರೆ ಮಕ್ಕಳ ಮನಸ್ಸು ಕಲುಷಿತಗೊಳ್ಳಲಿದೆ ಎಂದು ದೂರಿದರು.

ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷರಂತಹ ಜವಾಬ್ದಾರಿ ಸ್ಥಾನಕ್ಕೆ ಇವರನ್ನು ನೇಮಕ ಮಾಡುವ ಮುನ್ನ ಸರ್ಕಾರ ಅವರ ಪೂರ್ವಾಪರದ ಬಗ್ಗೆ ಅವಲೋಕಿಸಬೇಕಿತ್ತು. ಇದು ಸರ್ಕಾರದ ಬೇಜವಾಬ್ದಾರಿ ನಡೆಯಾಗಿದ್ದು, ಇನ್ನಾದರೂ ಸರ್ಕಾರ ಸಮರ್ಥನೆ ಕೈಬಿಟ್ಟು ಎಚ್ಚೆತ್ತುಕೊಳ್ಳಬೇಕು ಎಂದು ಕಿಡಿಕಾರಿದರು.

ಕುವೆಂಪು ಕೇವಲ ಒಂದು ಸಮುದಾಯಕ್ಕೆ ಸೀಮಿತವಾದ ವ್ಯಕ್ತಿತ್ವವಲ್ಲ. ಅವರು ಎಲ್ಲಾ ಸಮುದಾಯಗಳನ್ನು ಸಮಾನವಾಗಿ ಕಂಡವರು. ಈ ಕೂಡಲೇ ರೋಹಿತ್ ಚಕ್ರತೀರ್ಥ ಅವರನ್ನು ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಿ, ಆ ಜಾಗಕ್ಕೆ ಸೂಕ್ತ, ಅರ್ಹರನ್ನು ನೇಮಿಸಬೇಕು. ಜೊತೆಗೆ ಈ ಇಬ್ಬರ ವಿರುದ್ಧ ಸರ್ಕಾರ, ಕಾನೂನುನಂತೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪೊಲೀಸ್ ದೂರು: ಈ ಇಬ್ಬರ ವಿರುದ್ಧ ನಾಳೆ ಮೈಸೂರು ನಗರ ಪೊಲೀಸ್ ಆಯುಕ್ತರಿಗೆ ದೂರು ನೀಡಲಿದ್ದೇವೆ ಎಂದು ತಿಳಿಸಿದರಲ್ಲದೆ, ಈಗಾಗಲೇ ರಾಜ್ಯಾದ್ಯಂತ ಎಲ್ಲಾ ಸಮುದಾಯಗಳಿಂದ ಆಕ್ರೋಶ ವ್ಯಕ್ತವಾಗಿದೆ. ವಾರದೊಳಗೆ ಕ್ರಮ ಕೈಗೊಳ್ಳದಿದ್ದರೆ, ರಾಜ್ಯಾದ್ಯಂತ ಜಾತ್ಯತೀತ ಮತ್ತು ಪಕ್ಷಾತೀತವಾಗಿ ತೀವ್ರತರ ಹೋರಾಟ ನಡೆಸಲಾಗುವುದು ಎಂದು ಕೆ.ವಿ.ಶ್ರೀಧರ್ ಎಚ್ಚರಿಸಿದರು. ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ವಿವಿಧ ಸಮುದಾಯಗಳ ಮುಖಂಡರಾದ ಮಂಜಪ್ಪ, ರವಿ, ಮರಿಸ್ವಾಮಿ, ರವಿ ರಾಜಕೀಯ, ಜಯರಾವ್, ಹೆಚ್. ದಿನೇಶ್ ನಾಯಕ್ ಮತ್ತಿತರರು ಗೋಷ್ಠಿಯಲ್ಲಿ ಉಪಸ್ಥಿತರಿದ್ದು, ಮಾತನಾಡಿದರು.

ಮತ ಮಾರಾಟಕ್ಕಿಲ್ಲ ಎಂದು ಸಂಕಲ್ಪ ಮಾಡಿದರೆ ದೇಶಕ್ಕೆ ಒಳಿತು

ಅನುಗ್ರಹ ಭಾಷಣದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಸಲಹೆ




ಮೈಸೂರು, ಮೇ 29(ಎಂಕೆ)– ದೇಶಕ್ಕೆ ಒಳಿತಾಗಬೇಕಾದರೆ ನಮ್ಮ ಮತ ಮಾರಾಟಕ್ಕಿಲ್ಲವೆಂದು ಸಂಕಲ್ಪ ಮಾಡುವಂತೆ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಕರೆ ನೀಡಿದರು.

ಮೈಸೂರಿನ ಅವಧೂತ ದತ್ತ ಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದ ಮಂಟಪದಲ್ಲಿ ತಮ್ಮ 80ನೇ ಜನ್ಮದಿನೋತ್ಸವ ಹಿನ್ನೆಲೆ ಭಕ್ತರನ್ನುದ್ದೇಶಿಸಿ ಅನುಗ್ರಹ ಭಾಷಣ ಮಾಡಿದ ಶ್ರೀಗಳು, ನಮ್ಮ ದೇಶಕ್ಕೆ ಒಳ್ಳೆಯದಾಗಬೇಕಾದರೆ ಇಂದೇ ನಾವೆಲ್ಲ 'ನಮ್ಮ ಮತವನ್ನು ಮಾರುವುದಿಲ್ಲ, ಇದನ್ನು ಬೇರೆಯವರಿಗೂ ಹೇಳುತ್ತೇವೆ' ಎಂಬ ಸಂಕಲ್ಪ ಮಾಡಬೇಕು ಎಂದು ತಿಳಿಸಿದರು.

ನಾವೇ ಲಂಚ ಕೊಡುವುದನ್ನು ಅಭ್ಯಾಸ ಮಾಡಿಸುತ್ತೇವೆ. ನಮ್ಮಿಂದ ಹತ್ತು ಸಾವಿರ ಪಡೆದವರು ನಂತರ ಇಪ್ಪತ್ತು ಸಾವಿರ ತೆಗೆದುಕೊಳ್ಳುತ್ತಾರೆ. ಅದರ ಹೊರೆ ನಮ್ಮ ಮೇಲೆಯೇ ಬೀಳುತ್ತದೆ ಎಂಬುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ನಮ್ಮ ಹಾಗೂ ಸಮಾಜದ ಅಭಿವೃದ್ಧಿ ಮಾಡುವಂತಹ ಶಕ್ತಿಯುಳ್ಳವರನ್ನು ಆಯ್ಕೆ ಮಾಡಿ ಎಂದು ತಿಳಿಹೇಳಿದ ಶ್ರೀಗಳು ನಮ್ಮಲ್ಲಿರುವ ಅಜ್ಞಾನವನ್ನು ತೊಲಗಿಸಿ, ಗುರುಗಳ ಮೂಲಕ ಜ್ಞಾನ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು. ಇದೇ ವೇಳೆ ಅಖಿಲ ಕರ್ನಾಟಕ ಬ್ರಾಹ್ಮಣ ಸಭಾ, ವಿಪ್ರ ಜಾಗೃತ ವೇದಿಕೆ, ಹೊಯ್ಸಳ ಕರ್ನಾಟಕ ಸಂಘ ಹಾಗೂ ಬ್ರಾಹ್ಮಣ ಸಮುದಾಯ ಮುಖಂಡರು ಗಣಪತಿ ಸಚ್ಚಿದಾನಂದ ಶ್ರೀಗಳಿಗೆ ಶುಭಾಶಮನೆ ಸಲ್ಲಿಸಿದರು. ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸೇರಿದಂತೆ ಗಣ್ಯರು, ಸಾವಿರಾರು ಮಂದಿ ಭಕ್ತರು ಭಾಗವಹಿಸಿದ್ದರು.

ಗಮನ ಸೆಳೆದ ಸಾಂಸ್ಕೃತಿಕ ಕಾರ್ಯಕ್ರಮ: ಸಂಜೆ ವೇಳೆ ಬೆಂಗಳೂರಿನ ರಾಜೇಂದ್ರಾಸ್ ಅಭಿನವ ನೃತ್ಯ ಸಂಸ್ಥೆ ವತಿಯಿಂದ 'ರಾಮ ಕಥಾ ವಿಸ್ಮಯ ಮತ್ತು ಶುಕ ಸ್ವರಾಂಜಲಿ ನೃತ್ಯ ಕಾರ್ಯಕ್ರಮ ಕಲಾಪ್ರೇಕ್ಷಕರ ಗಮನ ಸೆಳೆಯಿತು.

ಸಚ್ಚಿದಾನಂದ ಶ್ರೀಗಳ ಆಶೀರ್ವಾದ ಪಡೆದ ವಿಶ್ವೇಶ್ವರ ಹೆಗಡೆ ಕಾಗೇರಿ, ಪ್ರಮೋದ್ ಮುತಾಲಿಕ್



ಅವಧೂತ ದತ್ತ ಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮಕ್ಕೆ ಭೇಟಿ ನೀಡಿದ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹಾಗೂ ಶ್ರೀ ರಾಮಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಸ್ವಾಮೀಜಿಯವರಿಗೆ ಹುಟ್ಟುಹಬ್ಬದ ಶುಭ ಕೋರಿ ಶ್ರೀಗಳಿಂದ ಆಶೀರ್ವಾದ ಪಡೆದರು. ಬಳಿಕ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳ ಆಶ್ರಮ ವಿಶ್ವಪ್ರಸಿದ್ಧವಾಗಿದ್ದು, ಅಪಾರ ಭಕ್ತರನ್ನು ಹೊಂದಿದೆ. ಆಶ್ರಮಕ್ಕೆ ಬರುವ ಭಕ್ತರಿಗೆಲ್ಲರಿಗೂ ಶ್ರೀಗಳ ಕೃಪೆಯಿದೆ ಎಂದರು.

ಗೂಡ್ಸ್ ಆಟೋ ಡಿಕ್ಕಿ: ಸ್ಕೂಟರ್ ಸವಾರ ಸಾವು

ಪರಾರಿಯಾಗಿರುವ ಗೂಡ್ಸ್ ಆಟೋಗೆ ಶೋಧ

- ಮೈಸೂರು–ನಂಜನಗೂಡು ರಸ್ತೆ ಬಂಡಿಪಾಳ್ಯ ಬಳಿ ದುರಂತ
- ತಡವಾಗಿ ಬಂದ 108 ಆಂಬುಲೆನ್ಸ್ ಬಗ್ಗೆ ಆಕ್ರೋಶ

ಮೈಸೂರು, ಮೇ 29(ಎಂಟಿವೈ)–ಗೂಡ್ಸ್ ಆಟೋವೊಂದು ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ಸ್ಕೂಟರ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ಮೈಸೂರು–ನಂಜನಗೂಡು ಮುಖ್ಯ ರಸ್ತೆ ಬಂಡಿಪಾಳ್ಯದ ಬಳಿ ಭಾನುವಾರ ಸಂಭವಿಸಿದೆ.

ಮೈಸೂರಿನ ಅಶೋಕಪುರಂ ನಿವಾಸಿ ವಸಂತ್‌ಕುಮಾರ್(65) ಮೃತಪಟ್ಟ ಸ್ಕೂಟರ್ ಸವಾರ. ಲಾರಿ ಚಾಲಕರಾಗಿರುವ ಅವರು ಇಂದು ಬೆಳಗ್ಗೆ ಬಂಡಿಪಾಳ್ಯದಲ್ಲಿರುವ ಲಾರಿ ಕಚೇರಿಗೆ ತೆರಳಲು ತಮ್ಮ ಸ್ಕೂಟರ್(ಕೆಎ–09– ಹೆಚ್‌ವಿ–540)ನಲ್ಲಿ ತೆರಳುತ್ತಿದ್ದಾಗ ಹಿಂದಿನಿಂದ ವೇಗವಾಗಿ ಬಂದ ಗೂಡ್ಸ್ ಆಟೋ ಡಿಕ್ಕಿ ಹೊಡೆಯಿತು. ಇದರಿಂದ ವಸಂತ್ ನೆಲಕ್ಕೆ ಬಿದ್ದು ಗಾಯಗಳಾಗಿದೆ. ಆದರೆ ಗೂಡ್ಸ್ ಆಟೋ ಚಾಲಕ ಮಾತ್ರ ಆಟೋ ನಿಲ್ಲಿಸದೆ ನಂಜನಗೂಡು ರಸ್ತೆಯಲ್ಲಿ ಪರಾರಿಯಾಗಿದ್ದಾನೆ. ಅಪಘಾತ ಸಂಭವಿಸಿದ ವೇಳೆ ಆ ರಸ್ತೆಯಲ್ಲಿ ವಾಹನಗಳ ಸಂಚಾರ ಕಡಿಮೆ ಇದ್ದ ಕಾರಣ ಗೂಡ್ಸ್ ಆಟೋ ಚಾಲಕ ಪರಾರಿಯಾಗಲು ಸಾಧ್ಯವಾಗಿದೆ. ರಸ್ತೆ ಬದಿಯಲ್ಲಿ ಬಿದ್ದಿದ್ದ ಸ್ಕೂಟರ್ ಹಾಗೂ ಸವಾರನನ್ನು ಗಮನಿಸಿದ ದಾರಿಹೋಕರು ನೆರವಿಗೆ ಬಂದಾರಾದರೂ ಅಷ್ಟರಲ್ಲಾಗಲೇ ವಸಂತ್ ಮೃತಪಟ್ಟಿದ್ದರು. ಅವರ ಬಳಿಯಿದ್ದ ಮೊಬೈಲ್ ಸಹಾಯದಿಂದ ಕುಟುಂಬಸ್ಥರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಬಂದ ಮೃತರ ಕುಟುಂಬದ ಸದಸ್ಯರು ಮೃತದೇಹದ ಬಳಿ ಬಿದ್ದು ಗೋಳಾಡುತ್ತಿದ್ದ ದೃಶ್ಯ ಮನಮಿಡಿಯುವಂತಿತ್ತು.

ಜನರ ಆಕ್ರೋಶ: ಮಾಹಿತಿ ನೀಡಿ 30 ನಿಮಿಷವಾದರೂ ಬರದೇ ಇದ್ದುದಕ್ಕೆ ಜನರು ಕಿಡಿಕಾರಿದರು. ಸ್ಥಳೀಯರ ಆಕ್ರೋಶದ ನಡುವೆ ಆಂಬುಲೆನ್ಸ್ ಸಿಬ್ಬಂದಿ ಸ್ಕೂಟರ್ ಸವಾರ ವಸಂತ್ ಅವರ ನಾಡಿ ಪರಿಶೀಲಿಸಿ, ಮೃತಪಟ್ಟಿರುವುದನ್ನು ದೃಢಪಡಿಸಿದರು. ಸ್ಥಳಕ್ಕೆ ಬಂದ ದಕ್ಷಿಣ ಗ್ರಾಮಾಂತರ ಠಾಣೆಯ ಪೊಲೀಸರು ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜಿನ ಶವಾಗಾರಕ್ಕೆ ಸಾಗಿಸಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ಒಪ್ಪಿಸಿದರು. ಈ ಸಂಬಂಧ ದಕ್ಷಿಣ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಅಪಘಾತವೆಸಗಿ ಪರಾರಿಯಾದ ಗೂಡ್ಸ್ ಆಟೋ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ. ಘಟನೆ ನಡೆದ ಸಮಯದಲ್ಲಿ ನಂಜನಗೂಡು ಮಾರ್ಗವಾಗಿ ತೆರಳಿದ ಗೂಡ್ಸ್ ಆಟೋ ಬಗ್ಗೆ ದಾರಿಯುದ್ದಕ್ಕೂ ಇರುವ ಸಿಸಿ ಕ್ಯಾಮರಾ ಪುಟೇಜ್ ಸಂಗ್ರಹಿಸುತ್ತಿದ್ದಾರೆ.

ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಅಂಕ



ಮೈಸೂರು, ಮೇ 29– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಆರ್.ಗಾನಶ್ರೀ ಉತ್ತಮ ಅಂಕ ಗಳಿಸಿದ್ದಾಳೆ.

ಕನ್ನಡದಲ್ಲಿ 109, ಹಿಂದಿಯಲ್ಲಿ 100ಕ್ಕೆ 100 ಸೇರಿದಂತೆ ಒಟ್ಟು 625ಕ್ಕೆ 562 ಅಂಕಗಳೊಂದಿಗೆ ಉತ್ತೀರ್ಣಳಾಗಿದ್ದಾಳೆ. ಈಕೆ ರಮೇಶ್ ಹಾಗೂ ಪ್ರಫುಲ್ಲಾ ದಂಪತಿ ಪುತ್ರಿ.

'ವೇಗಸ್–2022' ಕಾರ್ಯಾಗಾರಕ್ಕೆ ತೆರೆ

ದೇಶದ ವಿವಿಧ ವೈದ್ಯಕೀಯ ಕಾಲೇಜುಗಳ ವಿದ್ಯಾರ್ಥಿಗಳಿಂದ ಕೌಶಲ್ಯತೆ ಪ್ರದರ್ಶನ



ಮೈಸೂರು ಮೇ 29(ಎಂಕೆ)– ನಗರದ ಜೆಕೆ ಮೈದಾನದಲ್ಲಿರುವ ಅಮೃತ ಮಹೋತ್ಸವ ಸಭಾಂಗಣದಲ್ಲಿ ಮೈಸೂರು ವೈದ್ಯಕೀಯ ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ವತಿಯಿಂದ ಆಯೋಜಿಸಿದ್ದ ಎರಡು ದಿನಗಳ 'ವೇಗಸ್–2022(VAGUS-2022)' ಕಾರ್ಯಾಗಾರ ಮತ್ತು ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮಕ್ಕೆ ತೆರೆ ಬಿದ್ದಿತು. ದೇಶದ ವಿವಿಧ ವೈದ್ಯಕೀಯ ಕಾಲೇಜುಗಳಿಂದ ಭಾಗವಹಿಸಿದ್ದ 830 ಮಂದಿ ವೈದ್ಯಕೀಯ ವಿದ್ಯಾರ್ಥಿಗಳು ತಮ್ಮ ಕೌಶಲ್ಯತೆ ಪ್ರದರ್ಶಿಸಿದರು. ವಿಷಯಾಧಾರಿತ ಚರ್ಚಾ ಸ್ಪರ್ಧೆ, ಸಂವಾದ, ಉಪನ್ಯಾಸ, ರಸಪ್ರಶ್ನೆ ಹಲವು ಸ್ಪರ್ಧೆಗಳನ್ನು ನಡೆಸಲಾಯಿತು. ನಂತರ ವಿಜೇತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರಮಾಣ ಪತ್ರ ಹಾಗೂ ಬಹುಮಾನ ವಿತರಣೆ ಮಾಡಲಾಯಿತು.

ಬಳಿಕ ಮೈಸೂರು ವೈದ್ಯಕೀಯ ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಹೆಚ್.ಎನ್.ದಿನೇಶ್ ಮಾತನಾಡಿ, ಯುಜಿ ವಿದ್ಯಾರ್ಥಿಗಳಿಗೆ ಈ ರೀತಿಯ ಕಾರ್ಯಾಗಾರ ಎಲ್ಲಿಯೂ ನಡೆಯುವುದಿಲ್ಲ. ಕೋವಿಡ್‌ಗೂ ಮೊದಲು ಆಯೋಜನೆ ಮಾಡಿದ್ದು. ಕೋವಿಡ್ ನಂತರ ಈ ವರ್ಷ ಆಯೋಜಿಸಿ, ಯಶಸ್ವಿಯಾಗಿ ನೆರವೇರಿದೆ. ವಿದ್ಯಾರ್ಥಿಗಳು ತಮ್ಮ ವಿಷಯಕ್ಕೆ ಅನುಗುಣವಾಗಿ ಹೆಚ್ಚಿನ ಅಧ್ಯಯನ ನಡೆಸಲು ಪ್ರೋತ್ಸಾಹ ನೀಡುವುದು ಕಾರ್ಯಾಗಾರ ಮುಖ್ಯ ಉದ್ದೇಶವಾಗಿದೆ ಎಂದರು.

ಎರಡು ದಿನಗಳ ಕಾರ್ಯಾಗಾರದಲ್ಲಿ ಕಲಿತಿರುವುದನ್ನು ತಮ್ಮ ಅಧ್ಯಯನ ಹಾಗೂ ಜೀವನದಲ್ಲಿಯೂ ಅಳವಡಿಸಿಕೊಂಡು ಉತ್ತಮ ವೈದ್ಯರಾಗಿ ಸಮಾಜಕ್ಕೆ ಸೇವೆ ನೀಡಬೇಕು ಎಂದು ಕಿವಿಮಾತು ಹೇಳಿದರು. ಕೆಆರ್ ಆಸ್ಪತ್ರೆಯ ಡಾ.ಲಕ್ಷ್ಮೀಗೌಡ, ಡಾ.ಶಶಿಧರ್, ಡಾ.ಶುಭ್ರತಾ ಎಸ್.ಹೆಗಡೆ, ಕಾಲೇಜಿನ ವಿದ್ಯಾರ್ಥಿ ಸಂಘದ ಎಂ.ಒ.ಸುಶ್ಮಿತಾ, ವಿ.ಅರ್ಜುನ್, ಸುಮಂತ್ ಚಂದ್ರಮೌಳಿ ಮತ್ತಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಸಂದರ್ಶಕ : 20 ವರ್ಷ ವಯಸ್ಸಿನ ನೀನು 30 ವರ್ಷ ಅನುಭವ ಎಂದು ಹಾಕಿದ್ದೀಯಲ್ಲ?
ಅಭ್ಯರ್ಥಿ : ಓವರ್ ಟೈಮ್ ಮಾಡುತ್ತಿದ್ದೆ.

ಮೈಸೂರು ಮಿತ್ರ
ಸೋಮವಾರ, 30 ಮೇ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಒಳ್ಳೆಯದನ್ನು ಮಾಡುವುದು ಮತ್ತು ಒಳ್ಳೆಯವರಾಗಿರುವುದು, ಇದೇ ಧರ್ಮದ ಸಾರ.
– ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅನುಕೂಲ ಸಿಂಧು; ಅಭಾವ ವೈರಾಗ್ಯ.

ನಿಮ್ಮ ಪತ್ರಗಳು

ಸುಪ್ರೀಂ ಕೋರ್ಟ್ ತೀರ್ಪು ಸ್ವಾಗತಾರ್ಹ

ಮಾನ್ಯರೇ

ವೇಶ್ಯಾವಾಟಿಕೆ ಒಂದು ಅಪರಾಧವಲ್ಲ, ವೃತ್ತಿ ಎಂಬ ಸರ್ವೋಚ್ಚ ನ್ಯಾಯಾಲಯದ



ಇತ್ತೀಚಿನ ತೀರ್ಪು ಆ ವೃತ್ತಿಯ ಬಗ್ಗೆ ಜನರಿಗಿರುವ ಸಂಕುಚಿತ ಭಾವನೆಯನ್ನು ತೊಡೆದು ಹಾಕುವಲ್ಲಿ ಸಹಕಾರಿಯಾಗಬಹುದು. ನ್ಯಾಯಮೂರ್ತಿ ಎಲ್. ನಾಗೇಶ್ವರರಾವ್ ನೇತೃತ್ವದ ಸರ್ವೋಚ್ಚ ನ್ಯಾಯಾಲಯದ ತ್ರಿಸದಸ್ಯ ಪೀಠ ನೀಡಿರುವ ಈ ತೀರ್ಪಿನ ಪ್ರಕಾರ, ಪೋಲಿಸರು ವೇಶ್ಯಾವೃತ್ತಿಯಲ್ಲಿ ತೊಡಗುವ ಮಹಿಳೆಯರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಾಗ ಅವರ ವಯಸ್ಸು ಮತ್ತು ಅವರು ಸ್ವ ಇಚ್ಛೆಯಿಂದ ಭಾಗಿಯಾಗಿದ್ದಾರಾ ಎಂಬುದನ್ನು ತಿಳಿದುಕೊಳ್ಳಬೇಕು ಎಂದು ಹೇಳುವುದರ ಜೊತೆಗೆ ಈ ವೃತ್ತಿಯಲ್ಲಿ ತೊಡಗಿಸಿಕೊಂಡ ಮಹಿಳೆಯರನ್ನು ಸಮಾಜದಲ್ಲಿ ಗೌರವಯುತವಾಗಿ ನಡೆಸಿಕೊಳ್ಳಬೇಕೆಂದು ಹೇಳಿದೆ. ಈ ತೀರ್ಪಿನ ಪ್ರಕಾರ, ಲೈಂಗಿಕ ಕಾರ್ಯಕರ್ತೆಯರನ್ನು ಬಂಧಿಸುವಂತಿಲ್ಲ, ಹಿಂಸಿಸುವಂತಿಲ್ಲ ಹಾಗೂ ಸಂತ್ರಸ್ಥೆಯರನ್ನಾಗಿಸುವಂತಿಲ್ಲ.

ವೇಶ್ಯಾವೃತ್ತಿಗೆ ಶತ ಶತಮಾನಗಳ ಇತಿಹಾಸವೇ ಇದೆ. ರಾಜ ಮಹಾರಾಜರ ಆಳ್ವಿಕೆಯಲ್ಲಿ ಕೂಡ ವೇಶ್ಯಾವೃತ್ತಿ ಪ್ರಚಲಿತವಾಗಿತ್ತು ಎಂದು ಹೇಳಲಾಗುತ್ತದೆ. ವೇಶ್ಯಾವೃತ್ತಿ ಒಂದು ಕಳಂಕಕಾರಕ ವೃತ್ತಿ ಎಂಬ ಭಾವನೆ ಸಮಾಜದಲ್ಲಿ ಆಳವಾಗಿ ಬೇರೂರಿದ್ದರೂ ಸಹ, ಅನೇಕ ಮಹಿಳೆಯರು, ಗೊತ್ತಿದ್ದೊ, ಗೊತ್ತಿಲ್ಲದೆಯೋ ಈ ಕೂಪದಲ್ಲಿ ಸಿಲುಕಿಹಾಕಿಕೊಳ್ಳುತ್ತಾರೆ.

ಒಮ್ಮೆ ಈ ವಿಷವರ್ತುಲದಲ್ಲಿ ಸಿಲುಕಿಕೊಂಡರೆ ಅದರಿಂದ ಹೊರಬರುವುದು ಬಹಳ ಕಷ್ಟ, ಕೆಲವು ಸರ್ಕಾರೇತರ ಸಂಘ ಸಂಸ್ಥೆಗಳು ಈ ವೃತ್ತಿಯಲ್ಲಿ ನೊಂದವರಿಗೆ ಪುನರ್ವಸತಿ ಕಲ್ಪಿಸುವ ಕೆಲಸ ಮಾಡುತ್ತಿವೆ. ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ "ಶಕ್ತಿಧಾಮ" ಅನೇಕ ನಿರಾಶ್ರಿತ ಮಹಿಳೆಯರಿಗೆ ವಸತಿ ಕಲ್ಪಿಸಿ, ಅವರಿಗೆ ಶಿಕ್ಷಣ, ಉದ್ಯೋಗ ದೊರಕಿಸಿಕೊಡುವಲ್ಲಿ ನೆರವಾಗುತ್ತಿದೆ.

ಕೆಲಸ ಕೊಡಿಸುವ ಆಮಿಷ ಒಡ್ಡಿ ಬೇರೆ ರಾಜ್ಯಗಳಿಗೆ ಯುವತಿಯರನ್ನು ಕರೆದುಕೊಂಡು ಹೋಗಿ ಅಲ್ಲಿ ವೇಶ್ಯಾ ಜಾಲಕ್ಕೆ ಸಿಲುಕಿಸುವ ತಂಡಗಳು ಸಾಕಷ್ಟಿವೆ. ಮುಂಬಯಿ, ದೆಹಲಿ ಕೋಲ್ಕತ್ತಾ ಮುಂತಾದ ಕಡೆಗಳಲ್ಲಿ ಈ ವೃತ್ತಿಯನ್ನು ಕಾನೂನು ಬದ್ಧಗೊಳಿಸಲಾಗಿದೆ. ಇವರು ವಾಸಿಸುವ ಪ್ರದೇಶಗಳನ್ನು 'ರೆಡ್ ಲೈಟ್ ಏರಿಯಾ' ಎಂದು ಕರೆಯಲಾಗುತ್ತದೆ. ನಮ್ಮ ಇತಿಹಾಸ ಮತ್ತು ಪುರಾಣಗಳಲ್ಲಿ ಸಹ ವೇಶ್ಯೆಯರ ಬಗ್ಗೆ ಸಾಕಷ್ಟು ವಿವರಗಳು ದೊರಕುತ್ತವೆ. ಅದೇನೇ ಇರಲಿ, ಸರ್ವೋಚ್ಚ ನ್ಯಾಯಾಲಯದ ತೀರ್ಪು ಈ ವೃತ್ತಿಯಲ್ಲಿ ತೊಡಗಿರುವ ಮಹಿಳೆಯರಿಗೆ ತುಸು ನೆಮ್ಮದಿ ನೀಡಬಹುದು.

– ಡಾ. ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಲಕ್ಷ್ಮೀಪುರ ಗ್ರಾಮಕ್ಕೆ ಬಸ್ ಸೌಲಭ್ಯವೇ ಇಲ್ಲ

ಮಾನ್ಯರೇ,

ಮೈಸೂರು ತಾಲೂಕು, ವರುಣಾ ಹೋಬಳಿಯ ಲಕ್ಷ್ಮೀಪುರ ಗ್ರಾಮಕ್ಕೆ ಸಾರಿಗೆ ಬಸ್ ಸಂಚಾರವೇ ಇಲ್ಲ. ಇದರಿಂದ ವಿದ್ಯಾರ್ಥಿಗಳು ಹಾಗೂ ಕೂಲಿ–ಕಾರ್ಮಿಕರಿಗೆ ಬಹಳ ತೊಂದರೆಯಾಗುತ್ತಿದ್ದು, ಅವರು ಸುಮಾರು ಎರಡರಿಂದ ಮೂರು ಕಿಲೋಮೀಟರ್ ದೂರ ನಡೆದು ಪಕ್ಕದ ಗ್ರಾಮವಾದ ದುದ್ದಗೆರೆಯಿಂದ ಬಸ್ಸಿನಲ್ಲಿ ಪ್ರಯಾಣಿಸಬೇಕಾಗಿದೆ. ಇಲ್ಲಿನ ಮತ್ತೊಂದು ಸಮಸ್ಯೆ ಎಂದರೆ ದುದ್ದಗೆರೆ ಗ್ರಾಮಕ್ಕೂ ಸಹ ದಿನಕ್ಕೆ ಕೇವಲ ಎರಡು ಬಾರಿ ಮಾತ್ರ ಬಸ್ ಬರುತ್ತದೆ. ಬೆಳಗ್ಗೆ 8:30ಕ್ಕೆ ಮತ್ತೊಂದು ಸಂಜೆ 6 ಗಂಟೆಗೆ. ಇದರಿಂದ ಎಲ್ಲಾ ವಿದ್ಯಾರ್ಥಿಗಳಿಗೆ ಹಾಗೂ ಕೂಲಿ ಕಾರ್ಮಿಕರಿಗೆ ಸರಿಯಾದ ಸಮಯಕ್ಕೆ ತಲುಪಲು ಸಾಧ್ಯವಾಗುತ್ತಿಲ್ಲ ಹಾಗೂ ಎಷ್ಟೋ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನೇ ಬಿಟ್ಟಿದ್ದಾರೆ. ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಆದಷ್ಟು ಬೇಗ ಬಸ್ ಸೌಲಭ್ಯವನ್ನು ಈ ಎರಡು ಗ್ರಾಮಗಳಿಗೂ ಒದಗಿಸಿಕೊಡಬೇಕಾಗಿ ಸಂಬಂಧಪಟ್ಟ ಅಧಿಕಾರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

– ಐಶ್ವರ್ಯ, ಪತ್ರಿಕೋದ್ಯಮ ವಿದ್ಯಾರ್ಥಿನಿ ಮಾನಸಗಂಗೋತ್ರಿ ಮೈಸೂರು.

ರಾಜ ಕಾಲುವೆಗೆ ತಡೆಗೋಡೆ ನಿರ್ಮಿಸಿ

ಮಾನ್ಯರೇ

ಇದು ಮೈಸೂರಿನ ರಾಮಕೃಷ್ಣ ನಗರ ಐ ಬ್ಲಾಕ್ ಎಂಟನೇ ಕ್ರಾಸ್ ರಸ್ತೆಯ ಸ್ಥಿತಿ.



ಈ ರಸ್ತೆಯ ಒಂದು ಮಗ್ಗುಲಿಗೆ ರಾಜ ಕಾಲುವೆ ಇದೆ. ಈ ಕಾಲುವೆಯು ಮೈಸೂರು ಮಹಾ ನಗರ ಪಾಲಿಕೆಯ ಬೇಜವಾಬ್ದಾರಿಗೆ ಹಿಡಿದ ಕೈಗನ್ನಡಿಯಾಗಿದೆ!

ಕಾರಣ,ಈ ಕಾಲುವೆ ಹತ್ತು ಅಡಿ ಅಗಲ ಹದಿನೈದು ಅಡಿ ಆಳವಾಗಿದೆ. ವಿಪರ್ಯಾಸವೆಂದರೆ ಈ ಕಾಲುವೆಗೆ ಯಾವುದೇ ತಡೆಗೋಡೆ ಇಲ್ಲ.ಈ ಭಾಗದಲ್ಲಿ ಸಂಚರಿಸುವ ನಾಗರಿಕರು ಸ್ವಲ್ಪ ಎಚ್ಚರ ತಪ್ಪಿದರೂ ಕಾಲುವೆಯ ಪಾಲಾಗುವ ಸಂಭವವಿದೆ. ಸೈಕಲ್ ಸವಾರಿ ಮಾಡುವ ಮಕ್ಕಳಂತೂ ಈ ರಸ್ತೆಯಲ್ಲಿ ಸಂಚರಿಸಲು ಭಯಪಡುತ್ತಾರೆ. ಈ ಕೂಡಲೇ ಪಾಲಿಕೆಯು ಎಚ್ಚೆತ್ತು ಈ ಅಪಾಯಕಾರಿ ಕಾಲುವೆಯ ಎರಡೂ ಬದಿಗೂ ತಡೆಗೋಡೆ ನಿರ್ಮಿಸಿ ಅಮಾಯಕ ಜೀವಗಳನ್ನು ರಕ್ಷಿಸಬೇಕಾಗಿದೆ.

– ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು.

ಮೂಲ ಸೌಕರ್ಯಗಳಿಲ್ಲದ ಜಯದೇವನಗರ

ಮಾನ್ಯರೇ,

ಮೈಸೂರಿನ ಮೇಟಗಳ್ಳಿಯ ಜಯದೇವ ನಗರದ ರಸ್ತೆ, ಚರಂಡಿ, ಬಿದಿ ದೀಪ ಸೇರಿದಂತೆ ಎಲ್ಲಾ ಮೂಲ ಸೌಕರ್ಯಗಳಿಂದ ವಂಚಿತವಾಗಿದೆ.

ರಸ್ತೆಯು ಹಲವು ವರ್ಷಗಳಿಂದ ಡಾಂಬರ್ ಇಲ್ಲದೆ ಹಳ್ಳಗಳಿಂದ ಕೂಡಿದೆ. ಇಳಿಜಾರಿನ ಪ್ರದೇಶವಾಗಿರುವುದರಿಂದ ಇಲ್ಲಿರುವ ಚರುಂಡಿಗಳು ಪದೇ ಪದೆ ತುಂಬಿಕೊಂಡು ರಸ್ತೆಯ ಮೇಲೆಯೇ ಕೊಳಚೆ ನೀರು ಹರಿಯುತ್ತದೆ, ಅಲ್ಲದೇ ರಸ್ತೆಯ ಪಕ್ಕದಲ್ಲಿನ ಮೋರಿಯು ಮಣ್ಣು ಕಲ್ಲುಗಳಿಂದ ಮುಚ್ಚಿ ಹೋಗಿದ್ದು, ಇದರತ್ತ ಯಾರೂ ಗಮನ ಹರಿಸುತ್ತಿಲ್ಲ.

ಸುಮಾರು ಏಳೆಂಟು ತಿಂಗಳುಗಳಿಂದ ಬೀದಿ ದೀಪಗಳು ಕೆಟ್ಟಿವೆ. ಇದರಿಂದ ರಾತ್ರಿಯ ವೇಳೆ ಕಗ್ಗತ್ತಲಿನಲ್ಲಿ ಓಡಾಡಲು ನಿವಾಸಿಗಳಿಗೆ ಬಹಳ ತೊಂದರೆ ಆಗುತ್ತಿದೆ. ಹಲವು ಬಾರಿ ಈ ವಿಷಯ ಸಂಬಂಧಿಸಿದವರ ಗಮನಕ್ಕೆ ತಂದಿದ್ದರೂ ಸಮಸ್ಯೆಗಳು ಮುಗಿದಿಲ್ಲ.

ಇಲ್ಲಿನ ಜನರು ಪ್ರತಿನಿತ್ಯ ತೊಂದರೆ ಅನುಭವಿಸುತ್ತಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ಉತ್ತಮ ರಸ್ತೆ, ಚರಂಡಿ ಹಾಗೂ ಬೀದಿ ದೀಪದ ವ್ಯವಸ್ಥೆಯನ್ನು ಕಲ್ಪಿಸಿ, ಜನರ ಸಮಸ್ಯೆಗಳನ್ನು ಪರಿಹರಿಸಬೇಕಾಗಿ ವಿನಂತಿ.

– ಭವ್ಯ, ಸ್ಥಳೀಯ ನಿವಾಸಿ



ಜಿ.ಎಲ್. ತ್ರಿಪುರಾಂತಕ
ಮೊ : 9686677284

ಸುಪ್ರಭ

ಯುವಕರ ಬದುಕಿನಲ್ಲಿ ಜೂಟಾಟವಾಡುವ ಜೂಜಾಟ!

ಹಬ್ಬಹರಿದಿನಗಳಲ್ಲಿ, ವಿಶೇಷ ದಿನಗಳಲ್ಲಿ ಟೈಂಪಾಸ್‌ಗಾಗಿ ಬಂಧುಗಳು, ಸ್ನೇಹಿತರೊಂದಿಗೆ ಆಡುವ ಪರಿಪಾಠ ಇಂದಿಗೂ ಕೆಲವರ ಮನೆಯಲ್ಲಿದೆ. ಆದರೆ ಜೂಜನ್ನೇ ಒಂದು ವೃತ್ತಿಯಾಗಿಸಿಕೊಂಡಿರುವ ಅನೇಕ ಯುವಕರು, ಮಧ್ಯವಯಸ್ಸಿನವರು, ಅಷ್ಟೇ ಏಕೆ ವಯೋವೃದ್ಧರೂ ಇದ್ದಾರೆ. ಜೂಜು ಎಂಬುದು ಮನುಷ್ಯನ ಬದುಕಿನಲ್ಲಿ ಮನರಂಜನೆಯ ಆಟವಾಗುವ ಬದಲು ಜೂಟಾಟದಲ್ಲಿ ಆಟಗಾರ ಔಟಾಗುವಂತೆ ಜೂಜಾಟವು ಕೆಲವರ ಬದುಕಿಗೆ ಅಕಾಲದಲ್ಲಿಯೇ ಔಟ್ ಆಗುವಂತೆ ಮಾಡುತ್ತಿರುವುದು ವಿಪರ್ಯಾಸ. ಜೂಜಿಗೆ ಮನಸೋತವನು ಬದುಕಿನಲ್ಲಿಯೇ ಸೋಲನ್ನು ಕಂಡು ಹೈರಾಣವಾಗಿರುವ ಅಸಂಖ್ಯ ಉದಾಹರಣೆಗಳು ನಮ್ಮ ಮುಂದಿವೆ. ಇದೊಂದು ಸ್ವಯಂಕೃತವಾದ ತಪ್ಪು. ಜೂಜು ಎಂಬುದು ಪ್ರಾರಂಭದಲ್ಲಿ ಮುದ ನೀಡಿದರೂ ಚಟವಾಗಿ ಅಂಟಿಸಿಕೊಂಡರೆ ಸಹಿಸಲಾಗದ ಗುದ್ದುಗಳನ್ನು ನೀಡುತ್ತದೆ. ಜೂಜಿನಲ್ಲಿ ಹಣ ಹಾಗೂ ಪ್ರತಿಷ್ಠೆ ಮುಖ್ಯವಾಗಿರುತ್ತದೆ. ಎಲ್ಲರೆದುರು ಗೆದ್ದು ಬೀಗಬೇಕೆಂಬ ಮನೋಭಾವದಿಂದ ಪಣಕಟ್ಟಲು ಏನು ಬೇಕಾದರೂ ಮಾಡಲು ಜೂಜುಕೋರರು ತಯಾರಿರುತ್ತಾರೆ. ಅನೇಕ ಅಪರಾಧಗಳಿಗೆ ಜೂಜಿನ ಚಟವೂ ಪರೋಕ್ಷವಾಗಿ ಕಾರಣವಾಗಿದೆ. ಜೂಜಾಡಲು ಸಾಲ ಮಾಡಿ ಬೇರೆ ರಾಜ್ಯಗಳಿಗೆ, ದೇಶಗಳಿಗೆ ಹೋಗಿಬರುವ ಒಂದು ವರ್ಗವೇ ಇದೆ.

ಜೂಜಾಟದಿಂದ ಆಗುವ ದುಷ್ಪರಿಣಾಮಗಳ ಪರಾಕಾಷ್ಠೆಗೆ ಮಹಾಭಾರತದ ದೃಷ್ಟಾಂತಕ್ಕಿಂತ ಮತ್ತೊಂದು ಉದಾಹರಣೆ ಬೇಕಿಲ್ಲ. ಜೂಜಾಟದಿಂದ ಪಾಂಡವರು ಪಾಂಚಾಲಿಯನ್ನೇ ಪಣಕ್ಕಿಡುವ, ವನವಾಸ ಅನುಭವಿಸುವ ಸಂದರ್ಭವನ್ನು ಎದುರಿಸಬೇಕಾಯಿತು. ಅಷ್ಟಾಗಿಯೂ ಶತಶತಮಾನಗಳಿಂದ ನಮ್ಮ ದೇಶವೇ ಅಲ್ಲದೇ ಅನೇಕ ದೇಶಗಳಲ್ಲಿ ಜೂಜು ಚಾಲ್ತಿಯಲ್ಲಿದೆ. ಜೂಜು ಒಂದು ವ್ಯಸನವಾಗಿ ಜೂಜಾಟದಲ್ಲಿ ತೊಡಗುವವರಿಗೆ ತೊಂದರೆ ಕೊಡುವುದಲ್ಲದೆ ಅವರ ಕುಟುಂಬದ ನೆಮ್ಮದಿಯನ್ನು ಬಲಿ ತೆಗೆದುಕೊಳ್ಳುತ್ತದೆ. ಮೋಜಿಗಾಗಿ ಜೂಜು ಕಲಿವ ಯುವಕರು, ಮುಂದೆ ಚಟವಾಗಿ ಅಂಟಿಸಿಕೊಂಡು, ಅದರಿಂದ ಹೊರಬರಲಾಗದೆ ಅನಗತ್ಯವಾಗಿ ಸಾಲ ಮಾಡಿ, ತಾಯಿ ತಂದೆಯರಿಗೆ ಹೊರೆಯಾಗುವುದರ ಜೊತೆಗೆ ತಮ್ಮ ಸುಂದರ ಬದುಕನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ.

ಜೂಜಾಟದಿಂದ ಹಾಳಾದವರ ಸಂಖ್ಯೆಯೇ ಹೆಚ್ಚಾಗಿದೆಯೇ ಹೊರತು ಉದ್ಧಾರ ಆದವರು ಬೆರಳೆಣಿಕೆಯಷ್ಟು. ಜೂಜು ಕುಟುಂಬದ ಸದಸ್ಯರನ್ನು ಹಸಿವಿನಲ್ಲಿ ಇರಿಸುತ್ತದೆಯೇ ಹೊರತು ಹೊಟ್ಟೆ ತುಂಬಿಸುವುದಿಲ್ಲ. ಕುಟುಂಬದ ಗೌರವವನ್ನು ಹಾಳು ಮಾಡುತ್ತದೆಯೇ ಹೊರತು ಹೆಚ್ಚಿಸುವುದಿಲ್ಲ. ಒಂದು ಕುಟುಂಬ ಸಜ್ಜನಿಕೆಯಿಂದ, ಉತ್ತಮ ನಡವಳಿಕೆಯಿಂದ ಗೌರವಯುತ ಕುಟುಂಬ ಎಂಬ ಹೆಸರನ್ನು ಗಳಿಸಿರುತ್ತದೆ. ಹತ್ತಾರು ವರ್ಷಗಳ ಕಾಲ, ಮೂರ್‍ನಾಲ್ಕು ತಲೆಮಾರುಗಳ ಹತ್ತಾರು ಜನರು ಬಹಳ ಜತನದಿಂದ ಕಾಪಾಡಿಕೊಂಡು ಬಂದಿರುತ್ತಾರೆ. ಆದರೆ ಒಬ್ಬ ಬೇಜವಾಬ್ದಾರಿ ಮನೆಯ ಸದಸ್ಯ ದುಷ್ಟ ಸ್ನೇಹಿತರ ಸಹವಾಸದಿಂದ ಜೂಜಾಟ ಕಲಿತು ಮನೆ ಮರ್ಯಾದೆಯನ್ನು ಕೆಲವೇ ದಿನಗಳಲ್ಲಿ ಮಣ್ಣುಪಾಲು ಮಾಡುತ್ತಾನೆ. ಜೂಜಾಟ ಮೊದಲು ಸುಳ್ಳು ಹೇಳುವುದನ್ನು ಕಲಿಸುತ್ತದೆ, ನಂತರ ಸಾಲ ಮಾಡಿಸುತ್ತದೆ, ಮುಂದೆ ಕಳ್ಳತನ ಮಾಡಿಸುತ್ತದೆ, ಸಾಲ ತೀರಿಸಲು ಏನು ಬೇಕಾದರೂ ಮಾಡಲು ಮುಂದಾಗುವ ಯುವಕರಿಂದ ಅಪರಾಧ ಕೃತ್ಯಗಳನ್ನು ಮಾಡಿಸುತ್ತದೆ. ವಿದ್ಯಾರ್ಥಿಗಳಾದರೆ ಅವರ ಚಿನ್ನದಂಥ ದಿನಗಳನ್ನು ಕಸಿಯುತ್ತದೆ, ಉದ್ಯೋಗಿಗಳಾದರೆ ಕೆಲಸದಲ್ಲಿ ಶ್ರದ್ಧೆ ಹಾಳುಮಾಡಿ ಕೆಲಸವನ್ನೇ ಕಸಿದುಬಿಡುತ್ತದೆ. ಇವೆಲ್ಲದರ ಜೊತೆ ಸುಂದರ ಬದುಕಿಗೆ ಅಕಾಲದಲ್ಲಿಯೇ ಕೊಳ್ಳಿ ಇಟ್ಟುಬಿಡುತ್ತದೆ.

ಇಂದಿನ ಯುವ ಸಮೂಹ ಜೂಜಾಟದಿಂದ ತಮ್ಮ ಜೀವನವನ್ನು ತಾವೇ ಹಾಳು ಮಾಡಿಕೊಳ್ಳುವುದಲ್ಲದೆ ಹೆತ್ತವರ, ಸಹೋದರ, ಸಹೋದರಿಯರ ಗೌರವಕ್ಕೆ ಧಕ್ಕೆ ತರುತ್ತಾರೆ. ಅವರುಗಳ ತಾವು ಮಾಡದ ತಪ್ಪಿಗೆ ತಲೆ ತಗ್ಗಿಸುವ, ದಂಡ ಕಟ್ಟುವ, ಸಮಾಜಕ್ಕೆ ಹೆದರಿ ಬದುಕುವ ಸ್ಥಿತಿ ನಿರ್ಮಾಣ ಮಾಡುತ್ತಾರೆ. ಆಣೆ ಪ್ರಮಾಣ ಮಾಡಿಸಿದರೂ, ಆಪ್ತ ಸಮಾಲೋಚನೆ ಮಾಡಿಸಿದರೂ, ಗುರುಹಿರಿಯರಿಂದ ಬುದ್ಧಿ ಹೇಳಿಸಿದರೂ ಯಾವುದಕ್ಕೂ ಕೇರ್ ಮಾಡದೆ ಬೆಂಕಿಯ ಬೆಳಕಿನ ಆಕರ್ಷಣೆಗೆ ಒಳಗಾಗಿ ಕೀಟ ತನ್ನನ್ನೇ ತಾನು ಬಲಿ ಕೊಡುವಂತೆ ಯುವಕರು ಸುಲಭವಾಗಿ ಹಣ ಗಳಿಸಿಬಿಡಬಹುದು ಎಂಬ ಭ್ರಮೆಗೆ ಒಳಗಾಗಿ ತಮ್ಮನ್ನೇ ಜೂಜಾಟಕ್ಕೆ ಬಲಿಕೊಡುತ್ತಿದ್ದಾರೆ.

'ತಪ್ಪು ಮಾಡುವವನಿಗೆ ಅವಕಾಶಗಳ ಕೊರತೆಯಿಲ್ಲ' ಎಂಬ ಮಾತಿನಂತೆ ಜೂಜಾಟಕ್ಕೆ ಇಂದು ಅನೇಕ ಅವಕಾಶಗಳಿವೆ. ಹಿಂದೆ



> ಆನ್‌ಲೈನ್‌ನಲ್ಲಿ ರಮ್ಮಿ ಆಡಿ ಎಂಬ ಜಾಹೀರಾತು ಎಲ್ಲೆಡೆ ರಾರಾಜಿಸುತ್ತಿರುವುದನ್ನು ಕಾಣಬಹುದು. ನಾಳೆ ಹಾಳಾಗುವವರನ್ನು ಇಂದೇ ಹಾಳು ಮಾಡುವ ವ್ಯವಸ್ಥೆ ಇದು. ಮನೆಯ ಕೊಠಡಿಯಲ್ಲಿ ಕುಳಿತು ಆನ್‌ಲೈನ್ ಕ್ಲಾಸ್ ಮಾಡುವ ಬದಲು ಆನ್‌ಲೈನ್‌ನಲ್ಲಿ ಜೂಜಾಡಿ ಹಣ ಹಾಗು ಸಮಯವನ್ನು ಸುಲಭವಾಗಿ ಕಳೆಯುತ್ತಿರುವುದು ಯುವಕರ ಭವಿಷ್ಯಕ್ಕೆ ಮಾರಕವಾಗಿದೆ. ತಾಯಿತಂದೆ ಬೆವರು ಸುರಿಸಿ ದುಡಿದ ಹಣವನ್ನು ನೀರಿನಂತೆ ಖರ್ಚು ಮಾಡಿ ಅವರ ಆರ್ಥಿಕ ದುಸ್ಥಿತಿಗೆ ಕಾರಣರಾಗುತ್ತಿದ್ದಾರೆ. ಸೆಲೆಬ್ರಿಟಿಗಳು ಎಂದು ಕರೆಯಿಸಿಕೊಳ್ಳುವ ಸಿನೆಮಾ ತಾರೆಯರು, ಕ್ರಿಕೆಟ್ ತಾರೆಯರು ಆನ್‌ಲೈನ್‌ನಲ್ಲಿ ಜೂಜಾಡಿ ಎಂದು ಯುವಕರನ್ನು ಪ್ರಚೋದಿಸುತ್ತಿರುವುದು ಅಪಾಯಕಾರಿ ಬೆಳವಣಿಗೆಯಾಗಿದೆ. ಯುವಕರು ತಮ್ಮ ಬದುಕನ್ನು ಹಸನುಗೊಳಿಸುವ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು. ತಮ್ಮ ಬುದ್ಧಿಯನ್ನು ಉಪಯೋಗಿಸಿ, ಒಳಿತು ಕೆಡಕುಗಳ ಕುರಿತು ಚಿಂತನೆ ನಡೆಸಬೇಕು. ಹೆತ್ತವರ ಕನಸನ್ನು ಈಡೇರಿಸುವ ನಿಟ್ಟಿನಲ್ಲಿ ಪರಿಶ್ರಮ ಹಾಕಬೇಕು. ತಮ್ಮ ಭವಿಷ್ಯ ತಮ್ಮ ಕೈಯಲ್ಲಿಯೇ ಇದೆ ಎಂದು ಅರಿಯಬೇಕು. ಪ್ರಚೋದನೆಗೆ ಒಳಗಾಗಬಾರದು.

ಒಂದಷ್ಟು ಜನ ಸಮಯ ಹೊಂದಿಸಿಕೊಂಡು ಇಸ್ಪಿಟ್ ಆಟ ಆಡಲು ಸೇರಬೇಕಿತ್ತು. ಆದರೆ ಇಂದಿನ ತಂತ್ರಜ್ಞಾನ ಬಳಕೆಯಿಂದ ಆನ್‌ಲೈನ್‌ನಲ್ಲಿಯೂ ಜೂಜಾಡುವ ಅವಕಾಶವಿದೆ. ಅದಕ್ಕಾಗಿ ಅನೇಕ ಮನೆಹಾಳು ಕಂಪನಿಗಳು ಹುಟ್ಟಿಕೊಂಡಿವೆ. ಅನೇಕರು ತಮ್ಮ ಅಮೂಲ್ಯವಾದ ಸಮಯವನ್ನು, ಬೆವರು ಸುರಿಸಿ ದುಡಿದ ಹಣವನ್ನು ಕುಳಿತಲ್ಲಿಯೇ ಜೂಜಾಡಿ ಕ್ಷಣಮಾತ್ರದಲ್ಲಿ ಕಳೆದುಕೊಳ್ಳುತ್ತಿದ್ದಾರೆ. ಕಷ್ಟಪಟ್ಟು ದುಡಿದು ಜೀವನದಲ್ಲಿ ಮುಂದೆ ಬರಬೇಕಿದ್ದ ಯುವಕರು ಈ ಆನ್‌ಲೈನ್ ಜೂಜಾಟಕ್ಕೆ ಮನಸೋತು ತಮ್ಮ ಶಕ್ತಿ ಹಾಗೂ ಯುಕ್ತಿ ಎರಡನ್ನೂ ಕಳೆದುಕೊಂಡು, ಮನೆಗೆ ಮಲ್ಲಿಗೆಯಾಗಬೇಕಿದ್ದವರು ಮೋರಿ ನೀರಾಗುತ್ತಿದ್ದಾರೆ. ತಮ್ಮ ಹೆತ್ತವರಿಗೆ ತಿಳಿಯದಂತೆ ಅಗತ್ಯ ಮೀರಿ ಸಾಲ ಮಾಡಿ, ಸಾಲ ತೀರಿಸಲಾಗದೆ ಸಾವಿಗೆ ಶರಣಾಗಿ ತಮ್ಮ ಅಮೂಲ್ಯ ಜೀವವನ್ನೇ ಕಳೆದುಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲ ಏನೂ ತಪ್ಪು ಮಾಡದ ಮನೆಯವರು ಕಣ್ಣೀರಿನಲ್ಲಿ ಕೈತೊಳೆಯುವಂತೆ ಮಾಡುತ್ತಿದ್ದಾರೆ.

ಇಂದು ವಿದ್ಯಾವಂತರನ್ನು ಸಹ ಜೂಜಿನ ದುಶ್ಚಟ ಬಿಟ್ಟಿಲ್ಲ. ಶಿಕ್ಷಣ ವ್ಯವಸ್ಥೆಯಿಂದ ಮನುಷ್ಯ ವಿವೇಚನೆ ಕಲಿಯಬೇಕಿತ್ತು. ಆದರೆ ಇಂದಿನ ಯುವ ಸಮೂಹ ಕೇವಲ ಸರ್ಟಿಫಿಕೇಟ್ ಪಡೆಯಲು ಶಾಲಾ ಕಾಲೇಜಿಗೆ ಹೋಗುತ್ತೇವೆ ಎಂದು ಭಾವಿಸಿರುವುದು ದುರದೃಷ್ಟಕರ. ಅನೇಕ ವಿದ್ಯಾರ್ಥಿಗಳು, ಪ್ರೌಢಶಾಲೆಯ ವಿದ್ಯಾರ್ಥಿಗಳು ಸೇರಿದಂತೆ ಇಂದು ಕ್ರಿಕೆಟ್ ಬೆಟ್ಟಿಂಗ್ ದಂಧೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕ್ರಿಕೆಟ್ ಆಟವನ್ನು ಮನರಂಜನೆಗಾಗಿ, ದೇಶದ ಅಭಿಮಾನಕ್ಕಾಗಿ ನೋಡುತ್ತಿದ್ದ ಕಾಲ ಹೋಗಿ ಕೆಲವರು ಪಣಕ್ಕೆ ಹಣ ಕಟ್ಟಲು ಕ್ರಿಕೆಟ್ ಆಟವನ್ನು ಪರಿಗಣಿಸುತ್ತಿರುವುದು ದುರದೃಷ್ಟಕರ. ಇಂದು ಐಪಿಎಲ್ ಪಂದ್ಯಗಳಿಗೆ ಬೆಟ್ಟಿಂಗ್ ಕಟ್ಟುವ ಪರಿಪಾಠ ಹಳ್ಳಿ–ನಗರ ಎನ್ನದೆ ಎಲ್ಲೆಡೆ ಇದೆ. ಕೆಲ ವಿದ್ಯಾರ್ಥಿಗಳು ಉತ್ತಮವಾಗಿ ಓದಿ ತಮ್ಮ ಬದುಕನ್ನು ಹಸನು ಮಾಡಿಕೊಳ್ಳುವ ಬದಲು ಬೆಟ್ಟಿಂಗ್ ವ್ಯಸನಿಗಳಾಗಿ ತಮ್ಮ ಬದುಕನ್ನು ತಾವೇ ಹಾಳುಮಾಡಿಕೊಳ್ಳುತ್ತಿದ್ದಾರೆ. ಯೌವನದ ಬಿಸಿರಕ್ತ ಅವರ ವಿವೇಚನೆಯನ್ನು ಕಸಿದು ದಾರಿತಪ್ಪಿಸುತ್ತಿದೆ. ಇವರು ಮನೆಗೆ ಮಾರಿಯಾಗಷ್ಟೇ ಅಲ್ಲದೇ ದೇಶಕ್ಕೆ ಮಾರಕವಾಗುತ್ತಿದ್ದಾರೆ. ಇಂದು ನಮ್ಮ ದೇಶ ಇಡೀ ವಿಶ್ವದಲ್ಲಿಯೇ ಅತ್ಯಂತ ಹೆಚ್ಚು ಯುವಕರನ್ನು ಹೊಂದಿದೆ ಎಂಬ ಖ್ಯಾತಿ ಗಳಿಸಿದೆ. ಆದರೆ ಯುವಕರು ದೇಶದ ಪ್ರಗತಿಗೆ ದುಡಿಯುವ ಬದಲು ಮೋಜು, ಮಸ್ತಿಗೆ, ಜೂಜಾಟಕ್ಕೆ ತಮ್ಮ ಯೌವನವನ್ನು ಮುಡುಪಾಗಿಟ್ಟರೆ ದೇಶ ಪ್ರಗತಿಯಾಗುವ ಮಾತು ಇನ್ನೆಲ್ಲಿ?

ಆನ್‌ಲೈನ್‌ನಲ್ಲಿ ರಮ್ಮಿ ಆಡಿ ಎಂಬ ಜಾಹೀರಾತು ಎಲ್ಲೆಡೆ ರಾರಾಜಿಸುತ್ತಿರುವುದನ್ನು ಕಾಣಬಹುದು. ನಾಳೆ ಹಾಳಾಗುವವರನ್ನು ಇಂದೇ ಹಾಳು ಮಾಡುವ ವ್ಯವಸ್ಥೆ ಇದು. ಮನೆಯ ಕೊಠಡಿಯಲ್ಲಿ ಕುಳಿತು ಆನ್‌ಲೈನ್ ಕ್ಲಾಸ್ ಅಟೆಂಡ್ ಮಾಡುವ ಬದಲು ಆನ್‌ಲೈನ್‌ನಲ್ಲಿ ಜೂಜಾಡಿ ಹಣ ಹಾಗೂ ಸಮಯವನ್ನು ಸುಲಭವಾಗಿ ಕಳೆಯುತ್ತಿರುವುದು ಯುವಕರ ಭವಿಷ್ಯಕ್ಕೆ ಮಾರಕವಾಗಿದೆ. ತಾಯಿತಂದೆ ಬೆವರು ಸುರಿಸಿ ದುಡಿದ ಹಣವನ್ನು ನೀರಿನಂತೆ ಖರ್ಚು ಮಾಡಿ ಅವರ ಆರ್ಥಿಕ ದುಸ್ಥಿತಿಗೆ ಕಾರಣರಾಗುತ್ತಿದ್ದಾರೆ. ಸೆಲೆಬ್ರಿಟಿಗಳು ಎಂದು ಕರೆಯಿಸಿಕೊಳ್ಳುವ ಸಿನಿಮಾ ತಾರೆಯರು, ಕ್ರಿಕೆಟ್ ತಾರೆಯರು ಆನ್‌ಲೈನ್‌ನಲ್ಲಿ ಜೂಜಾಡಿ ಎಂದು ಯುವಕರನ್ನು ಪ್ರಚೋದಿಸುತ್ತಿರುವುದು ಅಪಾಯಕಾರಿ ಬೆಳವಣಿಗೆಯಾಗಿದೆ.

ಸಿನಿಮಾ ನಾಯಕರನ್ನು ಅನುಕರಣೆ ಮಾಡುವ ಯುವಕರು ಇಂದಿಗೂ ಇದ್ದಾರೆ. ನಾಯಕನಟನ ಕರೆಗೆ ಓಗೊಟ್ಟು ಯುವಸಮೂಹ ಅನೇಕ ಜನಪರ ಕಾರ್ಯಗಳಲ್ಲಿ ತೊಡಗಿಸಿಕೊಂಡ ಉದಾಹರಣೆಗಳು ಇವೆ. ಕಣ್ಣುದಾನ ಮಾಡಿದ ನಾಯಕನಟನ ನಡೆ ಅನುಸರಿಸಿ ಲಕ್ಷಾಂತರ ಯುವಕರು ಕಣ್ಣುದಾನ ಮಾಡಿದ್ದನ್ನು ಸಹ ನೋಡಬಹುದು. ಅಂಥವರುಗಳು ತೆರೆ ಮೇಲೆ ಅಷ್ಟೇ ಅಲ್ಲದೆ ನಿಜ ಜೀವನದಲ್ಲಿಯೂ ಹೀರೋ ಆಗಿ ನಡೆದುಕೊಳ್ಳುತ್ತಾರೆ. ಆರೋಗ್ಯ ಹಾಗೂ ಸಮಾಜದ ಸ್ವಾಸ್ಥ್ಯ ಕಾಪಾಡುವ ಉತ್ಪನ್ನಗಳ ಜಾಹೀರಾತುಗಳಿಗೆ ಮಾತ್ರ ಒಪ್ಪಿಗೆ ಸೂಚಿಸುತ್ತಾರೆ. ಸಮಾಜಕ್ಕೆ ಮಾರಕವಾದ ಉತ್ಪನ್ನಗಳ ಜಾಹೀರಾತುಗಳಿಗೆ ಅವರು ಒಪ್ಪುವುದಿಲ್ಲ. ಮದ್ಯಪಾನ, ಜೂಜಾಟ ಇಂಥಹ ಜಾಹೀರಾತುಗಳನ್ನು ನಯವಾಗಿ ನಿರಾಕರಿಸಿರುತ್ತಾರೆ. ಏಕೆಂದರೆ ಅದರಿಂದ ಸಮಾಜದ ಮೇಲಾಗುವ ದುಷ್ಪರಿಣಾಮಗಳನ್ನು ಮನಗಂಡು ಅವರುಗಳು ಹಾಗೆ ನಡೆದುಕೊಂಡಿರುತ್ತಾರೆ. ಆದರೆ ಕೆಲವು ನಾಯಕನಟರು ಮಾತ್ರ ಸಾಮಾಜಿಕ ಕಳಕಳಿಯನ್ನು ಪಕ್ಕಕ್ಕೆ ಇಟ್ಟು, ಹಣದ ಆಸೆಗೋಸ್ಕರ ಸಮಾಜಕ್ಕೆ ಕಂಟಕವಾಗುವಂತ ಜಾಹೀರಾತುಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಪರದೆ ಮೇಲೆ ಸಮಾಜಕ್ಕೆ ಮಾರಕವಾಗಿರುವ ಕೃತ್ಯಗಳ ವಿರುದ್ಧ ಹೋರಾಡಿ, ಅವುಗಳಿಗೆ ಅಂತ್ಯ ಹಾಡಿ ಚಪ್ಪಾಳೆ ತಟ್ಟಿಸಿಕೊಂಡು ಹೀರೋ ಎಂದು ಕರೆಯಿಸಿಕೊಳ್ಳುವ ಇವರು, ನಿಜ ಜೀವನದಲ್ಲಿ ಆನ್‌ಲೈನ್‌ನಲ್ಲಿ ಜೂಜಾಟವಾಡಿ ಎಂದು ಪ್ರಚೋದಿಸಿ ಯುವಕರ ಸುಂದರ ಬದುಕನ್ನು ಹಾಳು ಮಾಡುತ್ತಿರುವುದು ಎಷ್ಟು ಸರಿ? ತೆರೆ ಮೇಲೆ ನಾಯಕನಟನಾಗಿ ಮಿಂಚುವವರು ನೈಜ ಬದುಕಿನಲ್ಲಿ ಖಳ ನಾಯಕರ ಕೆಲಸ ಮಾಡುವುದು ವಿಪರ್ಯಾಸ. ಯುವಕರಿಗೆ ಸನ್ಮಾರ್ಗ ತೋರುವ ಬದಲು ದುರ್ಮಾರ್ಗ ತೋರುವುದು ನ್ಯಾಯವೇ? ಇಂದು ಯುವಕರು ನಾಯಕನಟರ ಮೇಲಿನ ಅಭಿಮಾನದಿಂದ, ಅವರುಗಳ ಜಾಹೀರಾತುಗಳಿಂದ ಪ್ರಚೋದಿತರಾಗಿ ತಮ್ಮ ತಲೆಯ ಮೇಲೆ ತಾವೇ ಮಣ್ಣನ್ನು ಸುರಿದುಕೊಳ್ಳುತ್ತಿದ್ದಾರೆ.

ಸರ್ಕಾರವು ಇಂತಹ ಆಟಗಳಿಗೆ ಅನುಮತಿ ನಿರಾಕರಿಸಬೇಕು. ಲಾಟರಿ, ಆನ್‌ಲೈನ್ ಲಾಟರಿಯನ್ನು ನಿಷೇಧಿಸಿದಂತೆಯೇ ಆನ್‌ಲೈನ್ ಜೂಜಾಟಕ್ಕೂ ನಿಷೇಧ ಹೇರಬೇಕು. ಜೂಜಾಟಕ್ಕೆ ಪ್ರಚೋದಿಸುವ ಮಂದಿಗೆ ಎಚ್ಚರಿಕೆ ನೀಡಬೇಕು. ಜೂಜಾಟದಲ್ಲಿ ಪಾಲ್ಗೊಳ್ಳುವವರಿಗೆ ಸೌಲಭ್ಯಗಳನ್ನು ನಿರಾಕರಿಸಬೇಕು. ಅಪರಾಧ ಎಂದರೆ ಕೊಲೆಯನ್ನೇ ಮಾಡಬೇಕಿಲ್ಲ, ವಿಷಹಾಕಿ ಕೊಲ್ಲಬೇಕಿಲ್ಲ, ಬದಲಿಗೆ ಯುವಕರನ್ನು ಕೆಟ್ಟ ಚಟಗಳನ್ನು ರೂಢಿಸಿಕೊಳ್ಳುವಂತೆ ಮಾಡಿದರೆ ಅದು ಸ್ಲೋ ಪಾಯಿಸನ್ ರೀತಿ ಅವರ ಬದುಕನ್ನು ಹಂತಹಂತವಾಗಿ ಬಲಿತೆಗೆದುಕೊಳ್ಳುತ್ತದೆ, ಹಾಗಾಗಿ ತಪ್ಪು ದಾರಿಗೆ ಎಳೆದು ಅವರ ಬದುಕನ್ನು ಹಾಳು ಮಾಡುವುದು ಸಹ ಯಾವ ಅಪರಾಧಕ್ಕೂ ಕಮ್ಮಿ ಇಲ್ಲ.

ಯುವಕರು ತಮ್ಮ ಬದುಕನ್ನು ಹಸನುಗೊಳಿಸುವ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು. ತಮ್ಮ ಬುದ್ಧಿಯನ್ನು ಉಪಯೋಗಿಸಿ, ಒಳಿತು ಕೆಡಕುಗಳ ಕುರಿತು ಚಿಂತನೆ ನಡೆಸಬೇಕು. ಹೆತ್ತವರ ಕನಸನ್ನು ಈಡೇರಿಸುವ ನಿಟ್ಟಿನಲ್ಲಿ ಪರಿಶ್ರಮ ಹಾಕಬೇಕು. ತಮ್ಮ ಭವಿಷ್ಯ ತಮ್ಮ ಕೈಯಲ್ಲಿಯೇ ಇದೆ ಎಂದು ಅರಿಯಬೇಕು. ಪ್ರಚೋದನೆಗೆ ಒಳಗಾಗಬಾರದು. ಇಂದು ಹಾಲು ಕುಡಿವ ಮಕ್ಕಳೇ ಆರೋಗ್ಯದಿಂದ ಇಲ್ಲ, ಏಕೆಂದರೆ ಅಮೃತ ಸಮಾನವಾದ ಹಾಲು ಸಹ ಮಲಿನವಾಗಿದೆ. ಅಂತಹುದರಲ್ಲಿ ಆಲ್ಕೋಹಾಲ್ ಕುಡಿದವರು ಆರೋಗ್ಯದಿಂದ ಇರಲು ಸಾಧ್ಯವೇ?

ಶಂಕರಾಚಾರ್ಯರ ಆದರ್ಶಗಳನ್ನು ವಿದ್ಯಾರ್ಥಿಗಳು ಅಳವಡಿಸಿಕೊಳ್ಳಿರಿ: ಎಂಎಲ್‌ಸಿ ಸಿ.ಎನ್.ಮಂಜೇಗೌಡ



ಮೈಸೂರು, ಮೇ 29– ಶಂಕರಾಚಾರ್ಯರು, ರಾಮಕೃಷ್ಣ ಪರಮಹಂಸರು, ಬಸವಣ್ಣರಂತಹ ಮಹನೀಯರ ತತ್ವ ಆದರ್ಶಗಳನ್ನು ವಿದ್ಯಾರ್ಥಿಗಳು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಕರೆ ನೀಡಿದರು.

ಕರ್ನಾಟಕ ಸೇನಾಪಡೆ ವತಿಯಿಂದ ಮೈಸೂರಿನ ಶ್ರೀ ಶೃಂಗೇರಿ ಶಂಕರ ಮಠದಲ್ಲಿ ಶ್ರೀ ಶಂಕರಚಾರ್ಯರ ಜಯಂತಿ ಹಾಗೂ ತತ್ವಜ್ಞಾನಿಗಳ ದಿನಾಚರಣೆಯ ಅಂಗವಾಗಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ 'ಶ್ರೀ ಶಂಕರಾಚಾರ್ಯ ಸೇವಾ ರತ್ನ' ಪ್ರಶಸ್ತಿ ಪ್ರದಾನ ಹಾಗೂ ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮನುಷ್ಯ ಹುಟ್ಟಿದ ಮೇಲೆ ಸಮಾಜಕ್ಕೆ ಏನನ್ನಾದರೂ ಕೊಡುಗೆ ನೀಡಬೇಕು ಈ ನಿಟ್ಟಿನಲ್ಲಿ ಈ ದೇಶಕ್ಕಾಗಿ ಸಮಾಜದ ಒಳಿತಿಗಾಗಿ ತಮ್ಮ ಜೀವನವನ್ನೇ ತ್ಯಾಗ ಬಲಿದಾನ ಮಾಡಿದ ಸುಭಾಷ್ ಚಂದ್ರಬೋಸ್, ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣರವರ ಸಾಧನೆಯ ಪಾಠಗಳನ್ನು ನಾವು ಓದಿದ್ದೇವೆ ಆದರೆ ಇಂದು ಸಮಾಜದಲ್ಲಿ ಜಾತಿ ಜಾತಿಗಳ ಮೇಲೆ ವರ್ಗ ವರ್ಗಗಳ ಮೇಲೆ ಧರ್ಮ ಧರ್ಮಗಳೊಂದಿಗೆ ಒಡಕು ಉಂಟುಮಾಡಿ ಸಮಾಜದ ಜನರ ನೆಮ್ಮದಿಯನ್ನು ಹಾಳು ಮಾಡುತ್ತಿರುವ ದುಷ್ಟಶಕ್ತಿಗಳ ಬಗ್ಗೆ ನಾವೆಲ್ಲರು ಎಚ್ಚರದಿಂದಿರಬೇಕು ಎಂದರು.

ಇವತ್ತು ತಂತ್ರಜ್ಞಾನ ಬಹಳ ಮುಂದುವರೆದಿದ್ದು ಉಕ್ರೇನ್‌ನಲ್ಲಿ ನಡೆಯುವ ಯುದ್ಧವನ್ನು ಮನೆಯಲ್ಲೆ ಕುಳಿತು ನೋಡಬಹುದಾಗಿದೆ. ಆದ್ದರಿಂದ ಇಲ್ಲಿ ಇರುವ ಮಕ್ಕಳು ಮುಂದೆ ರಾಜಕಾರಣಿ ಯಾಗಬಹುದು, ಜಿಲ್ಲಾಧಿಕಾರಿಯಾಗಬಹುದು, ಮುಖ್ಯಮಂತ್ರಿಯಾದರೂ ಆಗಬಹುದು ಯಾವ ಪ್ರತಿಭೆ ಯಾರಲ್ಲಿ ಇರುತ್ತದೆ ಎಂಬುದು ಗೊತ್ತಾಗುವುದಿಲ್ಲ. ಆದ್ದರಿಂದ ವಿದ್ಯಾರ್ಥಿಗಳು ಚೆನ್ನಾಗಿ ಓದಿ ಉತ್ತಮ ಪ್ರಜೆಗಳಾಗಿ ಎಂದರು.

ಸಮಾರಂಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ದಕ್ಷಿಣ ಪದವೀಧರರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ. ರಾಮು, ಕೆ.ರಘುರಾಂ ವಾಜಪೇಯಿ, ಡಾ. ಲೀಲಾ ಕೆ.ಪ್ರಕಾಶ್, ಡಾ. ಪುಷ್ಪ ಎ.ಅಯ್ಯಂಗಾರ್, ಚಾ.ರಂ. ಶ್ರೀನಿವಾಸಗೌಡ, ಎಸ್. ಗಣೇಶ್‌ರಾವ್, ಉದಯಶಂಕರ್ ಎನ್.ತೇಜಸ್ ಲೋಕೇಶ್‌ಗೌಡ, ಶ್ರೀರಾಂಪುರ ಗ್ರಾಮ ಮಾಜಿ ಅಧ್ಯಕ್ಷ ರಮೇಶ್ ಹಾಜರಿದ್ದರು.

ಪೂರ್ವಿಕರ ವೇದ, ಉಪನಿಷತ್ತುಗಳ ಕಡೆಗಣನೆ: ಕಾಗೇರಿ ವಿಷಾದ

ಉತ್ತನಹಳ್ಳಿಯಲ್ಲಿ 'ಸರಸ್ವತಿ ಸದನಂ', 'ವಿದ್ಯಾನಂದಿನಿ ಗುರುಕುಲಂ' ಕಟ್ಟಡ ಉದ್ಘಾಟನೆ

ಮೈಸೂರು, ಮೇ 29(ಎಂಕೆ)– ಭೋಗ ಜೀವನಕ್ಕೆ ಮಾರು ಹೋಗುತ್ತಿರುವ ಯುವ ಜನಾಂಗ, ಪೂರ್ವಿಕರು ಸಂಶೋಧಿಸಿಕೊಟ್ಟಿರುವ ವೇದ, ಉಪನಿಷತ್ತಿನ ಜ್ಞಾನವನ್ನು ಕಡೆಗಣಿಸುತ್ತಿದ್ದಾರೆ ಎಂದು ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಹೊರವಲಯ ಉತ್ತನಹಳ್ಳಿಯಲ್ಲಿರುವ ಭಾರತೀ ಯೋಗಧಾಮದಲ್ಲಿ ನಿರ್ಮಿಸಿರುವ 'ಸರಸ್ವತಿ ಸದನಂ' ಹಾಗೂ ವಿದ್ಯಾನಂದಿನಿ ಗುರುಕುಲಂ' ಕಟ್ಟಡಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವವೇ ಭಾರತೀಯ ಸಂಸ್ಕೃತಿಯತ್ತ ಆಕರ್ಷಿತವಾಗುತ್ತಿರುವ ಸಂದರ್ಭದಲ್ಲಿ ನಮ್ಮ ಋಷಿ–ಮುನಿಗಳು ಅನೇಕ ವರ್ಷಗಳ ತಪಸ್ಸು ಮಾಡಿ ಸಂಶೋಧಿಸಿ ನೀಡಿರುವ ವೇದ, ಉಪನಿಷತ್ತಿನ ಜ್ಞಾನವನ್ನು ಕಡೆಗಣಿಸಲಾಗುತ್ತಿದೆ ಎಂದರು.

ಸನಾತನ ಗ್ರಂಥಗಳಲ್ಲಿ ನಮ್ಮ ಆಚಾರ–ವಿಚಾರ ಸೇರಿದಂತೆ ಮಹತ್ವದ ವಿಷಯಗಳು ಅಡಕವಾಗಿವೆ. ಅತ್ಯಂತ ಶ್ರೀಮಂತವಾದ ಭಾರತೀಯ ಸಂಸ್ಕೃತಿ ವಿಶ್ವಮಟ್ಟಕ್ಕೆ ಬೆಳೆಯುತ್ತಿದೆ. ವಿದೇಶಿಗರು ನಮ್ಮ ಸಂಸ್ಕೃತಿಯತ್ತ ಆಕರ್ಷಿತರಾಗುತ್ತಿದ್ದಾರೆ. ಆದರೆ ನಮ್ಮವರೇ ಮಹತ್ವದ ವೇದ, ಉಪನಿಷತ್ತನ್ನು ಕಲಿಯಲು ಆಸಕ್ತಿ ತೋರುತ್ತಿಲ್ಲ. ಇದರಿಂದ ನಮ್ಮ ಮೂಲ ಜ್ಞಾನವನ್ನೇ ನಾವು ಕಳೆದುಕೊಳ್ಳುತ್ತಿದ್ದೇವೆ ಎಂದು ವಿಷಾದಿಸಿದರು.

ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರು, ಸ್ವಾಮಿ ವಿವೇಕಾನಂದರು, ಛತ್ರಪತಿ ಶಿವಾಜಿ ಸೇರಿ ಧರ್ಮ ಪ್ರಚಾರಕರು ಇಲ್ಲದಿದ್ದರೆ ಇಂದು ಭಾರತೀಯ ಸಂಸ್ಕೃತಿ ಏನಾಗುತ್ತಿತ್ತು ಎಂದು ಊಹಿಸಲು ಸಾಧ್ಯವಾಗುತ್ತಿರಲಿಲ್ಲ. ಈಗ ಮತ್ತೆ ಅಂತಹ ಪರಂಪರೆ, ಜ್ಞಾನವನ್ನು ಪಡೆಯಲು ಸಂಶೋಧನೆಗಳು ಆಗಬೇಕು. ಭಿನ್ನತೆಯಿಂದ ಬೇರೆ ಬೇರೆಯಾಗಿರುವ ಎಲ್ಲರೂ ಒಂದಾಗಬೇಕು ಎಂದು ಹೇಳಿದರು.

> **ವಾಣಿಜ್ಯೀಕರಣ ನಿಲ್ಲಬೇಕು...**
> ಭಾರತೀಯ ಪರಂಪರೆಯಲ್ಲಿ ಬಂದ ಯೋಗ ವಿಶ್ವಕ್ಕೆ ಈಗ ಪರಿಚಿತವಾಗುತ್ತಿದೆ. ಇಂತಹ ಸಮಯದಲ್ಲಿ ಯೋಗವನ್ನು ಕ್ರಮಬದ್ಧವಾಗಿ ತಿಳಿಸಿಕೊಡುವ ಕೆಲಸವಾಗಬೇಕು. ಆದರೆ ಕೆಲವರು ಹಣ ಸಂಪಾದನೆಗಾಗಿ ಬಳಸಿಕೊಂಡು ವಾಣಿಜ್ಯೀಕರಣ ಮಾಡುತ್ತಿದ್ದಾರೆ. ಇಂತಹ ಕೆಲಸಕ್ಕೆ ಯಾರು ಮುಂದಾಗಬಾರದು. ಪೂರ್ವಿಕರು ಹೇಳಿಕೊಟ್ಟ ವಿದ್ಯೆಯನ್ನು ಮುಂದಿನ ಪೀಳಿಗೆಗೆ ತಲುಪಿಸುವ ಕೆಲಸ ಮಾಡಬೇಕು.
> –ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನಸಭಾಧ್ಯಕ್ಷ



ದೊಡ್ಡ ಪರಂಪರೆ: ಸಂಸದ ಪ್ರತಾಪ ಸಿಂಹ ಮಾತನಾಡಿ, ಯೋಗಕ್ಕೆ ಮೈಸೂರಿನಲ್ಲಿ ದೊಡ್ಡ ಪರಂಪರೆಯೇ ಇದೆ. ರಾಜರ ಆಶ್ರಯದಿಂದಾಗಿ ಬಿಕೆಎಸ್ ಅಯ್ಯಂಗಾರ್, ಪಟ್ಟಾಭಿ ಜೋಯಿಸ್ ಸೇರಿದಂತೆ ಹಲವರು ಯೋಗವನ್ನು ವಿಶ್ವಮಟ್ಟಕ್ಕೆ ತೆಗೆದುಕೊಂಡು ಹೋದರು. ಯೋಗಕ್ಕೆ ಮೈಸೂರು ಪ್ರಶಸ್ತವಾಗಿದ್ದು, ಈ ಬಾರಿ ಯೋಗ ದಿನಾಚರಣೆಗೆ ಪ್ರಧಾನಿ ನರೇಂದ್ರಮೋದಿ ಅವರು ಆಗಮಿಸುತ್ತಿರುವುದು ಹೆಮ್ಮೆಯ ವಿಷಯ ಎಂದರು.

ಸನ್ಮಾನ: ಕಾಸರಗೋಡಿನ ಜ್ಯೋತಿಷಿ ಡಾ.ವಿಷ್ಣುಪ್ರಸಾದ ಹೆಬ್ಬಾರ್, ವಾಸ್ತು ತಜ್ಞ ಡಾ.ಮಹೇಶ ಮುನಿಯಂಗಳ ಅವರಿಗೆ ವಿದ್ಯಾನಿಧಿ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕ ಎಸ್.ಎ.ರಾಮದಾಸ್, ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಭಾರತೀ ಯೋಗಧಾಮದ ಸಂಸ್ಥಾಪಕ ಡಾ.ಕೆ.ಎಲ್.ಶಂಕರನಾರಾಯಣ ಜೋಯ್ಸ್ ಮತ್ತಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ ಸೋಮವಾರ 30 ಮೇ 2022

ಜೂ.4, ಐವರು ಪ್ರಗತಿಪರ ರೈತರಿಗೆ ಸನ್ಮಾನ

ಮೈಸೂರು, ಮೇ 29(ಎಂಟಿವೈ)– ಕಬ್ಬು ಬೆಳೆಗಾರರ ಹೋರಾಟ ಹಿತ ರಕ್ಷಣಾ ಸಮಿತಿ ವತಿಯಿಂದ ಜೂ.4ರಂದು ಬೆಳಗ್ಗೆ 10ಕ್ಕೆ ತಾಲೂಕಿನ ಆಯರಹಳ್ಳಿಯ ಪುಟ್ಟಣ್ಣ ತೋಟದಲ್ಲಿ ಐದು ಪ್ರಗತಿಪರ ರೈತರನ್ನು ಸನ್ಮಾನಿಸಲಾಗುತ್ತಿದೆ ಎಂದು ನಿವೃತ್ತ ಪ್ರಾಧ್ಯಾಪಕ ಗಂಗಾಧರಸ್ವಾಮಿ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕಬ್ಬು ಬೆಳೆಗಾರರ ಹೋರಾಟ ಹಿತ ರಕ್ಷಣಾ ಸಮಿತಿಯು ಪ್ರತಿ ತಿಂಗಳು ಪ್ರಗತಿಪರ ರೈತರನ್ನು ಗುರುತಿಸಿ, ಸನ್ಮಾನಿಸುವ ಮೂಲಕ ಉತ್ತೇಜಿಸಲಾಗುತ್ತಿದೆ. ಇದೊಂದು ಒಳ್ಳೆಯ ಸಂಪ್ರದಾಯವಾಗಿದ್ದು, ದೇಶದ ಬೆನ್ನೆಲುಬು ಎನಿಸಿರುವ ರೈತ ಸಮುದಾಯವನ್ನು ಗೌರವಿಸುವ ಕಾರ್ಯಕ್ರಮ ಎಲ್ಲರಿಗೂ ಮಾದರಿಯಾಗಿದೆ ಎಂದರು. ಕಬ್ಬು ಬೆಳೆಗಾರರ ಹೋರಾಟ ಹಿತ ರಕ್ಷಣಾ ಸಮಿತಿ ಅಧ್ಯಕ್ಷ ಬ್ಯಾತಹಳ್ಳಿ ಮಾದಪ್ಪ ಉತ್ತಮ ಕಾರ್ಯ ನಡೆಸುತ್ತಿದ್ದು, ಮುಂದಿನ ದಿನಗಳಲ್ಲೂ ಈ ಕಾರ್ಯಕ್ರಮ ಮುನ್ನಡೆಸಿಕೊಂಡು ಹೋಗಬೇಕು ಎಂದು ಸಲಹೆ ನೀಡಿದರು. ಸಮಿತಿ ಅಧ್ಯಕ್ಷ ಬ್ಯಾತಹಳ್ಳಿ ಮಾದಪ್ಪ ಮಾತನಾಡಿ, ಪ್ರಗತಿಪರ ರೈತರಾದ ಪ್ರಭಾಮಣಿ ಆಯರಹಳ್ಳಿ, ಬಸವರಾಜಪ್ಪ ಕಲ್ಮಳ್ಳಿ, ಪ್ರಭುಸ್ವಾಮಿ ಹಳ್ಳಿಕೆರೆಹುಂಡಿ, ಪುಟ್ಟಣ್ಣ ಆಯರಹಳ್ಳಿ, ನಂಜುಂಡಸ್ವಾಮಿ ನಂದಿಗುಂದ ಅವರನ್ನು ಸನ್ಮಾನಿಸಲಾಗುವುದು. ರಾಸಾಯನಿಕ ತ್ಯಜಿಸಿ ಸಾವಯವ ಕೃಷಿಯಲ್ಲಿ ತೊಡಗಿರುವ ಮಾದರಿ ರೈತರನ್ನು ಗುರುತಿಸಿ ಅಭಿನಂದಿಸಲಾಗುತ್ತಿದೆ ಎಂದರು. ಗೋಷ್ಠಿಯಲ್ಲಿ ಸಮಿತಿ ಪದಾಧಿಕಾರಿಗಳಾದ ಬಿ.ಕೆಂಡಗಣ್ಣಸ್ವಾಮಿ ದನಗಳ್ಳಿ, ಹಳ್ಳಿಕೆರೆಹುಂಡಿ ಪ್ರಭುಸ್ವಾಮಿ, ರಾಮಪುರ ಶಿವರುದ್ರಪ್ಪ, ಗಂಗಾಧರ್ ಸ್ವಾಮಿ, ಮೂರ್ತಿ, ರಾಜೇಂದ್ರ ಹಾಗೂ ಇತರರು ಇದ್ದರು.

48 ಗಂಟೆ ಕಾದರೂ ಸಿಗದ ತಿರುಪತಿ ದರ್ಶನ

ಅಮರಾವತಿ: ಆಂಧ್ರಪ್ರದೇಶದ ಖ್ಯಾತ ಧಾರ್ಮಿಕ ಯಾತ್ರಾತಾಣ ತಿರುಪತಿಯ ತಿರುಮಲ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಭಕ್ತ ಸಾಗರವೇ ಹರಿದು ಬರುತ್ತಿದ್ದು, ದೇವರ ದರ್ಶನಕ್ಕೆ ಬರೊಬ್ಬರಿ 48 ಗಂಟೆಗಳ ಕಾಲ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ. ತಿರುಪತಿಯ ತಿರುಮಲ ವೆಂಕಟೇಶ್ವರ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಿದ್ದು, ಭಕ್ತರ ದಟ್ಟಣೆಯಿಂದಾಗಿ ದರ್ಶನಕ್ಕಾಗಿ 48ಕ್ಕೂ ಅಧಿಕ ಗಂಟೆ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಪರಿಣಾಮ ಭಕ್ತರು ತಮ್ಮ ಯಾತ್ರೆಯನ್ನು ಮುಂದೂಡುವಂತೆ ತಿರುಪತಿ ತಿರುಮಲ ದೇವಸ್ಥಾನ ಸಮಿತಿ ಭಕ್ತರಿಗೆ ಮನವಿ ಮಾಡಿದೆ.

ಒಂದನೇ ಪುಟದಿಂದ

ಗುಜರಾತ್ ಚಾಂಪಿಯನ್

ಸರಿಗಟ್ಟಿದರೇ, ಅತ್ತ ರಾಜಸ್ಥಾನ್ 14 ವರ್ಷಗಳ ಬಳಿಕ ಮತ್ತೆ ಟ್ರೋಫಿ ಜಯಸುವ ಕನಸು ಭಗ್ನಗೊಂಡಿದೆ. ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ್ ರಾಯಲ್ಸ್ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 130 ರನ್‌ಗಳ ಸಾಧಾರಣ ಮೊತ್ತ ಪೇರಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಜೋಸ್ ಬಟ್ಲರ್ ಹಾಗೂ ಯಶಸ್ವಿ ಜೈಸ್ವಾಲ್ ಮೊದಲ ವಿಕೆಟ್‌ಗೆ 31 ರನ್‌ಗಳ ಜೊತೆಯಾಟವಾಡಿದರು. ಆದರೆ 2 ಸಿಕ್ಸರ್, 1 ಬೌಂಡರಿ ಒಳಗೊಂಡ 22 ರನ್ ಗಳಿಸಿ ಉತ್ತಮವಾಗಿ ಆಡುತ್ತಿದ್ದ ಜೈಸ್ವಾಲ್, ಯಶ್ ದಯಾಲ್‌ಗೆ ವಿಕೆಟ್ ಒಪ್ಪಿಸಿದರು.

ನಂತರ ಬಂದ ನಾಯಕ ಸಂಜು ಸ್ಯಾಮ್ಸನ್ 14 ರನ್ ಗಳಿಸಿ ಹಾರ್ದಿಕ್ ಪಾಂಡ್ಯಗೆ ವಿಕೆಟ್ ಒಪ್ಪಿಸಿದರೇ, ಕನ್ನಡಿಗ ದೇವದತ್ ಪಡಿಕ್ಕಲ್ 2 ರನ್ ಗಳಿಸಿ ರಶೀದ್ ಖಾನ್‌ಗೆ ವಿಕೆಟ್ ಒಪ್ಪಿಸುವ ಮೂಲಕ ಅಭಿಮಾನಿಗಳಿಗೆ ನಿರಾಸೆ ಮೂಡಿಸಿದರು. ಇನ್ನೊಂದೆಡೆ ದಿಟ್ಟ ಹೋರಾಟ ಪ್ರದರ್ಶಿಸಿದ ಬಟ್ಲರ್ 5 ಬೌಂಡರಿ ಒಳಗೊಂಡ 39 ರನ್ ಗಳಿಸಿ ಔಟಾದರು. 11 ರನ್ ಗಳಿಸಿದ್ದ ಶಿಮ್ರಾನ್ ಹೆಟ್ಮೆಯರ್ ಕೂಡ ಹಾರ್ದಿಕ್ ಬಲೆಗೆ ಬಿದ್ದರು. ಅಂತಿಮವಾಗಿ ರಿಯಾನ್ ಪರಾಗ್ 15, ಆರ್. ಅಶ್ವಿನ್ 6, ಟ್ರೆಂಟ್ ಬೌಲ್ಟ್ 11 ಹಾಗೂ ಒಬೆಡ್ ಮೆಕೋಯ್ 8 ರನ್ ಗಳಿಸಿದರು. ಗುಜರಾತ್ ಪರ ನಾಯಕ ಹಾರ್ದಿಕ್ ಪಾಂಡ್ಯ 3, ಸಾಯಿ ಕಿಶೋರ್ 2, ರಶೀದ್ ಖಾನ್, ಯಶ್ ದಯಾಲ್ ಹಾಗೂ ಮೊಹಮ್ಮದ್ ಶಮಿ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ನಂತರ ಸಾಧಾರಣ ಗುರಿ ಬೆನ್ನತ್ತಿದ ಗುಜರಾತ್ ಟೈಟಾನ್ಸ್ ಆರಂಭ ಉತ್ತಮವಾಗಿರಲಿಲ್ಲ. ತಂಡದ ಮೊತ್ತ 23 ರನ್ ಆಗುವಷ್ಟರಲ್ಲಿ ಗುಜರಾತ್ 2 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ವೃದ್ಧಿಮಾನ್ ಸಹ 7, ಮ್ಯಾಥ್ಯೂ ವೇಡ್ 8 ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು. ಈ ವೇಳೆ ಒಂದಾದ ಶುಭ್‌ಮನ್ ಗಿಲ್ ಹಾಗೂ ನಾಯಕ ಹಾರ್ದಿಕ್ ಪಾಂಡ್ಯ ಮೂರನೇ ವಿಕೆಟ್‌ಗೆ 63 ರನ್ ಜೊತೆಯಾಟವಾಡುವ ಮೂಲಕ ತಂಡದ ಗೆಲುವನ್ನು ಖಚಿತಪಡಿಸಿದರು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಪಾಂಡ್ಯ 34 ರನ್ ಗಳಿಸಿ ಚಹಲ್‌ಗೆ ವಿಕೆಟ್ ಒಪ್ಪಿಸಿದರು. ನಂತರ ಬಂದ ಡೇವಿಡ್ ಮಿಲ್ಲರ್ ಗಿಲ್ ಜೊತೆಗೂಡಿ ತಂಡಕ್ಕೆ ಗೆಲುವು ತಂದುಕೊಟ್ಟರು. ಉಳಿದಂತೆ ಮಿಲ್ಲರ್ 32, ಶುಭ್‌ಮನ್ ಗಿಲ್ 45 ರನ್ ಗಳಿಸಿ ಅಜೇಯರಾಗಿ ಉಳಿದರು. ಅಂತಿಮವಾಗಿ 18.1 ಓವರ್‌ಗಳಲ್ಲಿ 133 ರನ್ ಗಳಿಸುವ ಮೂಲಕ ಗುಜರಾತ್ ಗೆಲುವಿನ ನಗೆ ಬೀರಿತು. ರಾಜಸ್ಥಾನ್ ಪರ ಟ್ರೆಂಟ್ ಬೋಲ್ಟ್, ಪ್ರಸಿದ್ಧ ಕೃಷ್ಣ, ಚಹಲ್ ತಲಾ ಒಂದೊಂದು ವಿಕೆಟ್ ಪಡೆದರು. ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಭರ್ಜರಿ ಪ್ರದರ್ಶನ ನೀಡಿದ ಹಾರ್ದಿಕ್ ಪಾಂಡ್ಯ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಜೋಸ್ ಬಟ್ಲರ್ ಸರಣಿ ಶ್ರೇಷ್ಠ ಪ್ರಶಸ್ತಿ ಪಡೆದರು.

ಸಮಾರೋಪ ಸಮಾರಂಭ: ಪಂದ್ಯಕ್ಕೂ ಮುನ್ನಾ ನಡೆದ ಸಮಾರೋಪ ಸಮಾರಂಭದಲ್ಲಿ ಬಾಲಿವುಡ್ ನಟ ರಣವೀರ್ ಸಿಂಗ್, ಖ್ಯಾತ ಸಂಗೀತ ನಿರ್ದೇಶಕ ಎ.ಆರ್.ರೆಹಮಾನ್ ನೆರೆದಿದ್ದ ಪ್ರೇಕ್ಷಕರನ್ನು ರಂಜಿಸಿದರು. ರಣವೀರ್ ಸಿಂಗ್ ಕೆಜಿಎಫ್ 2 ಚಿತ್ರದ ಹಾಡಿಗೆ ಹೆಜ್ಜೆ ಹಾಕಿದರೇ, ರೆಹಮಾನ್ ದೇಶಭಕ್ತಿ ಹಾಡಿನ ಮೂಲಕ ಕ್ರೀಡಾ ಪ್ರಪಂಚವನ್ನು ಮತ್ತೊಂದು ದಿಕ್ಕಿನೆಡೆ ಕರೆದುಕೊಂಡು ಹೋದರು.

ಗಿನ್ನಿಸ್ ದಾಖಲೆ: ಕ್ರೀಡಾಂಗಣದಲ್ಲಿ ಅತಿದೊಡ್ಡ ಟಿ–ಶರ್ಟ್ ಅನ್ನು ಹಾಕಲಾಗಿತ್ತು. ಅದರ ಉದ್ದ 66 ಮೀಟರ್ ಇದ್ದು, ಈ ಮೂಲಕ ಐಪಿಎಲ್ ನಲ್ಲಿ ಗಿನ್ನಿಸ್ ದಾಖಲೆಯೊಂದು ಸೃಷ್ಟಿಯಾಯಿತು. ವೇದಿಕೆಯಲ್ಲಿ ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ, ಮಂಡಳಿ ಕಾರ್ಯದರ್ಶಿ ಜಯ್ ಶಾ ಮತ್ತು ಐಪಿಎಲ್ ಅಧ್ಯಕ್ಷ ಬ್ರಿಜೇಶ್ ಉಪಸ್ಥಿತರಿದ್ದರು.

ಟೂರ್ನಿಯ ಬಹುಮಾನ, ಹೈಲೈಟ್ಸ್...

ಚಾಂಪಿಯನ್: ಗುಜರಾತ್ ಟೈಟಾನ್ಸ್ (20 ಕೋಟಿ)
ರನ್ನರ್ಸ್ ಅಪ್: ರಾಜಸ್ಥಾನ್ ರಾಯಲ್ಸ್ (12.5 ಕೋಟಿ)
ಒಟ್ಟು ಬೌಂಡರಿ: 2015 **ಒಟ್ಟು ಸಿಕ್ಸರ್:** 1062 **ಒಟ್ಟು ವಿಕೆಟ್:** 911
ಆರೆಂಜ್ ಕ್ಯಾಪ್: ಜೋಸ್ ಬಟ್ಲರ್ (863 ರನ್)
ಪರ್ಪಲ್ ಕ್ಯಾಪ್: ಯಜುವೇಂದ್ರ ಚಹಲ್ (27 ವಿಕೆಟ್)
ಉದಯೋನ್ಮುಖ ಆಟಗಾರ: ಉಮ್ರಾನ್ ಮಲ್ಲಿಕ್
ಗರಿಷ್ಠ ಸಿಕ್ಸ್ ಪ್ರಶಸ್ತಿ: ಜೋಸ್ ಬಟ್ಲರ್ (45)
ಗರಿಷ್ಠ ಬೌಂಡರಿ ಪ್ರಶಸ್ತಿ: ಜೋಸ್ ಬಟ್ಲರ್ (83)
ಸೀಸನ್ ಗೇಮ್ ಚೇಂಜರ್: ಜೋಸ್ ಬಟ್ಲರ್
ಸೂಪರ್ ಸ್ಟ್ರೈಕರ್: ದಿನೇಶ್ ಕಾರ್ತಿಕ್
ಅತ್ಯಂತ ಮೌಲ್ಯಯುತ ಆಟಗಾರ: ಜೋಸ್ ಬಟ್ಲರ್
ಫೇರ್ ಪ್ಲೇ ಪ್ರಶಸ್ತಿ: ಗುಜರಾತ್ ಟೈಟಾನ್ಸ್, ರಾಜಸ್ಥಾನ್ ರಾಯಲ್ಸ್
ಪವರ್ ಪ್ಲೇಯರ್ಸ್ ಅವಾರ್ಡ್: ಜೋಸ್ ಬಟ್ಲರ್
ಟೂರ್ನಿ ವೇಗದ ಎಸೆತ: ಲಾಕಿ ಫರ್ಗ್ಯೂಸನ್

ದೇಶದ ಉದ್ದಗಲಕ್ಕೂ ಭ್ರಷ್ಟಾಚಾರ ತಾಂಡವವಾಡುತ್ತಿದೆ

ನಿವೃತ್ತ ಲೋಕಾಯುಕ್ತ ಎನ್.ಸಂತೋಷ್ ಹೆಗ್ಡೆ ಬೇಸರ



ಮಂಡ್ಯ, ಮೇ 29(ಮೋಹನ್ ರಾಜ್)– ದೇಶದ ಅಭಿವೃದ್ಧಿಯಲ್ಲಿ ಮುಂಚೂಣಿ ಪಾತ್ರ ವಹಿಸಬೇಕಾದ ನಾಲ್ಕು ಆಧಾರ ಸ್ತಂಭಗಳೂ ಜವಾಬ್ದಾರಿ ನಿರ್ವಹಿಸುವಲ್ಲಿ ವಿಫಲವಾಗಿದ್ದು, ದೇಶದ ಉದ್ದಗಲಕ್ಕೂ ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂದು ನಿವೃತ್ತ ಲೋಕಾಯುಕ್ತ ಎನ್.ಸಂತೋಷ್ ಹೆಗ್ಡೆ ಬೇಸರ ವ್ಯಕ್ತಪಡಿಸಿದರು.

ನಗರದ ಪಿಇಎಸ್ ಇಂಜಿನಿಯರಿಂಗ್ ಕಾಲೇಜಿನ ಹಳೇ ವಿದ್ಯಾರ್ಥಿಗಳ ವತಿಯಿಂದ ಕಾಲೇಜಿನ ಪ್ಲೇಸ್‌ಮೆಂಟ್ ಸಭಾಂಗಣದಲ್ಲಿ ನಡೆದ ಹಳೇ ವಿದ್ಯಾರ್ಥಿಗಳ ಸಮಾಗಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದೇಶದ ಅಭಿವೃದ್ಧಿಗಾಗಿ ಸಂವಿಧಾನ ಜಾರಿಗೊಳಿಸಿ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳನ್ನು ಅಸ್ತಿತ್ವಕ್ಕೆ ತರಲಾಯಿತು. ಇದರೊಂದಿಗೆ 4ನೇ ಸ್ತಂಭವಾಗಿ ಮಾಧ್ಯಮ ಸಹ ಕಾರ್ಯ ನಿರ್ವಹಿಸುತ್ತಿದ್ದು, ಇವುಗಳು ತಮ್ಮ ಜವಾಬ್ದಾರಿ ಸರಿಯಾಗಿ ನಿರ್ವಹಿಸುವಲ್ಲಿ ವಿಫಲವಾಗಿರುವ ಕಾರಣ ಭ್ರಷ್ಟಾಚಾರ ಮಿತಿ ಮೀರಿದೆ. ಇದು ಕೆಲವು ವ್ಯಕ್ತಿಗಳ ತಪ್ಪಲ್ಲ. ಸಮಾಜದ ತಪ್ಪು ಎಂದ ಅವರು, ಭ್ರಷ್ಟಾಚಾರ ತಡೆಯಲು ನನ್ನ ವಯಸ್ಸಿನವರಿಂದ ಸಾಧ್ಯವಿಲ್ಲ. ದೇಶದ ಬೆನ್ನೆಲುಬಾಗಿರುವ ಯುವ ಸಮೂಹ ಮನಸ್ಸು ಮಾಡಿದರೆ ಭ್ರಷ್ಟಾಚಾರದ ದೇಶವನ್ನು ಸರಿದಾರಿಗೆ ತರಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

80ರ ದಶಕದಲ್ಲಿ 52 ಲಕ್ಷ ಯೋಧರಿಗೆ ಜೀಪ್ ಖರೀದಿಯಲ್ಲಿ ಭಾರೀ ಭ್ರಷ್ಟಾಚಾರ ನಡೆಯಿತು. ನಂತರದ ದಿನಗಳಲ್ಲಿ ಪ್ರತಿ ವರ್ಷ ಒಂದೆರಡು ಹಗರಣ ಕಂಡು ಬರುತ್ತಿದ್ದವು. ಇವುಗಳಲ್ಲಿ ತೊಡಗಿರುವರ ಅಭಿವೃದ್ಧಿಯಾಗುತ್ತಿತ್ತು. ಆದರೆ ದೇಶ ಅಭಿವೃದ್ಧಿ ಮಂದ ಗತಿಯಲ್ಲಿತ್ತು ಎಂದು ವಿಷಾದಿಸಿದರು.

ಬೋಫೋರ್ಸ್ ಹಗರಣದಲ್ಲಿ 62 ಸಾವಿರ ಕೋಟಿ ಭ್ರಷ್ಟಾಚಾರ ನಡೆದಿತ್ತು. 2009 ರಲ್ಲಿ ಕಾಮನ್‌ವೆಲ್ತ್‌ನಲ್ಲಿ 70 ಸಾವಿರ ಕೋಟಿ ಭ್ರಷ್ಟಾಚಾರ ನಡೆದಿತ್ತು. ಇದರಲ್ಲಿ ಕೆಲವೇ ಕೆಲವು ವ್ಯಕ್ತಿಗಳು ಕೊಳ್ಳೆ ಹೊಡೆದಿದ್ದರು ಎಂದು ಅಕೌಂಟೆಂಟ್ ಜನರಲ್ ತಮ್ಮ ವರದಿಯಲ್ಲಿ ತಿಳಿಸಿದ್ದರು. 2010ರಲ್ಲಿ ಕಲ್ಲಿದ್ದಲು ಹಗರಣದಲ್ಲಿ 176 ಕೋಟಿ ಹಗರಣ ಕಂಡು ಬಂತು. ಇದು ಆರೂವರೆ ಕೋಟಿ ಜನಸಂಖ್ಯೆಯನ್ನು ಹೊಂದಿರುವ ಕರ್ನಾಟಕದ ಬಜೆಟ್‌ನ ಗಾತ್ರದಷ್ಟಾಗಿತ್ತು. ಇಷ್ಟೊಂದು ಹಣ ಚಿನ್ನದ ಖಜಾನೆಯಿಂದ ಸೋರಿ ಹೋದರೆ ಇನ್ನು ದೇಶ ಅಭಿವೃದ್ಧಿಯಲ್ಲಿ ಯಾವ ರೀತಿ ಸಾಗುತ್ತದೆ ಎಂಬುದನ್ನು ಎಲ್ಲರೂ ಅರಿತುಕೊಳ್ಳುವ ಅಗತ್ಯವಿದೆ ಎಂದರು.

1985 ರಲ್ಲಿ ರಾಜೀವ್ ಗಾಂಧಿ ಪ್ರಧಾನಿಯಾಗಿದ್ದ ವೇಳೆ ಅವರೇ ಹೇಳಿದಂತೆ ಕೇಂದ್ರ ಸರ್ಕಾರ ಮಂಜೂರು ಮಾಡಿದ ಒಂದು ರೂ.ನಲ್ಲಿ ಫಲಾನುಭವಿಗೆ ತಲುಪುತ್ತಿದ್ದುದು ಕೇವಲ 15 ಪೈಸೆ ಮಾತ್ರ. ಉಳಿದ ಹಣ ಎಲ್ಲಿಗೆ ಹೋಗುತ್ತಿತ್ತು? ಹೀಗಾದರೆ ದೇಶದ ಅಭಿವೃದ್ಧಿ ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ದೇಶದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ ನನಗೆ ಏನೂ ತಿಳಿದಿರಲಿಲ್ಲ. ಎಲ್ಲರೂ ಸುಖವಾಗಿದ್ದಾರೆ ಎಂದು ಭಾವಿಸಿದ್ದೆ. ಆದರೆ, ಲೋಕಾಯುಕ್ತನಾದ ನಂತರ ಬ್ರಹ್ಮಾಂಡ ಭ್ರಷ್ಟಾಚಾರ ಬೆಳಕಿಗೆ ಬಂತು. ಜೈಲು ಶಿಕ್ಷೆ ಅನುಭವಿಸಿ ಬಿಡುಗಡೆಯಾಗುತ್ತಾರೆ ಎಂದರೆ ಅವರನ್ನು ಸ್ವಾಗತಿಸಲು ಜೈಲಿನ ಬಾಗಿಲ ಬಳಿ ಹಾರ ತುರಾಯಿ ಹಿಡಿದು ಅವರ ಬೆಂಬಲಿಗರು ನಿಲ್ಲುತ್ತಾರೆ. ಇಂತಹ ಪರಿಸ್ಥಿತಿಯಿಂದ ಭ್ರಷ್ಟಾಚಾರ ತೊಲಗಿಸಲು ಸಾಧ್ಯವೇ ಎಂದರು.

ಪಿಇಟಿ ಅಧ್ಯಕ್ಷ ಕೆ.ಎಸ್.ವಿಜಯಾನಂದ ಅಧ್ಯಕ್ಷತೆ ವಹಿಸಿದ್ದರು. ಪಿಇಟಿ ಕಾರ್ಯದರ್ಶಿ ಎಸ್.ಎಲ್.ಶಿವಪ್ರಸಾದ್, ಪ್ರಾಂಶುಪಾಲರಾದ ಡಾ.ಆರ್.ಎಂ.ಮಹಾಲಿಂಗೇಗೌಡ, ಡಾ.ಬಿ.ಎಸ್.ಜಯಶಂಕರ್‌ಬಾಬು, ನವೀನ್ ಕುಮಾರ್, ಶಿವರಾಜ್ ಕೀಲಾರ, ಚನ್ನಯ್ಯ, ಸಿದ್ದೇಗೌಡ, ಡಿ.ಎಸ್.ದೇವರಾಜು ಇತರರಿದ್ದರು.

ಶ್ರೀರಂಗಪಟ್ಟಣದಲ್ಲಿ ಅಂಬರೀಶ್ ಹುಟ್ಟುಹಬ್ಬ ಆಚರಣೆ



ಶ್ರೀರಂಗಪಟ್ಟಣ, ಮೇ 29– ಪಟ್ಟಣದಲ್ಲಿ ರೆಬಲ್‌ಸ್ಟಾರ್ ಡಾ.ಅಂಬರೀಶ್ ಹುಟ್ಟುಹಬ್ಬವನ್ನು ಭಾನುವಾರ ಸಂಭ್ರಮದಿಂದ ಆಚರಿಸಲಾಯಿತು.

ಪಟ್ಟಣದ ಮೈಸೂರು–ಬೆಂಗಳೂರು ಹೆದ್ದಾರಿಯ ಕುವೆಂಪು ವೃತ್ತದಲ್ಲಿ ಅಂಬರೀಶ್ ಅಭಿಮಾನಿಗಳ ಸಂಘದ ಗೌರವಾಧ್ಯಕ್ಷ ಎಸ್.ಎಲ್.ಲಿಂಗರಾಜು ನೇತೃತ್ವದಲ್ಲಿ ಜಮಾಯಿಸಿದ ಅಭಿಮಾನಿಗಳು ಅಂಬರೀಶ್ ಅವರ ಭಾವಚಿತ್ರಕ್ಕೆ ಹಾಲಿನ ಅಭಿಷೇಕ ಮಾಡಿ ವಿಶೇಷ ಪೂಜೆ ಸಲ್ಲಿಸಿ ಸಾರ್ವಜನಿಕರಿಗೆ ಸಿಹಿ ಹಂಚಿ ಸಂಭ್ರಮಿಸಿದರು. ಬಳಿಕ ಸಾರ್ವಜನಿಕ ಆಸ್ಪತ್ರೆಗೆ ತೆರಳಿ ರೋಗಿಗಳಿಗೆ ಬ್ರೆಡ್, ಹಣ್ಣು ಹಂಪಲು ವಿತರಿಸಿ, ವೈದ್ಯರಿಗೆ ಗೌರವ ಸಲ್ಲಿಸಿದರು. ಅಲ್ಲದೇ ಪಟ್ಟಣದ ಪತ್ರಕರ್ತರ ಭವನಕ್ಕೆ ತೆರಳಿ ನೂತನ ಪದಾಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಿದರು.

ಅಂಬರೀಶ್ ಅಭಿಮಾನಿಗಳ ಸಂಘದ ಗೌರವಾಧ್ಯಕ್ಷ ಎಸ್.ಎಲ್.ಲಿಂಗರಾಜು ಮಾತನಾಡಿ, ರಾಜ್ಯಕ್ಕೆ, ಜಿಲ್ಲೆಗೆ ಅಂಬರೀಶ್ ಅವರ ಕೊಡುಗೆ ಅಪಾರ. ಅಂಬರೀಶ್ ಅವರ ಪ್ರೀತಿಗೆ ನಾವೆಲ್ಲಾ ಮಾರು ಹೋಗಿದ್ದೇವೆ. ಇಂದು ಅವರು ನಮ್ಮೊಂದಿಗೆ ಇಲ್ಲದಿದ್ದರೂ ಅವರ ನೆನಪಿಗೆ ಅಂಬರೀಶ್ ಅಭಿಮಾನಿಗಳ ಸಂಘ ಹಲವು ಜನಪರ ಕಾರ್ಯಕ್ಕೆ ಮುಂದಾಗಿದೆ ಎಂದರು.

ಈ ವೇಳೆ ತಾಲೂಕು ಅಂಬರೀಶ್ ಅಭಿಮಾನಿ ಸಂಘದ ಅಧ್ಯಕ್ಷ ಮಹೇಶ್, ಪುರಸಭೆ ಮಾಜಿ ಸದಸ್ಯ ಸುನೀಲ್, ಈ.ಕುಮಾರ್, ಯುವ ಮುಖಂಡ ದರ್ಶನ್ ಲಿಂಗರಾಜು, ಹಿರಿಯ ಕಾಂಗ್ರೆಸ್ ಮುಖಂಡ ಗುರುಲಿಂಗಣ್ಣ, ಕೆಪಿಸಿಸಿ ಸದಸ್ಯ ಎನ್.ಗಂಗಾಧರ್, ತಮ್ಮಣ್ಣ, ರಘು, ಒಕ್ಕಲಿಗರ ಸಂಘದ ಅಧ್ಯಕ್ಷ ದೇವರಾಜು, ಸಿ.ಸ್ವಾಮೀಗೌಡ, ರಾಮೇಗೌಡ, ಪುಟ್ಟರಾಜು, ಮಹದೇವಸ್ವಾಮಿ, ಮಂಜು, ಮಂಡ್ಯ ರಕ್ಷಣಾ ವೇದಿಕೆ ಅಧ್ಯಕ್ಷ ಶಂಕರ್ ಬಾಬು, ಕೆಂಪೇಗೌಡ ಯುವ ವೇದಿಕೆ ಅಧ್ಯಕ್ಷ ಮಹೇಶ್, ಪ್ರಿಯಾ, ಕಸಾಪ ನಗರಾಧ್ಯಕ್ಷೆ ಸರಸ್ವತಮ್ಮ, ಜ್ಞಾನೇಶ್, ಅರುಂಧತಿಯಾರ್ ಸಂಘದ ಅಧ್ಯಕ್ಷ ಕೃಷ್ಣ, ನದೀಮ್ ಪಾಷ, ಯಶ್, ಪ್ರಭಾಕರ್, ಪ್ರದೀಪ್, ಶಿವಕುಮಾರ್, ರವಿಚಂದ್ರ ಸೇರಿದಂತೆ ಇತರರರಿದ್ದರು.

ತರಬೇತಿಗಾಗಿ ಅರ್ಜಿ ಆಹ್ವಾನ

ಮಂಡ್ಯ, ಮೇ 29– ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಪ.ಜಾತಿ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣದಲ್ಲಿ 2 ವರ್ಷಗಳ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು 40 ವರ್ಷದೊಳಗಿರಬೇಕು ಹಾಗೂ ವಾರ್ಷಿಕ ರೂ. 2.50 ಲಕ್ಷ ಆದಾಯದ ಮಿತಿಯಿರಬೇಕು. ಅಭ್ಯರ್ಥಿಗಳು www.sw.kar.nic.in ಮೂಲಕ ಜೂ.30 ರೊಳಗೆ ಅರ್ಜಿ ಸಲ್ಲಿಸಿ ಸಂಬಂಧಿಸಿದ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಗೆ ಅರ್ಜಿ ಪ್ರತಿ ಸಲ್ಲಿಸಬಹುದು. ಮಾಹಿತಿಗೆ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು ಹಾಗೂ ತಾಲೂಕುಗಳ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಬಹುದು.

ಅಂಬರೀಶ್ ಸ್ಮಾರಕ, ಪುತ್ಥಳಿಗೆ ಪೂಜೆ



ಭಾರತೀನಗರ, ಮೇ 29(ಅ.ಸತೀಶ್)– ಚಿತ್ರನಟ ಅಂಬರೀಶ್ ಹುಟ್ಟುಹಬ್ಬದ ಅಂಗವಾಗಿ ಇಲ್ಲಿನ ದೊಡ್ಡರಸಿನಕೆರೆಯಲ್ಲಿ ಅಂಬರೀಶ್ ಸ್ಮಾರಕಕ್ಕೆ ಸಂಸದೆ ಸುಮಲತಾ ಅಂಬರೀಶ್ ಹಾಗೂ ಪುತ್ರ ಅಭಿಷೇಕ್ ಪೂಜೆ ಸಲ್ಲಿಸಿದರು. ಬಳಿಕ ಗ್ರಾಮದ ಅಂಬಿ ಸರ್ಕಲ್‌ಗೆ ಭೇಟಿ ನೀಡಿ ಅಂಬರೀಶ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಕೇಕ್ ಕತ್ತರಿಸಿ ಅಭಿಮಾನಿಗಳಿಗೆ ಸಿಹಿ ತಿನ್ನಿಸಿದರು. ಸಂಸದೆ ಸುಮಲತಾ ಮಾತನಾಡಿ, ಮಂಡ್ಯ ಜನತೆ ನನ್ನ ಪತಿ ಅಂಬರೀಶ್ ಮೇಲೆ ಇಟ್ಟ ಅಭಿಮಾನದಿಂದ ಇಂದು ಸಂಸದೆಯಾಗಿ ಕೆಲಸ ನಿರ್ವಹಿಸಲು ಸಾಧ್ಯವಾಯಿತು ಎಂದರು. ಅಂಬರೀಶ್ ಹುಟ್ಟುಹಬ್ಬವನ್ನು ಜಿಲ್ಲೆಯ ವಿವಿಧೆಡೆ ಆಚರಿಸುತ್ತಿರುವುದು ನನಗೆ ಸಂತಸ ತಂದಿದ್ದರೇ, ಅವರನ್ನು ಕಳೆದುಕೊಂಡಿರುವ ನೋವು ನನ್ನನ್ನು ಕಾಡುತ್ತಿದೆ ಎಂದರು. ಇದೇ ವೇಳೆ ಅಭಿಮಾನಿಗಳು ಅಂಬರೀಶ್‌ಗೆ ಜೈಕಾರ ಹಾಕಿದರು.

ಈ ವೇಳೆ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ಚಿತ್ರನಟ ದೊಡ್ಡಣ್ಣ, ಅಂಬಿ ಸರ್ಕಲ್‌ನ ಅಧ್ಯಕ್ಷ ಡಿ.ಸಿ.ಮಹೇಶ್, ಸುನೀಲ್, ಡೈರಿ ಶಿವ, ಡಿ.ಕೆ.ಮಧು, ಅಮರ್, ರಮೇಶ್, ಮಧುಸೂದನ್, ಪುಟ್ಟರಾಜು, ಮಹೇಶ್, ಜೀವನ್ ಸೇರಿದಂತೆ ಇನ್ನಿತರರಿದ್ದರು.

ಕಾಂಗ್ರೆಸ್ ಅಧಿಕಾರಕ್ಕೆ ಬರುವುದನ್ನು ತಡೆಯಲು ಸಾಧ್ಯವಿಲ್ಲ

ಮಾಜಿ ಸಚಿವ ಎನ್.ಚಲುವರಾಯಸ್ವಾಮಿ



ಪಾಂಡವಪುರ, ಮೇ 29– ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ ಎಂದು ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಪಟ್ಟಣದ ಅನ್ನಪೂರ್ಣೇಶ್ವರಿ ಹೋಟೆಲ್‌ನಲ್ಲಿ ನಡೆದ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಮಾಡಿರುವ ಕೆಲಸಗಳನ್ನು ಯಾರೂ ಅಲ್ಲಗೆಳೆಯಲು ಸಾಧ್ಯವಿಲ್ಲ. ಸಿದ್ದರಾಮಯ್ಯನವರು ಸಿಎಂ ಆಗಿದ್ದ ಸಂದರ್ಭ ರಾಜ್ಯದಲ್ಲಿ ಉತ್ತಮ ಆಡಳಿತ ನೀಡಿದ್ದಾರೆ ಎಂದು ಬಣ್ಣಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವ ಭಯದಿಂದ ಬಿಜೆಪಿ ನಾಯಕರು ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಅಲ್ಲದೇ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ನಡುವೆ ಭಿನ್ನಾಭಿಪ್ರಾಯವಿದೆ ಎನ್ನುತ್ತಾರೆ. ಅದನ್ನು ಬಿಟ್ಟರೆ ಬೇರೇನೂ ಹೇಳಲು ಸಾಧ್ಯವಿಲ್ಲ. ಹಾಗಾದ್ರೆ ಬಿಜೆಪಿಯಲ್ಲಿ ಎಲ್ಲವೂ ಸರಿ ಇದೆಯೇ, ಯಡಿಯೂರಪ್ಪ ಮತ್ತು ಬಿಜೆಪಿ ಪಕ್ಷ ಚೆನ್ನಾಗಿದೆಯಾ?, ಸಿಎಂ ಬೊಮ್ಮಾಯಿ ಮತ್ತು ಜಗದೀಶ್ ಶೆಟ್ಟರ್ ಚೆನ್ನಾಗಿದ್ದಾರಾ?, ಅಶ್ವತ್ಥ್ ನಾರಾಯಣ ಮತ್ತು ಅಶೋಕ್ ನಡುವೆ ಎಲ್ಲವೂ ಚೆನ್ನಾಗಿದೆಯಾ ಎಂದು ಪ್ರಶ್ನಿಸಿದ ಅವರು, ನಮ್ಮಲ್ಲಿ ಡಿಕೆಶಿ ಮತ್ತು ಸಿದ್ದರಾಮಯ್ಯ ನಡುವೆ ಸಿಎಂ ಆಗುವ ವಿಚಾರದಲ್ಲಿ ಸ್ವಲ್ಪ ಭಿನ್ನಾಭಿಪ್ರಾಯ ಇರಬಹುದು. ಆದರೆ, ಬಿಜೆಪಿಯಲ್ಲಿ ಹತ್ತಾರು ಬಣಗಳಿದ್ದು ಎಲ್ಲರ ನಡುವೆ ಸಾಕಷ್ಟು ಭಿನ್ನಾಭಿಪ್ರಾಯವಿದೆ ಎಂದು ಕಿಡಿಕಾರಿದರು.

ರಾಜ್ಯದಲ್ಲಿ ಭ್ರಷ್ಟ ಬಿಜೆಪಿ ಸರ್ಕಾರ ಆಡಳಿತ ನಡೆಸುತ್ತಿದೆ. ಕಮೀಷನ್ ಧಂದೆ, ಪಿಎಸ್‌ಐ ಅಕ್ರಮ ನೇಮಕಾತಿ ಸೇರಿದಂತೆ ಹಲವು ಭ್ರಷ್ಟಾಚಾರ ತಾಂಡವಾಡುತ್ತಿವೆ. ಹಾಗಾಗಿ ಬಿಜೆಪಿಗೆ ಬುದ್ದಿ ಕಲಿಸಬೇಕಾದರೆ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಮತ ನೀಡಿ ಎಂದು ಮನವಿ ಮಾಡಿದರು.

ಜಿಲ್ಲೆಯಲ್ಲಿ ಪಕ್ಷದ ಶಾಸಕರು, ಸಂಸದರು ಇಲ್ಲದಿದ್ದರೂ, ಸ್ಥಳೀಯ ಸಂಸ್ಥೆ, ಸಹಕಾರ ಸಂಘಗಳ ಚುನಾವಣೆ, ಎಂಎಲ್‌ಸಿ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದೇವೆ. ಮುಂಬರುವ ವಿಧಾನಸಭಾ ಚುನಾವಣೆಗೆ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಫಲಿತಾಂಶ ದಿಕ್ಸೂಚಿಯಾಗಲಿದೆ ಎಂದರು.

ಪದವೀಧರ ಕ್ಷೇತ್ರದ ಮತದಾರರು ಪ್ರಜ್ಞಾವಂತರಿದ್ದಾರೆ. ಒಂದು ಮತ ಹಾಕಬೇಕಾದರೆ ಯಾರಿಗೆ ಹಾಕಬೇಕು ಎನ್ನುವುದನ್ನು ಆಲೋಚನೆ ಮಾಡಲಿದ್ದಾರೆ. ಮಧು ಜಿ.ಮಾದೇಗೌಡರು ಶಿಕ್ಷಣ ಸಂಸ್ಥೆ ನಡೆಸಿ ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದ್ದಾರೆ. ಅವರ ತಂದೆ ಜಿ.ಮಾದೇಗೌಡರು ಜಿಲ್ಲೆಯ ಜನರಿಗಾಗಿ ಹೋರಾಟ ನಡೆಸಿದ ಮಹಾನ್ ನಾಯಕರು. ಅಂತಹವರ ಪುತ್ರನಿಗೆ ಜಿಲ್ಲೆಯ ಜನತೆ ಮೊದಲ ಪ್ರಾಶಸ್ತ್ಯದ ಮತ ನೀಡಲಿದ್ದಾರೆ ಎನ್ನುವ ವಿಶ್ವಾಸ ವ್ಯಕ್ತಪಡಿಸಿದರು.

ಮಾಜಿ ಸಚಿವ ನರೇಂದ್ರಸ್ವಾಮಿ ಮಾತನಾಡಿ, ಜಿಲ್ಲೆಯ ಮಂಡ್ಯ ಶಾಸಕರ ಕೊಡುಗೆ ಶೂನ್ಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಜಿಪಂ ಮಾಜಿ ಸದಸ್ಯ ಹೆಚ್.ತ್ಯಾಗರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಕೃಷ್ಣೇಗೌಡ, ಯುವ ಘಟಕದ ಜಿಲ್ಲಾಧ್ಯಕ್ಷ ವಿಜಯ ಕುಮಾರ್, ರವಿ ಬೋಜೇಗೌಡ, ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಸಿ.ಆರ್.ರಮೇಶ್ ಸೇರಿದಂತೆ ಹಲವರಿದ್ದರು.

ಸಾಲಕ್ಕೆ ಅರ್ಜಿ ಆಹ್ವಾನ

ಮಂಡ್ಯ, ಮೇ 29– ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಪ್ರಧಾನಮಂತ್ರಿ ಮುದ್ರಾ ಯೋಜನೆಯಡಿ ಕೈಮಗ್ಗ ನೇಕಾರರಿಂದ ಸಾಲಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ರಾಷ್ಟ್ರೀಕೃತ ಬ್ಯಾಂಕಿನಿಂದ ಕೈಮಗ್ಗ ನೇಯ್ಗೆ ಚಟುವಟಿಕೆಗಾಗಿ 50 ಸಾವಿರದಿಂದ 2 ಲಕ್ಷ ರೂ.ವರೆಗೆ ಆರ್ಥಿಕ ಸಾಲ ಪಡೆಯಲು ಅವಕಾಶವಿದೆ.

ಹೆಚ್ಚಿನ ಮಾಹಿತಿಗೆ ಮಂಡ್ಯ ಜಿಪಂ ಕೈಮಗ್ಗ ಮತ್ತು ಜವಳಿ ಇಲಾಖೆ ಉಪ ನಿರ್ದೇಶಕರ ಕಚೇರಿ ದೂ: 08232–222366 ಸಂಪರ್ಕಿಸಿ.

ಅರ್ಜಿ ಆಹ್ವಾನ

ಮಂಡ್ಯ, ಮೇ 29– ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ 2022–23ನೇ ಸಾಲಿಗೆ SSLC ಉತ್ತೀರ್ಣರಾದ ಅಭ್ಯರ್ಥಿಗಳಿಂದ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಜೂ.6 ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಮಾಹಿತಿಗೆ ದೂ.: 08232–279028, 9164651721 ಸಂಪರ್ಕಿಸಬಹುದು ಎಂದು ಕೆಸ್ತೂರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿದ್ದರಾಮಯ್ಯರ ಆರ್‌ಎಸ್‌ಎಸ್ ಹೇಳಿಕೆಗೆ ಕಿಮ್ಮತ್ತಿಲ್ಲ...

ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್



ಮೈಸೂರು, ಮೇ 29(ಎಂಟಿವೈ)– ಆರ್‌ಎಸ್‌ಎಸ್ ಬಗ್ಗೆ ಹಗುರವಾಗಿ ಹೇಳಿಕೆ ನೀಡುತ್ತಿರುವ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆಗೆ ಕಿಮ್ಮತ್ತಿಲ್ಲ. ಆರ್‌ಎಸ್‌ಎಸ್ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಡಲು ಆರ್‌ಎಸ್‌ಎಸ್ ಕಚೇರಿಗೆ ಕರೆದೊಯ್ಯುತ್ತೇವೆ ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಐದು ವರ್ಷ ರಾಜ್ಯದ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿರುವ ಸಿದ್ದರಾಮಯ್ಯ ಅವರು ಈ ಹಿಂದೆಯೂ ಆರ್‌ಎಸ್‌ಎಸ್ ಬಗ್ಗೆ ಹಗುರವಾಗಿ ಹೇಳಿಕೆ ನೀಡಿದ್ದರು. ಸಿದ್ದರಾಮಯ್ಯ ಅವರು ಆರ್‌ಎಸ್‌ಎಸ್ ಬಗ್ಗೆ ಅಧ್ಯಯನ ಮಾಡಿಲ್ಲ, ಸಂಘಟನೆಯ ಸೇವೆಯ ಬಗ್ಗೆ ತಿಳಿದುಕೊಂಡಿಲ್ಲ. ಹೀಗಾಗಿ ಅವರನ್ನು ಒಮ್ಮೆ ಆರ್‌ಎಸ್‌ಎಸ್ ಕಚೇರಿಗೆ ಕರೆದೊಯ್ಯುತ್ತೇವೆ. ಅಲ್ಲಿನ ಕಾರ್ಯಕ್ರಮಗಳ ಬಗ್ಗೆ ತಿಳಿಸುವ ಪ್ರಯತ್ನ ಮಾಡುತ್ತೇವೆ. ಇಲ್ಲದಿದ್ದರೆ ಆರ್‌ಎಸ್‌ಎಸ್ ಸೇವಾ ಕಾರ್ಯ ಕುರಿತ ಪುಸ್ತಕ ನೀಡುವ ಮೂಲಕ ಸಂಘದ ಬಗ್ಗೆ ಮಾಹಿತಿ ಒದಗಿಸುತ್ತೇವೆ ಎಂದರು.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಮಾತಿಗೆ ತೂಕ ಇತ್ತು. ಆದರೀಗ ಅವರ ಪಕ್ಷದ ಕಾರ್ಯಕರ್ತರೇ ಅವರ ಮಾತನ್ನು ಕೇಳುತ್ತಿಲ್ಲ. ಪಕ್ಷದಲ್ಲಿ ಸಿದ್ದರಾಮಯ್ಯ ಅವರನ್ನು ಕಡೆಗಣಿಸಲಾಗುತ್ತಿದೆ. ಅವರ ಮಾತಿಗೆ ಕಿಮ್ಮತ್ತು ಇಲ್ಲ. ಕಾಂಗ್ರೆಸ್‌ನಲ್ಲಿ ಕಡೆಗಣಿಸಲ್ಪಟ್ಟ ಹಿನ್ನೆಲೆಯಲ್ಲಿ ಆರ್‌ಎಸ್‌ಎಸ್ ಬಗ್ಗೆ ಹಗುರ ಹೇಳಿಕೆ ನೀಡಿ ವಿವಾದ ಸೃಷ್ಟಿಸಿ ಮುನ್ನೆಲೆಗೆ ಬರಲು ಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು.

ಕಳೆದ ಎರಡು ವರ್ಷಗಳಿಂದ ನಾನು ಆರ್‌ಎಸ್‌ಎಸ್ ಬಗ್ಗೆ ತಿಳಿದುಕೊಂಡಿದ್ದೇನೆ. ಅಲ್ಲಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೇನೆ. ದೇಶದ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ. ಇದನ್ನು ಸಿದ್ದರಾಮಯ್ಯ ಅವರು ಸಹಿಸುತ್ತಿಲ್ಲ. ಸಿದ್ದರಾಮಯ್ಯ ಅವರ ಮಾತನ್ನು ಗಂಭೀರವಾಗಿ ತೆಗೆದುಕೊಳ್ಳುವಂತಿಲ್ಲ. ಸುಮ್ಮನೇ ಟೀಕೆ ಮಾಡುವ ಬದಲು ವಿರೋಧ ಪಕ್ಷದ ನಾಯಕರಾಗಿ ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ವೀಕ್ಷಿಸಲಿ. ಆರ್‌ಎಸ್‌ಎಸ್ ಬಗ್ಗೆ ಶೇ.1ರಷ್ಟು ಜ್ಞಾನ ಸಿದ್ದರಾಮಯ್ಯ ಅವರಿಗಿಲ್ಲ ಎಂದರು.

ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಅವರು ಯಾವಾಗಲೂ ಸಲಹೆ ಕೊಡುತ್ತಿರುತ್ತಾರೆ. ಅವರ ಸಲಹೆಯಲ್ಲಿ ಒಳ್ಳೆಯ ಅಂಶವನ್ನು ಸ್ವೀಕಾರ ಮಾಡಿ, ಉಳಿದಿದ್ದನ್ನು ನಿರ್ಲಕ್ಷಿಸುತ್ತೇವೆ. ಯಾರು ಏನು ಮಾತನಾಡುತ್ತಾರೆ ಎಂದು ಪಕ್ಷದ ಅಧ್ಯಕ್ಷರು ಸೂಕ್ಷ್ಮವಾಗಿ ಗಮನಿಸುತ್ತಾರೆ. ಪಠ್ಯ ಪುಸ್ತಕ ಪರಿಷ್ಕರಣೆ ಸಂಬಂಧ ಸಚಿವ ನಾಗೇಶ್ ಅವರು ಸಮರ್ಥವಾಗಿ ಉತ್ತರ ನೀಡಿದ್ದಾರೆ. ಪಠ್ಯ ಪುಸ್ತಕಗಳನ್ನು ಯಾರೂ ಕೂಡ ಸರಿಯಾಗಿ ಓದದೇ ರಾಜಕೀಯ ಮಾಡುತ್ತಿದ್ದಾರೆ. ಮೊದಲು ಪುಸ್ತಕ ಓದಲಿ. ಕೇಸರಿಕರಣ ಬಗ್ಗೆ ಆಮೇಲೆ ಚರ್ಚೆ ಮಾಡಲಿ. ವಿಶ್ವನಾಥ್ ಎಲ್ಲಾ ವಿಷಯಗಳ ಬಗ್ಗೆ ತಿಳಿದುಕೊಂಡಿದ್ದಾರೆ, ಹೀಗಾಗಿ ಮಾತನಾಡುತ್ತಾರೆ ಎಂದರು.

3 ದಿನಗಳ ಎಐಟಿಯುಸಿ 11ನೇ ರಾಜ್ಯ ಸಮ್ಮೇಳನಕ್ಕೆ ಚಾಲನೆ

ಕಾರ್ಮಿಕರು ಸೃಷ್ಟಿಸಿದ ರಾಷ್ಟ್ರದ ಸಂಪತ್ತು ಮಾರಾಟ ಮಾಡುವುದು ದೇಶ ವಿರೋಧಿ

ಸಂಘಟನೆಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಮರ್‌ಜಿತ್ ಕೌರ್



ಮೈಸೂರು, ಮೇ 29(ಪಿಎಂ)– ಕಾರ್ಮಿಕರ ಬೆವರಿನಿಂದ ಸೃಷ್ಟಿಯಾದ ರಾಷ್ಟ್ರದ ಸಂಪತ್ತನ್ನು ಮಾರಾಟ ಮಾಡುವವರು ದೇಶ ವಿರೋಧಿಗಳು ಎಂದು ಎಐಟಿಯುಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಮರ್‌ಜಿತ್ ಕೌರ್ ಹೇಳಿದರು.

ಮೈಸೂರಿನ ಪುರಭವನದ ಆವರಣದಲ್ಲಿ ಭಾನುವಾರ ಮೂರು ದಿನಗಳ ಎಐಟಿಯುಸಿ 11ನೇ ರಾಜ್ಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಬ್ರಿಟಿಷರ ವಿರುದ್ಧ ಹೋರಾಡಿ ಪಡೆದ ಹಕ್ಕುಗಳನ್ನು ಇಂದಿನ ಕೇಂದ್ರ ಸರ್ಕಾರ ವಾಪಸ್ ಪಡೆದುಕೊಂಡು ನಮ್ಮನ್ನು 150 ವರ್ಷಗಳ ಹಿಂದಕ್ಕೆ ದೂಡುತ್ತಿದೆ. ಆ ಮೂಲಕ ಬ್ರಿಟಿಷ್ ಆಡಳಿತವನ್ನು ಮರುಸ್ಥಾಪಿಸಲು ಹೊರಟಿದೆ. ಶತಮಾನಗಟ್ಟಲೆ ಬೆವರು ಹರಿಸಿ ಕಾರ್ಮಿಕರು ಸೃಷ್ಟಿಸಿದ ಸಂಪತ್ತನ್ನು ಮಾರಾಟ ಮಾಡಲಾಗುತ್ತಿದೆ. ದಿನದಿಂದ ದಿನಕ್ಕೆ ಪರಿಸ್ಥಿತಿ ಹದಗೆಡುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಹಿಂದೆ ಪ್ರಧಾನಿಯಾಗಿದ್ದ ಅಟಲ್ ಬಿಹಾರಿ ವಾಜಪೇಯಿ, ಹೆಚ್.ಡಿ.ದೇವೇಗೌಡ ಸೇರಿದಂತೆ ಅನೇಕರ ಅವಧಿಯಲ್ಲಿ ಸರ್ಕಾರವನ್ನು ಟೀಕಿಸಿದ್ದೆವು. ಆದರೆ ಈಗ ಟೀಕಿಸಿದವರಿಗೆ ದೇಶದ್ರೋಹದ ಪಟ್ಟ ಕಟ್ಟಲಾಗುತ್ತಿದೆ. ಮುಂದಿನ ಚುನಾವಣೆಗಳಿಗಾಗಿ ಕೋಮು ಸೌಹಾರ್ದತೆ ಹಾಳು ಮಾಡಲಾಗುತ್ತಿದೆ ಎಂದರು.

ಎಐಟಿಯುಸಿ ವಿಜೃಂಭಿಸುತ್ತಿದ್ದಾಗ ನರೇಂದ್ರ ಮೋದಿ ಅವರ ಮಾತೃಸಂಸ್ಥೆಯಾದ ಆರ್‌ಎಸ್‌ಎಸ್ ಹುಟ್ಟೇ ಇರಲಿಲ್ಲ. ಅದು ಎಂದೂ ಸ್ವಾತಂತ್ರ್ಯಕ್ಕಾಗಿ ಹೋರಾಡಿಲ್ಲ. ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳು ಕೋವಿಡ್‌ಗಿಂತಲೂ ಅಪಾಯಕಾರಿ. ತೀವ್ರ ಬೆಲೆಏರಿಕೆ, ನಿರುದ್ಯೋಗ, ಉದ್ಯೋಗ ನಷ್ಟ ಸೇರಿದಂತೆ ಮೊದಲಾದ ಸಮಸ್ಯೆಗಳಿಗೆ ಕೇಂದ್ರ ಸರ್ಕಾರದ ನೀತಿಗಳೇ ಕಾರಣ ಎಂದು ದೂರಿದರು.

ಭಾರತ ಕಮ್ಯೂನಿಸ್ಟ್ ಪಕ್ಷದ ಕನಾಟಕ ರಾಜ್ಯ ಮಂಡಲಿ ಕಾರ್ಯದರ್ಶಿ ಸಾತಿ ಸುಂದರೇಶ್ ಮಾತನಾಡಿ, ಮನುಧರ್ಮ ಶಾಸ್ತ್ರ ಜಾರಿ ಮೂಲಕ ಹಿಂದೂ ರಾಷ್ಟ್ರ ನಿರ್ಮಾಣ ಮಾಡಲು ಸರ್ಕಾರ ಹೊರಟಿದೆ. ಈ ನಿಟ್ಟಿನಲ್ಲಿ ನಮ್ಮ ಮಕ್ಕಳೂ ಸಾಮಾಜಿಕ ನ್ಯಾಯದ ಪರ ಹೋರಾಟ ಮಾಡದಂತೆ ಮಾಡಲು ಪಠ್ಯಪುಸ್ತಕಗಳನ್ನೇ ಈಗ ಅಸ್ತ್ರವಾಗಿ ಬಳಸುತ್ತಿದ್ದಾರೆ ಎಂದು ಆರೋಪಿಸಿದರು.

ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಆರ್.ಶೇಷಾದ್ರಿ ಮಾತನಾಡಿ, ಕೇಂದ್ರ ಹಾಗೂ ಕೆಲವು ರಾಜ್ಯ ಸರ್ಕಾರಗಳು ವಿವೇಚನಾರಹಿತವಾದ ಕಾಯ್ದೆಗಳನ್ನು ಜಾರಿಗೆ ತರುತ್ತಿವೆ. ಬೆಲೆ ಏರಿಕೆ ಮಿತಿ ಮೀರುತ್ತಿದೆ. ಹೋರಾಟದ ಮೂಲಕವಾಗಿಯೇ ಸರ್ಕಾರವನ್ನು ಮಣಿಸಬೇಕಿದೆ ಎಂದು ಹೇಳಿದರು. ಎಐಟಿಯುಸಿ ರಾಷ್ಟ್ರೀಯ ಕಾರ್ಯಾಧ್ಯಕ್ಷ ಹೆಚ್.ಮಹದೇವನ್, ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷ ಹೆಚ್.ವಿ.ಅನಂತ ಸುಬ್ಬರಾವ್, ಪ್ರಧಾನ ಕಾರ್ಯದರ್ಶಿ ಡಿ.ಎ.ವಿಜಯಭಾಸ್ಕರ್, ಜಿಲ್ಲಾ ಮುಖಂಡ ದೇವದಾಸ್, ನಿವೃತ್ತ ಪ್ರಾಧ್ಯಾಪಕ ನಂಜರಾಜ ಅರಸ್ ಮತ್ತಿತರರು ವೇದಿಕೆಯಲ್ಲಿದ್ದರು.

ಬೃಹತ್ ರ‍್ಯಾಲಿ: ಇದಕ್ಕೂ ಮುನ್ನ ಪುರಭವನದಿಂದ ಆರಂಭವಾದ ರ‍್ಯಾಲಿಯಲ್ಲಿ ಸಾವಿರಾರು ಮಂದಿ ಎಐಟಿಯುಸಿ ಕಾರ್ಯಕರ್ತರು ಪಾಲ್ಗೊಂಡಿದ್ದರು. ಗಾಂಧಿಚೌಕ, ಮಕ್ಕಾಜಿ ಚೌಕ, ಸಯ್ಯಾಜಿರಾವ್ ರಸ್ತೆ ಸರ್ಕಾರಿ ಆಯುರ್ವೇದ ಕಾಲೇಜು ವೃತ್ತ, ಇರ್ವಿನ್ ರಸ್ತೆ ಅಶೋಕ ರಸ್ತೆ ಚಾಮರಾಜ ಒಡೆಯರ್ ವೃತ್ತ, ದೊಡ್ಡ ಗಡಿಯಾರ ವೃತ್ತದ ಮೂಲಕ ಪುರಭವನ ಆವರಣಕ್ಕೆ ರ‍್ಯಾಲಿಯು ಮರಳಿತು. ನಗರ ಗೋವಿಂದರಾವ್ ಮೆಮೋರಿಯಲ್ ಹಾಲ್‌ನಲ್ಲಿ 3 ದಿನಗಳ ಸಮ್ಮೇಳನ ಮುಂದುವರೆಯಲಿದೆ.

ಲೀಡರ್‌ವೊಬ್ಬರು 35 ಕೋಟಿ ಪಡೆದು ಭ್ರಷ್ಟಾಚಾರ ವಿರುದ್ಧ ಹೋರಾಡುತ್ತಿದ್ದಾರೆ

ಪರೋಕ್ಷವಾಗಿ ಕೋಡಿಹಳ್ಳಿ ಚಂದ್ರಶೇಖರ್ ವಿರುದ್ಧ ವಾಗ್ದಾಳಿ

ಮೈಸೂರು, ಮೇ 29(ಪಿಎಂ)– ಮೊನ್ನೆ ರಾಜ್ಯದ ಒಬ್ಬ ಲೀಡರ್ 35 ಕೋಟಿ ತೆಗೆದುಕೊಂಡರು. ಅವರು ಪಕ್ಷವೊಂದನ್ನು ಸೇರಿ ಭ್ರಷ್ಟಾಚಾರದ ವಿರುದ್ಧ ಹೋರಾಟಕ್ಕಿಳಿದಿದ್ದಾರೆ ಎಂದು ಕೋಡಿಹಳ್ಳಿ ಚಂದ್ರಶೇಖರ್ ವಿರುದ್ಧ ಪರೋಕ್ಷವಾಗಿ ಎಐಟಿಯುಸಿ ಮುಖಂಡ ಹೆಚ್.ವಿ.ಅನಂತ ಸುಬ್ಬರಾವ್ ವಾಗ್ದಾಳಿ ನಡೆಸಿದರು.

ಎಐಟಿಯುಸಿ 11ನೇ ರಾಜ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮೊನ್ನೆ ರಾಜ್ಯದ ಒಬ್ಬ ಲೀಡರ್ 35 ಕೋಟಿ ತೆಗೆದುಕೊಂಡರು. ಅದಕ್ಕೆ ಅವರೇನು ಟ್ಯಾಕ್ಸ್ ಕೊಟ್ಟಿದ್ದರಾ? ಅವರು ಬಹಳ ಸತ್ಯವಂತ. ಅರ್ಧ ಕಪ್ಪು ಹಣ ಕೊಡಿ, ಅರ್ಧ ಬಿಳಿ ಕೊಡಿ ಎಂದ ಅವರು, ಪಕ್ಷವೊಂದನ್ನು ಸೇರಿ ಭ್ರಷ್ಟಾಚಾರದ ವಿರುದ್ಧ ಹೋರಾಟಕ್ಕಿಳಿದಿದ್ದಾರೆ. ಇವರು ಮಹಾ ಡೀಲರ್ ಎಂದರು. ಕಳೆದ ತಿಂಗಳು ಬಹಳ ದೊಡ್ಡ ಸಾರ್ವತ್ರಿಕ ಮುಷ್ಕರ ದೇಶಾದ್ಯಂತ ನಡೆಯಿತು. ಅದು ಹೆಚ್ಚಿನ ಚರ್ಚೆಗೆ ಒಳಗಾಗಲಿಲ್ಲ. ಬದಲಿಗೆ ಹಿಜಾಬ್ ಬಹುದೊಡ್ಡ ಚರ್ಚೆಗೆ ಕಾರಣವಾಯಿತು. ಜನರ ಸಮಸ್ಯೆಗಳ ಚರ್ಚೆಗೂ ಇಂದು ಆದ್ಯತೆ ಸಿಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸಮುದ್ರ ವಿಹಾರಕ್ಕೆ ಬಂದ ಮೈಸೂರು ಮೂಲದ ಮಹಿಳೆ ನೀರು ಪಾಲು

ಉಳ್ಳಾಲ, ಮೇ 29– ಕುಟುಂಬದೊಂದಿಗೆ ವಿಹಾರಕ್ಕೆಂದು ಉಳ್ಳಾಲದ ಸಮ್ಮರ್ ಸ್ಯಾಂಡ್ ಬೀಚ್ ರೆಸಾರ್ಟ್‌ಗೆ ಬಂದಿದ್ದ ಮೈಸೂರು ಮೂಲದ ಮಹಿಳೆಯೊಬ್ಬರು ಸಮುದ್ರ ಪಾಲಾಗಿರುವ ಘಟನೆ ಉಳ್ಳಾಲದಲ್ಲಿ ನಡೆದಿದೆ. ಮೈಸೂರು ನಿವಾಸಿ ಭಾಗ್ಯಲಕ್ಷ್ಮಿ(46) ಸಮುದ್ರ ಪಾಲಾದ ಮಹಿಳೆ. ಭಾಗ್ಯಲಕ್ಷ್ಮಿಯವರು ಪತಿ, ಮೂವರು ಪುತ್ರಿಯರು ಹಾಗೂ ಮೊಮ್ಮಗಳೊಂದಿಗೆ ಮೈಸೂರಿನಿಂದ ಮಂಗಳೂರಿಗೆ ಪ್ರವಾಸಕ್ಕೆಂದು ಬಂದಿದ್ದರು. ಅವರು ಪಂಪ್‌ವೆಲ್ ಬಳಿಯ ಲಾಡ್ಜ್‌ನಲ್ಲಿ ತಂಗಿದ್ದು, ಶನಿವಾರ ಬೆಳಗ್ಗೆ ಕುಟುಂಬದೊಂದಿಗೆ ಸೋಮೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದ್ದಾರೆ. ಬಳಿಕ ಅಲ್ಲಿಂದ ಉಳ್ಳಾಲ ಸಮ್ಮರ್ ಸ್ಯಾಂಡ್ಸ್ ಬೀಚ್‌ಗೆ ವಿಹಾರಕ್ಕೆ ತೆರಳಿದ್ದರು. ಈ ವೇಳೆ ಭಾಗ್ಯಲಕ್ಷ್ಮಿಯವರ ಪತಿ ಹಾಗೂ ಮಗು ಭಾರೀ ಅಲೆಗಳ ನಡುವೆ ಸಿಲುಕಿದ್ದರು. ಅವರನ್ನು ರಕ್ಷಿಸಲೆಂದು ಭಾಗ್ಯಲಕ್ಷ್ಮಿ ಸಮುದ್ರಕ್ಕಿಳಿದಿದ್ದಾರೆ. ಆದರೆ ದುರಾದೃಷ್ಟವಶಾತ್ ಭಾಗ್ಯಲಕ್ಷ್ಮಿಯವರು ಸಮುದ್ರದ ಅಲೆಗೆ ಸಿಲುಕಿ ನೀರು ಪಾಲಾಗಿದ್ದಾರೆ. ಭಾಗ್ಯಲಕ್ಷ್ಮಿಯವರ ಪತಿ ಹಾಗೂ ಮಕ್ಕಳು ಕಿರುಚಾಡಿದ್ದು, ಇದನ್ನು ಗಮನಿಸಿ ತಕ್ಷಣ ಸಮೀಪದಲ್ಲೇ ಇದ್ದ ಮೀನುಗಾರರು ಮಹಿಳೆಯನ್ನು ಮೇಲಕ್ಕೆತ್ತಿದ್ದಾರೆ. ಆದರೆ ಆಸ್ಪತ್ರೆಗೆ ಕೊಂಡೊಯ್ಯುವ ದಾರಿ ಮಧ್ಯೆ ಮಹಿಳೆ ಸಾವನ್ನಪ್ಪಿದ್ದಾರೆ. ಈ ಬಗ್ಗೆ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮದುವೆಯಾಗದಿದ್ದರೆ ಆ್ಯಸಿಡ್ ಹಾಕುವುದಾಗಿ ವಿದ್ಯಾರ್ಥಿನಿಗೆ ಬೆದರಿಕೆ

ಯುವಕ ಸೇರಿ ನಾಲ್ವರ ವಿರುದ್ಧ ಕೇಸ್

ಹೆಚ್.ಡಿ.ಕೋಟೆ, ಮೇ 29–ಕಾಲೇಜು ವಿದ್ಯಾರ್ಥಿನಿಯನ್ನು ಮದುವೆಯಾಗುವಂತೆ ಪೀಡಿಸಿ, ಆ್ಯಸಿಡ್ ಹಾಕುವುದಾಗಿ ಬೆದರಿಸುತ್ತಿರುವುದರ ಬಗ್ಗೆ ವರದಿಯಾಗಿದ್ದು, ಯುವಕ ಸೇರಿ ನಾಲ್ವರ ವಿರುದ್ಧ ಹೆಚ್.ಡಿ.ಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೆಚ್.ಡಿ.ಕೋಟೆ ತಾಲೂಕಿನ ಗ್ರಾಮವೊಂದರ ವಿದ್ಯಾರ್ಥಿನಿ ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಬಿ.ಎ. ವ್ಯಾಸಂಗ ಮಾಡುತ್ತಿದ್ದು, ಮೈಸೂರು ತಾಲೂಕು ಬೆಲವತ್ತ ಗ್ರಾಮದ ಮಂಜುನಾಥ ಎಂಬುವರ ಮಗ ವಿಜಯಕುಮಾರ್ ಯಾರಿಂದಲೋ ಈಕೆಯ ಮೊಬೈಲ್ ಫೋನ್ ನಂಬರ್ ಅನ್ನು ಪಡೆದು, ಪ್ರೀತಿಸಿ ಮದುವೆಯಾಗುವಂತೆ ಪೀಡಿಸುತ್ತಿದ್ದ. ವಿದ್ಯಾರ್ಥಿನಿಯ ಫೋಟೋವನ್ನು ಅಶ್ಲೀಲವಾಗಿ ಚಿತ್ರಿಸಿ, ಆಕೆಯ ಸಂಬಂಧಿಕರಿಗೆ ವಾಟ್ಸಾಪ್ ಮೂಲಕ ಕಳುಹಿಸಿದ್ದಲ್ಲದೇ ಮದುವೆಯಾಗದಿದ್ದರೆ ಅಪಹರಿಸುವುದಾಗಿಯೂ ಹಾಗೂ ಆ್ಯಸಿಡ್ ಹಾಕುವುದಾಗಿಯೂ ಬೆದರಿಸುತ್ತಿದ್ದಾನೆ ಎಂದು ವಿದ್ಯಾರ್ಥಿನಿ ತನ್ನ ದೂರಿನಲ್ಲಿ ತಿಳಿಸಿದ್ದಾಳೆ.

ಈತ ತನಗೆ ನೀಡುತ್ತಿರುವ ಕಿರುಕುಳದ ಬಗ್ಗೆ ಆತನ ತಂದೆ ಮಂಜುನಾಥ, ತಾಯಿ ಅನಿತಾ, ಚಿಕ್ಕಪ್ಪ ಗಂಗರಾಜು ಅವರಿಗೆ ತಿಳಿಸಿದಾಗ ಅವರು ವಿಜಯ ಕುಮಾರ್ ನಿನ್ನನ್ನು ಇಷ್ಟಪಟ್ಟಿದ್ದಾನೆ. ಅವನನ್ನು ನೀನು ಮದುವೆಯಾಗದಿದ್ದರೆ ಶವವಾಗುತ್ತೀಯಾ ಎಂದು ಬೆದರಿಸುತ್ತಿದ್ದಾರೆ ಎಂದು ವಿದ್ಯಾರ್ಥಿನಿ ನೀಡಿದ ದೂರಿನ ಮೇರೆಗೆ ಹೆಚ್.ಡಿ.ಕೋಟೆ ಠಾಣೆ ಪೊಲೀಸರು ಬೆಲವತ್ತ ಗ್ರಾಮದ ವಿಜಯ ಕುಮಾರ್, ತಂದೆ ಮಂಜುನಾಥ, ತಾಯಿ ಅನಿತಾ ಮತ್ತು ಚಿಕ್ಕ ಗಂಗರಾಜು ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಜೂ.1ರವರೆಗೆ ಬ್ರಾಂಡೆಡ್ ಸಿದ್ಧ ಉಡುಪುಗಳ ರಿಯಾಯಿತಿ ಮಾರಾಟ



ಮೈಸೂರು, ಮೇ 29– ಮೈಸೂರಿನ ವಿನೋಬಾ ರಸ್ತೆ ಸದರ್ನ್ ಸ್ಟಾರ್ ಹೋಟೆಲ್ ಆವರಣದಲ್ಲಿ ಬ್ರಾಂಡೆಡ್ ಸಿದ್ಧ ಉಡುಪುಗಳ ಬೃಹತ್ ಮಾರಾಟ ನಡೆಯುತ್ತಿದ್ದು, ರಿಯಾಯಿತಿ ದರದಲ್ಲಿ ಕೊಳ್ಳಬಹುದಾಗಿದೆ. ಪುರುಷರು, ಮಹಿಳೆಯರು ಹಾಗೂ ಮಕ್ಕಳ ಪ್ಯಾಂಟ್, ಟಿ–ಶರ್ಟ್, ಲೋವರ್, ಟಾಪ್, ಬರ್ಮುಡಾ, ಶರ್ಟ್, ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಸಿಲ್ಕ್‌ಸ್ಟ್ರೀಚ್, ಪಾರ್ಟಿವೇರ್, ಫಾರ್ಮಲ್ಸ್, ಬ್ಲೇಜರ್, ಲೇಡಿಸ್ ಕುರ್ತಿಸ್, ರಾಜಸ್ತಾನಿ ಪ್ರಿಂಟೆಡ್ ಬೆಡ್‌ಶೀಟ್ಸ್, ಸೋಫಾ ಕವರ್, ಸೇರಿದಂತೆ ವಿಭಿನ್ನ ಬಗೆಯ ಸಿದ್ಧ ಉಡುಪು ಹಾಗೂ ವಸ್ತುಗಳನ್ನು ಕಂಪನಿಯಿಂದ ನೇರವಾಗಿ ಗ್ರಾಹಕರಿಗೆ ಜೂನ್ 1ರವರೆಗೆ ಮಾರಾಟ ಮಾಡಲಾಗುತ್ತಿದೆ.

ಮೈಸೂರು ಮಿತ್ರ ಸೋಮವಾರ 30 ಮೇ 2022

ಜಿಲ್ಲೆಯ ಅವಳಿ ಜಲಾಶಯ ಬಹುತೇಕ ಭರ್ತಿ

● ಮೇ ತಿಂಗಳಲ್ಲೇ ಸುವರ್ಣಾವತಿ, ಚಿಕ್ಕಹೊಳೆ ತುಂಬಿರುವುದು ಇದೇ ಮೊದಲು ● ಕೆರೆಗಳಿಗೆ ನೀರು ಬಿಡುಗಡೆ, ರೈತರಲ್ಲಿ ಹರ್ಷ

ಚಾಮರಾಜನಗರ, ಮೇ 29(ಎಸ್‌ಎಸ್)– ಜಿಲ್ಲೆಯ ಅವಳಿ ಜಲಾಶಯ ಎಂದೇ ಕರೆಯಲ್ಪಡುವ ತಾಲೂಕಿನ ಸುವರ್ಣಾವತಿ ಹಾಗೂ ಚಿಕ್ಕಹೊಳೆ ಜಲಾಶಯ ಇದೇ ಮೊದಲ ಬಾರಿಗೆ ಮೇ ತಿಂಗಳಿನಲ್ಲೇ ಸಂಪೂರ್ಣ ಭರ್ತಿ ಆಗಿದೆ.

ಸುವರ್ಣಾವತಿ ಜಲಾಶಯದ ಭರ್ತಿಗೆ ಇನ್ನು ಒಂದು ಅಡಿ ಮಾತ್ರ ಬಾಕಿ ಇದ್ದು, ಜಲಾಶಯದ ಸುರಕ್ಷಾ ದೃಷ್ಟಿಯಿಂದ ನೀರನ್ನು ಹೊರಬಿಡಲಾಗುತ್ತಿದೆ. ಚಿಕ್ಕಹೊಳೆ ಜಲಾಶಯ ಈಗಾಗಲೇ ಸಂಪೂರ್ಣ ಭರ್ತಿ ಆಗಿದ್ದು, ಕೋಡಿ ಬಿದ್ದಿದೆ. ಈ ಹಿನ್ನೆಲೆಯಲ್ಲಿ ಹರದನ ಹಳ್ಳಿಯ ಬಂಡಿಗೆರೆಗೆ ನೀರು ಹರಿಸಲಾಗುತ್ತಿದೆ. ಇದು ರೈತರಲ್ಲಿ ಹರ್ಷ ತಂದಿದೆ.

ಸುವರ್ಣಾವತಿ ಹಾಗೂ ಚಿಕ್ಕಹೊಳೆ ಜಲಾಶಯದ ಆಸುಪಾಸು, ತಮಿಳುನಾಡಿನ ದಿಂಬಂ ಅರಣ್ಯ ಪ್ರದೇಶ ಹಾಗೂ ಕೊಂಗಳ್ಳಿ ಬೆಟ್ಟದ ಸುತ್ತಮುತ್ತಲು ಸುರಿದ ಸತತ ಮಳೆಯಿಂದ ಈ ಅವಳಿ ಜಲಾಶಯಗಳು ಭರ್ತಿ ಆಗಿವೆ. ಜಲಾಶಯಗಳು ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ಭರ್ತಿಯಾಗುತ್ತಿದ್ದವು. ಇತಿಹಾಸದಲ್ಲೇ ಮೇ ತಿಂಗಳಲ್ಲಿ ಜಲಾಶಯಗಳು ಸಂಪೂರ್ಣವಾಗಿ ಭರ್ತಿ ಆಗಿರುವುದು ಇದೇ ಪ್ರಥಮ ಎಂದು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮಂಜುನಾಥ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದು, ಕಳೆದ 6 ತಿಂಗಳ ಒಳಗೆ ಈ ಅವಳಿ ಜಲಾಶಯವು ಎರಡನೇ ಬಾರಿಗೆ ಭರ್ತಿ ಆದಂತಾಗಿದೆ ಎಂದರು.

ಸುವರ್ಣಾವತಿ: ಈ ಜಲಾಶಯ ಸಮುದ್ರ ಮಟ್ಟದಿಂದ 2455 ಅಡಿ ಎತ್ತರ ಇದೆ. ಈಗ ಜಲಾಶಯದಲ್ಲಿ 2454 ಅಡಿ ನೀರು ಸಂಗ್ರಹವಾಗಿದೆ. ಸಂಪೂರ್ಣ ಭರ್ತಿಗೆ ಇನ್ನು ಕೇವಲ 1 ಅಡಿ ಮಾತ್ರ ಬಾಕಿ ಇದೆ. ಜಲಾಶಯಕ್ಕೆ 200 ಕ್ಯೂಸೆಕ್ ಒಳ ಹರಿವು ಇದೆ. ಜಲಾಶಯದ ಹಿತದೃಷ್ಟಿಯಿಂದ ಮೂರು ಗೇಟ್‌ಗಳ ಮೂಲಕ 200 ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆ. ಈ ನೀರು ಜಲಾಶಯದ ವ್ಯಾಪ್ತಿಗೆ ಬರುವ ದೊಡ್ಡಕೆರೆ, ಚಿಕ್ಕಕೆರೆ ಹಾಗೂ ಸಂಡಿಗೆರೆಗೆ ನೀರು ಹೋಗುತ್ತಿದೆ. ಜಲಾಶದ ವ್ಯಾಪ್ತಿಗೆ 9 ಕೆರೆಗಳು ಬರಲಿದ್ದು, ಈ ಪೈಕಿ 6 ಕೆರೆಗಳ ಈಗಾಗಲೇ ಭರ್ತಿ ಆಗಿದೆ. ಇನ್ನುಳಿದ 3 ಕೆರೆಗಳಿಗೆ ನೀರನ್ನು ಬಿಡಲಾಗಿದೆ ಎಂದು ಮುಂಜುನಾಥ್ ಮಾಹಿತಿ ನೀಡಿದ್ದಾರೆ.

ಚಿಕ್ಕಹೊಳೆ: ಚಿಕ್ಕಹೊಳೆ ಜಲಾಶಯವು ಸಮುದ್ರ ಮಟ್ಟದಿಂದ 2,474 ಅಡಿ ಇದ್ದು, ಜಲಾಶಯವು ಸಂಪೂರ್ಣ ಭರ್ತಿ ಆಗಿದೆ. ಜಲಾಶಯಕ್ಕೆ 30 ಕ್ಯೂಸೆಕ್ ಒಳಹರಿವು ಇದ್ದು, ಅಷ್ಟೇ ಪ್ರಮಾಣದ ನೀರು ಹರದನಹಳ್ಳಿಯ ಬಂಡಿಗೆರೆಗೆ ಹರಿಯುತ್ತಿದೆ ಎಂದು ಅವರು ತಿಳಿಸಿದರು.


ಸುವರ್ಣಾವತಿ


ಚಿಕ್ಕಹೊಳೆ

> ಚಾಮರಾಜನಗರ ತಾಲೂಕಿನ ಅವಳಿ ಜಲಾಶಯಗಳಾದ ಚಿಕ್ಕಹೊಳೆ ಹಾಗೂ ಸುವರ್ಣಾವತಿ ಜಲಾಶಯವು ಸಮಾನವಾಗಿ ಅಕ್ಟೋಬರ್ ಅಥವಾ ನವಂಬರ್ ತಿಂಗಳಿನಲ್ಲಿ ಭರ್ತಿ ಆಗುತ್ತಿದ್ದವು. ಆದರೆ ಈ ಬಾರಿ ಮೇ ತಿಂಗಳಿನಲ್ಲಿ ಭರ್ತಿ ಆಗಿರುವುದು ವಿಶೇಷ ಹಾಗೂ ಇದೇ ಮೊದಲ ಬಾರಿ. ಕಳೆದ 6 ತಿಂಗಳಿನಲ್ಲಿ 2 ಬಾರಿ ಜಲಾಶಯಗಳು ಭರ್ತಿ ಆಗಿ ನೀರನ್ನು ಹೊರಬಿಡುತ್ತಿರುವುದು ಮತ್ತೊಂದು ವಿಶೇಷ.
> –ಮಂಜುನಾಥ್, ಎಇಇ.

ಬೈಕ್‌ಗಳ ಮುಖಾಮುಖಿ ಡಿಕ್ಕಿ
ಓರ್ವ ಸಾವು, ಮತ್ತೋರ್ವ ಗಂಭೀರ

ಬೇಗೂರು,ಮೇ 29(ಕಿರಣ್)–ಬೈಕ್‌ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಓರ್ವ ಸವಾರ ಸ್ಥಳದಲ್ಲೇ ಸಾವನ್ನಪ್ಪಿದ್ದು, ಮತ್ತೋರ್ವ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಚಿಕ್ಕಾಟಿ ಗೇಟ್ ಬಳಿ ನಡೆದಿದೆ. ಚಿಕ್ಕಾಟಿ ಗ್ರಾಮದ ಕುಮಾರಸ್ವಾಮಿಗೌಡ(55) ಮೃತಪಟ್ಟವರಾಗಿದ್ದು, ನಂಜನಗೂಡು ತಾಲೂಕಿನ ಮಲಿಯೂರು ಗ್ರಾಮದ ಗಿರೀಶ್(42) ತೀವ್ರ ಗಾಯಗೊಂಡಿದ್ದು, ಬೇಗೂರು ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಆಸ್ಪತ್ರೆಗೆ ರವಾನಿಸಲಾಗಿದೆ.


ಕುಮಾರಸ್ವಾಮಿಗೌಡ

ಚಿಕ್ಕಾಟಿ ಗ್ರಾಮದ ಕುಮಾರಸ್ವಾಮಿ ಬೇಗೂರಿನಲ್ಲಿ ಮನೆಗೆ ದಿನಸಿ ಪದಾರ್ಥ ತೆಗೆದುಕೊಂಡು ತಮ್ಮ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ನಂಜನಗೂಡಿನ ಕಡೆಯಿಂದ ವೇಗವಾಗಿ ಬರುತ್ತಿದ್ದ ಗಿರೀಶ್ ಅವರ ಬೈಕು ಮೈಸೂರು–ಗುಂಡ್ಲುಪೇಟೆ ರಾಷ್ಟ್ರೀಯ ಹೆದ್ದಾರಿ ಬೇಗೂರು ಸಮೀಪದ ಚಿಕ್ಕಾಟಿ ಗೇಟ್ ಬಳಿ ಮುಖಾಮುಖಿ ಡಿಕ್ಕಿಯಾಗಿದೆ. ಇದರಿಂದ ಕುಮಾರಸ್ವಾಮಿ ಸ್ಥಳದಲ್ಲೇ ಅಸುನೀಗಿದ್ದಾರೆ. ಅತೀ ವೇಗವೇ ಅಪಘಾತಕ್ಕೆ ಕಾರಣ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಿಕ್ಷಣ, ಸಂಘಟನೆಯಿಂದ ಸಮುದಾಯಗಳ ಅಭಿವೃದ್ಧಿ

ಮಾಜಿ ಶಾಸಕಿ ಪರಿಮಳಾ ನಾಗಪ್ಪ ಅಭಿಮತ



ಹನೂರು, ಮೇ 29(ಸೋಮು)–ಶಿಕ್ಷಣ, ಸಂಘಟನೆಯಿಂದ ಮಾತ್ರ ಸಮುದಾಯಗಳು ಮುಂದೆ ಬರಲು ಸಾಧ್ಯ. ಹಾಗಾಗಿ ಪ್ರತಿಯೊಬ್ಬರೂ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವ ನಿಟ್ಟಿನಲ್ಲಿ ಮುಂದಾಗಬೇಕು ಎಂದು ಮಾಜಿ ಶಾಸಕಿ ಪರಿಮಳಾ ನಾಗಪ್ಪ ತಿಳಿಸಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಹನೂರು ತಾಲೂಕು ಘಟಕದಿಂದ ಪಟ್ಟಣದ ವಾಸವಿ ಮಹಲ್‌ನಲ್ಲಿ ಹಮ್ಮಿಕೊಂಡಿದ್ದ ಶ್ರೀ ಬಸವೇಶ್ವರರ ಜಯಂತಿ, ಪ್ರತಿಭಾ ಪುರಸ್ಕಾರ ಹಾಗೂ ಮಹಿಳಾ ಘಟಕ ಹಾಗೂ ಯುವ ಘಟಕ ಪದಗ್ರಹಣ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬಸವಣ್ಣನವರು ಮಹಿಳೆಯರಿಗೆ ಸಮಾನತೆ ಹಾಗೂ ಸಮಾಜದಲ್ಲಿ ಸಾಮರಸ್ಯ ಸಾರಿದ ಮಹಾ ಶರಣರು. ಅವರ ಆದರ್ಶಗಳನ್ನು ನಾವೆಲ್ಲರೂ ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಸಮುದಾಯದ ಏಳ್ಗೆಗೆ ಸಂಘಟನೆಗಳು ಒಗ್ಗಟ್ಟಾಗಿ ಕೆಲಸ ಮಾಡಬೇಕು. ಈ ಬಾರಿ ಎಸ್‌ಎಸ್‌ಎಲ್‌ಸಿಯಲ್ಲಿ ಸಮುದಾಯದ ವಿದ್ಯಾರ್ಥಿಗಳು ಒಳ್ಳೆಯ ಅಂಕಗಳನ್ನು ಪಡೆದಿದ್ದಾರೆ. ಇದೇ ರೀತಿಯಲ್ಲಿ ಮುಂದುವರೆದು ಉನ್ನತ ಹುದ್ದೆಗಳನ್ನು ಅಲಂಕಾರಿಸುವಂತಾಗಬೇಕು ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಹನೂರು ತಾಲೂಕು ಅಖಿಲ ಭಾರತ ವೀರಶೈವ ಮಹಾಸಭಾ ಘಟಕ ಅಧ್ಯಕ್ಷ ಬಸವರಾಜಪ್ಪ, ಖಜಾಂಜಿ ಅಜ್ಜೀಪುರ ಜಗದೀಶ್, ಕೊಳ್ಳೇಗಾಲ ತಾಲೂಕು ಮಹಾಸಭಾ ಅಧ್ಯಕ್ಷ ಮಹಾದೇವ ಪ್ರಸಾದ್, ಜಿಲ್ಲಾ ನಿರ್ದೇಶಕ ಅಜ್ಜೀಪುರ ಮುರುಳಿ, ಕಾರ್ಯದರ್ಶಿ ಆನಾಪುರ ಉಮೇಶ್, ಒಡಯರ ಪಾಳ್ಯ ಸೋಮಶೇಖರ್, ರಾಮಾಪುರ ಮಾದೇಶ್, ಉದ್ದನೂರು ಪ್ರಸಾದ್, ಆನಾಪುರ ಮಹೇಶ್, ಬಂಡಳ್ಳಿ ನಾಗರಾಜು, ಮಂಗಲ ಕುಮಾರ್, ಪ್ರಕಾಶ್, ಮೂರ್ತಿ, ಕಾಮಗೆರೆ ನಟೇಶ್, ಮಂಜುನಾಥ್, ಕೆ.ಬಿ.ಮಧು ಬಿಜೆಪಿ ಮಂಡಲ ಅಧ್ಯಕ್ಷ ಸಿದ್ದಪ್ಪ ಹಾಗೂ ಇನ್ನಿತರರಿದ್ದರು.

ಬಿಜೆಪಿ ಅಭ್ಯರ್ಥಿ ಪರ ಎಂ.ರಾಮಚಂದ್ರ ಪ್ರಚಾರ

ಚಾಮರಾಜನಗರ, ಮೇ 29(ಎಸ್‌ಎಸ್)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರಿಗೆ ಪ್ರಥಮ ಪ್ರಾಶಸ್ತ್ಯದ ಮತಗಳನ್ನು ನೀಡಿ ಆಶೀರ್ವದಿಸಬೇಕು ಎಂದು ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ ಪದವೀಧರರಲ್ಲಿ ಮನವಿ ಮಾಡಿದರು.

ತಾಲೂಕಿನ ಹರದನಹಳ್ಳಿಗ್ರಾಮದ ದಕ್ಷಿಣಾಭಿಮುಖ ಅಭಯ ಶ್ರೀಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ನಂತರ ಪದವೀಧರ ಮನೆಮನೆಗೆ ತೆರಳಿ ಮತಯಾಚಿಸಿ ಮಾತನಾಡಿದರು.

ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದು. ಈ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಮೈ.ವಿ. ರವಿಶಂಕರ್ ಅವರನ್ನು ಗೆಲ್ಲಿಸಿ ಜಿಲ್ಲೆಯಲ್ಲಿ ಬದಲಾವಣೆ ಪರ್ವ ಆರಂಭವಾಗಬೇಕು.



ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ರಾಷ್ಟ್ರದಲ್ಲಿ ಶೈಕ್ಷಣಿಕ ಕ್ರಾಂತಿಗೆ ಮುಂದಾಗಿದೆ. ದಕ್ಷ ಆಡಳಿತದ ಕಾರಣಕ್ಕಾಗಿ ಭಾರತ ಜಗತ್ತಿನ ನಾಯಕ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ. ಪದವೀಧರ ಸಮಸ್ಯೆಗಳ ನಿವಾರಣೆಗೆ ಸದನದಲ್ಲಿ ಚರ್ಚಿಸುವ ಮೂಲಕ ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳುವ ಕಾರ್ಯದಲ್ಲಿ ತೊಡಗಲು ಮೈ.ವಿ. ರವಿಶಂಕರ್ ಅವರನ್ನು ಬೆಂಬಲಿಸಬೇಕು ಎಂದು ಕೋರಿದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ವಕ್ತಾರ ಅಯ್ಯನಪುರ ಶಿವಕುಮಾರ್, ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ರಾಮಸಮುದ್ರ ವೇಣುಗೋಪಾಲ್, ಮಹಿಳಾ ಮೋರ್ಚಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಕ್ಷ್ಮಿ ಜಯಶಂಕರ್ ಇತರರು ಹಾಜರಿದ್ದರು.

ರಾಮಸಮುದ್ರದಲ್ಲಿ ಶ್ರೀಭಗೀರಥ ಮಹರ್ಷಿ ಜಯಂತಿ ಆಚರಣೆ



ಚಾಮರಾಜನಗರ, ಮೇ.29(ಎಸ್‌ಎಸ್)–ಇಲ್ಲಿಗೆ ಸಮೀಪದ ರಾಮಸಮುದ್ರ ಉಪ್ಪಾರ ಬೀದಿಯಲ್ಲಿ ಶ್ರೀಭಗೀರಥ ಮಹರ್ಷಿ ಜಯಂತಿಯನ್ನು ಆಚರಿಸಲಾಯತು.

ಕಾರ್ಯಕ್ರಮದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಶ್ರೀಭಗೀರಥ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು.

ಮುಖಂಡ ಜಿ.ಎಂ.ಗಾಡ್ಕರ್ ಮಾತನಾಡಿ, ಶ್ರೀಭಗೀರಥರ ಪ್ರಯತ್ನವನ್ನು ಜಗತ್ತು ಎಂದಿಗೂ ಮರೆಯಲು ಸಾಧ್ಯವಿಲ್ಲ. ಅದನ್ನು ಮರತರೆ ಇಡೀ ಜಗತ್ತೇ ಶಾಪವಿಮೋಚನೆಗೆ ಒಳಗಾಗಬೇಕಾಗುತ್ತದೆ. ಗಂಗೆ ಇರುವ ತನಕ ಜಗತ್ತಿನಲ್ಲಿ ಭಗೀರಥ ಮಹರ್ಷಿ ಹೆಸರು ಇರುತ್ತದೆ. ಗಂಗೆ ಇಲ್ಲದೆ ಯಾವ ಜೀವ ಸಂಕುಲವು ಬದಕಲು ಸಾಧ್ಯವಿಲ್ಲ. ಇಂತಹ ಗಂಗೆಯನ್ನು ಭೂಮಿಗೆ ತಂದಂತಹ ಭಗೀರಥರದು ಸಾಧನೆ ಎಂದು ಬಣ್ಣಿಸಿದರು.

ತಾಲೂಕು ಉಪ್ಪಾರ ಸಂಘದ ಅಧ್ಯಕ್ಷ ಪಿ.ಲಿಂಗರಾಜು ಮಾತನಾಡಿ, ಉಪ್ಪಾರ ಸಮುದಾಯದವರು ಶಿಕ್ಷಣಕ್ಕೆ ಒತ್ತು ನೀಡಬೇಕು. ಉಪ್ಪಾರ ಸಮಾಜ ಕಾಯಕ ಸಮಾಜವಾಗಿದೆ. ದುಶ್ಚಟಗಳನ್ನು ಬಿಡಬೇಕು. ತಾವು ದುಡಿದ ಹಣವನ್ನು ಮಕ್ಕಳ ಭವಿಷ್ಯಕ್ಕೆ ಉಳಿತಾಯ ಮಾಡಬೇಕು ಎಂದು ಸಲಹೆ ನೀಡಿದರು.

ರಾಜ್ಯದಲ್ಲಿ ಸುಮಾರು 40 ಲಕ್ಷ ಉಪ್ಪಾರ ಸಮುದಾಯವಿದೆ. ಸಿದ್ದರಾಮಯ್ಯನವರ ಸರ್ಕಾರದ ಅವಧಿಯಲ್ಲಿ ಉಪ್ಪಾರ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸುವ ಸಂಬಂಧ ಕುಲಶಾಸ್ತ್ರ ಅಧ್ಯಯನ ನಡೆಸಲಾಗಿದೆ. ಅದನ್ನು ಪರಿಶೀಲನೆ ಮಾಡಿ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು. ರಂಗಮಂದಿರಕ್ಕೆ ಭಗೀರಥರ ಹೆಸರು ನಾಮಕರಣ ಮಾಡಬೇಕು ಎಂದು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ನಗರಸಭಾ ಸದಸ್ಯ ಬಸವಣ್ಣ, ಪರಿಸರ ಪ್ರೇಮಿ ಸಿ.ಎ.ವೆಂಕಟೇಶ್, ತಾಲೂಕು ಉಪ್ಪಾರ ಸಂಘದ ಅಧ್ಯಕ್ಷ ಪಿ.ಲಿಂಗರಾಜು, ವಕೀಲರಾದ ರಂಗಸ್ವಾಮಿ, ಯಜಮಾನರಾದ ಚಂದ್ರಶೇಖರ್, ಮಸಣಶೆಟ್ಟಿ, ಮಹದೇವಸ್ವಾಮಿ, ಗೋವಿಂದರಾಜು, ಕೆಂಪರಾಮಶೆಟ್ಟಿ, ಮಹದೇವಶೆಟ್ಟಿ, ನಾಗಶೆಟ್ಟಿ, ರಾಜ ಋಷಿ ಭಗೀರಥ ಮಹರ್ಷಿ ಯುವಕರ ಸಂಘದ ಅಧ್ಯಕ್ಷ ಸಿದ್ದರಾಜು, ರಾಜೇಶ್, ಬಾಬು, ಲಿಂಗರಾಜು, ಮಹೇಶ್, ಬಂಗಾರು, ರಾಜಪ್ಪಾಜಿ ಹಾಗೂ ಪದಾಧಿಕಾರಿಗಳಿದ್ದರು.

ಒಕ್ಕಲಿಗರ ಸಂಘದಿಂದ ಸಮುದಾಯದ ಕ್ರೀಡಾಕೂಟ

ವಿರಾಜಪೇಟೆ, ಮೇ 29– ಕೊಡಗಿನ ಗ್ರಾಮೀಣ ಭಾಗದಲ್ಲಿ ಎಲೆಮರೆಯ ಕಾಯಿಯಂತಿರುವ ಕ್ರೀಡಾ ಪ್ರತಿಭಾವಂತರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ವಿರಾಜಪೇಟೆ ತಾಲೂಕಿನ ಕಣ್ಣಂಗಾಲ ಒಂಟಿಯಂಗಡಿಯಲ್ಲಿ ಒಕ್ಕಲಿಗರ ಭವನ ನಿರ್ಮಿಸಲಾಗುವುದು ಎಂದು ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ರವೀಂದ್ರ ಹರಪಳ್ಳಿ ಹೇಳಿದರು.

ವಿರಾಜಪೇಟೆ ಸಮೀಪದ ಕಣ್ಣಂಗಾಲ ಒಕ್ಕಲಿಗರ ಸಂಘದ ವತಿಯಿಂದ ಒಂಟಿಯಂಗಡಿ ಶಾಲಾ ಮೈದಾನದಲ್ಲಿ ಹಮ್ಮಿಕೊಂಡಿದ್ದ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸದ್ಭಾವನೆ ಹಾಗೂ ಒಗ್ಗಟ್ಟಿನಿಂದ ಸಮಾಜದಲ್ಲಿ ಕೆಲಸ ಮಾಡಿದರೆ ಯಶಸ್ಸು ಸಾಧ್ಯ. ಕ್ರೀಡಾಕೂಟಗಳು ಹೆಚ್ಚು ನಡೆಯುವುದೇ ಕೊಡಗಿನಲ್ಲಿ. ಇದಕ್ಕೆ ಸರ್ಕಾರ ಪ್ರೋತ್ಸಾಹ ನೀಡುವಂತಾಗಬೇಕು. ಯುವ ಜನತೆಗೆ ಕೊಡಗಿನಲ್ಲಿ ಕ್ರೀಡಾ ತರಬೇತಿ ಕೇಂದ್ರದ ಅವಶ್ಯವಿದ್ದು, ಇದಕ್ಕೆ ನುರಿತ ಆಯೋಜಕರನ್ನು ನೇಮಿಸುವಂತಾಗಬೇಕು. ಇದರಿಂದ ಗ್ರಾಮೀಣ ಭಾಗದ ಪ್ರತಿಭಾವಂತರು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಭಾಗವಹಿಸಲು ಸಹಕಾರಿಯಾಗಲಿದೆ ಎಂದ ರವೀಂದ್ರ ಹರಪಳ್ಳಿ, ಜಿಲ್ಲೆಯಲ್ಲಿ ತಾಲೂಕು ಕಚೇರಿಗಳು ರೆವಿನ್ಯೂ ಇಲಾಖೆಯಲ್ಲಿ ಅಧಿಕಾರಿಗಳು ರೈತರ ಕೆಲಸಗಳನ್ನು ಮಾಡಿಕೊಡುವಲ್ಲಿ ಹಿಂದೇಟು ಹಾಕುತ್ತಿದ್ದಾರೆ. ಇದರ ಬಗ್ಗೆ ಹಿರಿಯ ಅಧಿಕಾರಿಗಳು ಕ್ರಮ ಕೈಗೊಳ್ಳುವ ಅಗತ್ಯವಿದೆ ಎಂದರು.



ಮೊದಲಿಗೆ ಕ್ರೀಡಾಕೂಟದ 100 ಮೀ ಓಟದ ಸ್ಪರ್ಧೆಯನ್ನು ಒಕ್ಕಲಿಗರ ಸಂಘದ ಜಿಲ್ಲಾ ಅಧ್ಯಕ್ಷ ಎಸ್.ಎಂ.ಚಂಗಪ್ಪ ಉದ್ಘಾಟಿಸಿದರು. ಬಳಿಕ ಮಾತನಾಡಿ, ಒಕ್ಕಲಿಗರ ಸಂಘ ಪ್ರಾರಂಭಗೊಂಡು ಅನೇಕ ವರ್ಷಗಳಾಗಿದೆ. ಮತ್ತೆ ಸಂಘವನ್ನು ಬಲಪಡಿಸುವ ನಿಟ್ಟಿನಲ್ಲಿ ಎಲ್ಲಾ ತಾಲೂಕುಗಳಲ್ಲಿ ಸದಸ್ಯರು ಕೆಲಸ ಮಾಡಬೇಕಾಗಿದೆ ಎಂದರು. ಪ್ರಾಸ್ತಾವಿಕವಾಗಿ ಜಿಲ್ಲಾ ಉಪಾಧ್ಯಕ್ಷ ಕೆ.ಪಿ.ನಾಗರಾಜು ಮಾತನಾಡಿ, ಕಳೆದ ಅನೇಕ ವರ್ಷಗಳಿಂದ ಒಕ್ಕಲಿಗರ ಸಂಘದ ಕ್ರೀಡಾಕೂಟವನ್ನು ನಡೆಸಿಕೊಂಡು ಬರುತ್ತಿದ್ದು, ಕಳೆದ ಎರಡು ವರ್ಷದಿಂದ ಕೋವಿಡ್ ಕಾರಣದಿಂದ ಸಾಧ್ಯವಾಗಿಲ್ಲ. ಮುಂದಿನ ವರ್ಷ ಹೆಚ್ಚಿನ ರೀತಿಯಲ್ಲಿ ನಡೆಸುವುದಾಗಿ ತಿಳಿಸಿದರು.

ಅಧ್ಯಕ್ಷತೆಯನ್ನು ಕಣ್ಣಂಗಾಲ ಒಕ್ಕಲಿಗರ ಸಂಘದ ಅಧ್ಯಕ್ಷ ವಿ.ಕೆ.ದೇವಲಿಂಗಯ್ಯ ವಹಿಸಿ ಮಾತನಾಡಿ, ಒಕ್ಕಲಿಗರ ಭವನ ನಿರ್ಮಿಸಿ ಯುವ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವಂತೆ ರಾಜ್ಯ ಸಂಘದ ಕಾರ್ಯಾಧ್ಯಕ್ಷರನ್ನು ಒತ್ತಾಯಿಸಿದರು. ವೇದಿಕೆಯಲ್ಲಿ ಕಾರ್ಯದರ್ಶಿ ವರುಣ್, ಸಹಕಾರ ಸಂಘದ ವಿ.ಆರ್.ಪ್ರಭಾವತಿ, ಕೆ.ಎಸ್.ದಿನೇಶ್, ಉಪಾಧ್ಯಕ್ಷ ವಿ.ಆರ್. ಹರೀಶ್, ಗ್ರಾ.ಪಂ. ವಿ.ಪಿ.ಜೀವನ್, ವಿ.ಪಿ. ಕಲ್ಪೆಶ್, ಗ್ರಾಪಂ ಉಪಾಧ್ಯಕ್ಷೆ ವಿ.ಆರ್.ಗ್ರೀಷ್ಮ ಅವರುಗಳನ್ನು ಗೌರವಿಸಲಾಯಿತು.

ಕೆ.ಪಿ.ನಾಗರಾಜ್ ಸ್ವಾಗತಿಸಿದರು, ಕೆ.ಎಸ್. ಗೋಪಾಲಕೃಷ್ಣ ನಿರೂಪಿಸಿದರೆ, ಪಂಚಮಿ ಅಭಿಷೇಕ್ ವಂದಿಸಿದರು. ಕ್ರೀಡಾಕೂಟದಲ್ಲಿ ಪುರುಷರಿಗೆ ಹಗ್ಗಜಗ್ಗಾಟ, 100 ಮೀ. ಓಟದ ಸ್ಪರ್ಧೆ. ಮಹಿಳೆಯರಿಗೆ ಸಂಗೀತ ಕುರ್ಚಿ ವಿಷದ ಚೆಂಡು, ಹಗ್ಗಜಗ್ಗಾಟ– ಪುಟ್ಟ ಮಕ್ಕಳಿಗೆ ಕಾಳು ಹೆಕ್ಕುವುದು ಮತ್ತು 100 ಮೀ, ಓಟದ ಸ್ಪರ್ಧೆಗಳು ನಡೆಯಿತು. 2021–22ನೇ ಸಾಲಿನಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಸಂಘದ ಸದಸ್ಯರ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

ಉದ್ಯಾನವನ ನಿರ್ಮಾಣಕ್ಕೆ ಭೂಮಿ ಪೂಜೆ



ಮಡಿಕೇರಿ, ಮೇ 29– ನಗರದ ದಾಸವಾಳದಲ್ಲಿ ನೂತನವಾಗಿ ನಿರ್ಮಿಸಲಾಗುವ ಉದ್ಯಾನವನ ನಿರ್ಮಾಣಕ್ಕೆ ಶಾಸಕ ಎಂ.ಪಿ.ಅಪಚ್ಚುರಂಜನ್ ಭೂಮಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಶಾಸಕ ಅಪ್ಪಚ್ಚುರಂಜನ್ ದಾಸವಾಳದ ಉದ್ಯಾನವನ ನಿರ್ಮಾಣದ ನಂತರ ಉದ್ಯಾನವನ ನಿರ್ವಹಣೆಗೆ ಮನವಿ ಮಾಡಿರುವ ಬ್ರಹ್ಮಕುಮಾರಿ ಈಶ್ವರಿ ಸಂಸ್ಥೆಗೆ ವಹಿಸಲಾಗುವುದು. ನಗರದ ಇತರೆ ಕಡೆಗಳಲ್ಲಿಯೂ ಸಹ ಉದ್ಯಾನವನ ನಿರ್ವಹಣೆಗೆ ಯಾರಾದರೂ ಮುಂದೆ ಬಂದಲ್ಲಿ ಸೂಕ್ತ ಕ್ರಮವಹಿಸಲಾಗುವುದು ಎಂದರು.

ನಗರಸಭೆ ಅಧ್ಯಕ್ಷರಾದ ಅನಿತಾ ಪೂವಯ್ಯ, ಉಪಾಧ್ಯಕ್ಷರಾದ ಸವಿತಾ ರಾಕೇಶ್, ಸ್ಥಾಯಿ ಸಮಿತಿ ಅಧ್ಯಕ್ಷ ಉಮೇಶ್ ಸುಬ್ರಮಣಿ, ಪೌರಾಯುಕ್ತ ಎಸ್.ವಿ.ರಾಮದಾಸ್, ನಗರಸಭೆ ಸದಸ್ಯರು ಇತರರು ಇದ್ದರು.

ಮಡಿಕೇರಿ ಗೌಡ ಮಹಿಳಾ ಒಕ್ಕೂಟದ ಬೆಳ್ಳಿ ಹಬ್ಬ



ಮಡಿಕೇರಿ,ಮೇ 29– ಮಡಿಕೇರಿ ಗೌಡ ಮಹಿಳಾ ಒಕ್ಕೂಟದ ಬೆಳ್ಳಿ ಹಬ್ಬ ಕಾರ್ಯಕ್ರಮವು ಕೊಡಗು ಗೌಡ ಸಮಾಜ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ದೇವರಗುಂಡ ಡಾಟಿ ಸದಾನಂದ ಗೌಡ, ಮಡಿಕೇರಿಯ ಗೌಡ ಮಹಿಳಾ ಒಕ್ಕೂಟ ಬೆಳ್ಳಿ ಹಬ್ಬವನ್ನು ಆಚರಿಸುತ್ತಿರುವುದು ಸಂತಸದ ವಿಚಾರವಾಗಿದ್ದು, ಈ ಒಕ್ಕೂಟ ಶತಮಾನೋತ್ಸವ ಸಂಭ್ರಮವನ್ನು ಆಚರಿಸುವಂತಾಗಲಿ ಎಂದು ಹಾರೈಸಿದರು.

ಅರೆಭಾಷೆ ಕನ್ನಡದ ಉಪ ಭಾಷೆಯಾಗಿದ್ದು, ಗೌಡ ಸಮಾಜ ಎಲ್ಲಾ ಕ್ಷೇತ್ರದಲ್ಲಿ ಮುನ್ನಡೆ ಸಾಧಿಸಿದೆ. ನಮ್ಮ ಆಚಾರ ವಿಚಾರ ವಿಭಿನ್ನ ಹಾಗೂ ವಿಶಿಷ್ಟವಾಗಿದೆ. ಗೌಡ ಜನಾಂಗದ ಮಹಿಳೆಯರು ಸಮಾಜದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದು, ಅರೆಭಾಷೆ ಅಕಾಡೆಮಿ ಹೆಣ್ಣು ಮಕ್ಕಳ ಅಭಿವೃದ್ಧಿಗಾಗಿ ಹೆಚ್ಚು ಹೆಚ್ಚು ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಪ್ರೋತ್ಸಾಹ ನೀಡಬೇಕು ಎಂದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಉಪನ್ಯಾಸಕಿ ಆನೇರ ಜಾನಕಿ, ಈ ಕಾರ್ಯಕ್ರಮ 2 ವರ್ಷಗಳ ಹಿಂದೆಯೇ ನಡೆಯಬೇಕಿತ್ತು. ಆದರೆ ಕೊರೊನಾ ಕಾರಣದಿಂದ ಕಾರ್ಯಕ್ರಮ ನಡೆಸಲು ಸಾಧ್ಯವಾಗಿರಲಿಲ್ಲ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಸ್ತು ಪ್ರದರ್ಶನ ಮತ್ತು ಮಾರಾಟ ಮಳಿಗೆಯನ್ನು ಕೊಡಿಗೆ ಕ್ರೀಡಾ ಶಾಲೆಯ ನಿವೃತ್ತ ಪ್ರಾಂಶುಪಾಲರಾದ ಕೊಂಬಾರನ ಕುಂತಿ ಬೋಪಯ್ಯ ಉದ್ಘಾಟಿಸಿದರು. ಚಿಕ್ಕಮಗಳೂರು ಜಿಲ್ಲೆಯ ಅಬಕಾರಿ ಉಪ ಆಯುಕ್ತರಾದ ನಂಗಾರು ಸುಮಿತಾ ನಿಂಗರಾಜು, ಸ್ಮರಣ ಸಂಚಿಕೆ ಬಿಡುಗಡೆ ಗೊಳಿಸಿದರು. ಇದೇ ಸಂದರ್ಭ ಕಟ್ರತನ ಲಲಿತಾ ಅಯ್ಯಣ್ಣ ಬರೆದ 'ಕಡಲಾಳದ ಮುತ್ತುಗಳು' ಪುಸ್ತಕವನ್ನು ಗಣ್ಯರು ಲೋಕಾರ್ಪಣೆಗೊಳಿಸಿದರು.

ಸಭಾ ಕಾರ್ಯಕ್ರಮಕ್ಕೂ ಮುನ್ನ ನಗರದ ಸರ್ಕಾರಿ ಜೂನಿಯರ್ ಕಾಲೇಜು ರಸ್ತೆ ಮುಂಭಾಗದಿಂದ ಮೆರವಣಿಗೆ ನಡೆಯಿತು. ಜಿಲ್ಲಾ ಪಂಚಾಯಿತಿಯ ನಿವೃತ್ತ ಮುಖ್ಯ ಲೆಕ್ಕಾಧಿಕಾರಿ ಮೂಟೆಮನೆ ಪುಷ್ಪಾವತಿ ಮೆರವಣಿಗೆ ಉದ್ಘಾಟಿಸಿದರು. ಮೆರವಣಿಗೆಯಲ್ಲಿ ವಾಲಗ ಹಾಗೂ ಕೋಲಾಟ ಸೇರಿದಂತೆ ಜಾನಪದ ಕಲಾ ತಂಡಗಳು ಭಾಗವಹಿಸಿದ್ದವು.

ಸಾಂಸ್ಕೃತಿಕ ಕಾರ್ಯಕ್ರಮ: ಸಭಾ ಕಾರ್ಯಕ್ರಮದ ನಂತರ ಅರೆಭಾಷೆ ಸಾಂಸ್ಕೃತಿಕ ವೈಭವ ನಡೆಯಿತು.

ಮಡಿಕೇರಿಯ ಗೌಡ ಮಹಿಳಾ ಒಕ್ಕೂಟದಿಂದ ಸ್ವಾಗತ ನೃತ್ಯ, ತಣ್ಣೀಮಾನಿ ತಂಡದಿಂದ ಸಬ್ಬಮ್ಮ ದೇವಿಗೆ ಹರಕೆ ಹಣ ಕಟ್ಟುವ ಸೋಬಾನೆ, ಗಾಳಿಬೀಡು ತಂಡದಿಂದ ತಾಳ ನೃತ್ಯ, ಐಗೂರು ತಂಡದಿಂದ ಯಕ್ಷಗಾನ, ಭಾಗಮಂಡಲ ತಂಡದಿಂದ ಅರೆಭಾಷೆ ನೃತ್ಯ, ಗೌಡ ಮಹಿಳಾ ಒಕ್ಕೂಟದಿಂದ ಹರಿಸೇವೆ ಹಾಡ್, ಅವಂದೂರು ತಂಡದಿಂದ ಅರೆಭಾಷೆ ನೃತ್ಯ, ಕೋಲಾಟ, ಗಾಳಿಬೀಡು ತಂಡದಿಂದ ಕಿಡ್ಡಾಸಲಿ ಮೀನ್ ಬ್ಯಾಟೆ, ಮುತ್ತಾರ್ಮುಡಿ ತಂಡದಿಂದ ಅರೆಭಾಷೆ ನೃತ್ಯ ಹಾಗೂ ಹಲವು ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಬೆಳ್ಳಿ ಹಬ್ಬದ ಅಂಗವಾಗಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕೋಡಿರ ಮೋಟಯ್ಯ ಕುಟುಂಬ, ನಡುವಟ್ಟಿರ ಶೈಲಾ ಸುಬ್ಬಯ್ಯ, ಕಟ್ಟೆಮನೆ ಪ್ರೇಮಾ ಗಣೇಶ್, ತೋಟಂಬೈಲು ಪಾರ್ವತಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಪೊನ್ನಂಪೇಟೆ ಬಳಿ ಚಿನ್ನಾಭರಣ, ನಗದು ಕಳವು

ಮಡಿಕೇರಿ, ಮೇ 29(ಪಿ.ಎಸ್)– ಮನೆಯಲ್ಲಿ ಯಾರೂ ಇಲ್ಲದ ಸಮಯ ಸಾಧಿಸಿ ಬೀರುವಿನಲ್ಲಿಟ್ಟಿದ್ದ ಚಿನ್ನಾಭರಣ ಮತ್ತು ನಗದು ಕಳವು ಮಾಡಿರುವ ಘಟನೆ ಪೊನ್ನಂಪೇಟೆ ತಾಲೂಕಿನಲ್ಲಿ ನಡೆದಿದೆ.

ಪೊನ್ನಂಪೇಟೆ ತಾಲೂಕಿನ ಪೊರಾಡು ನಿವಾಸಿ ಎ.ಎಂ. ಲೋಕೇಶ್ ಎಂಬವರಿಗೆ ಸೇರಿದ ಮನೆಯಲ್ಲಿ ಕಳ್ಳತನ ನಡೆದಿದ್ದು, 14 ಗ್ರಾಂ ಚಿನ್ನಾಭರಣ, 48 ಸಾವಿರ ರೂ. ನಗದನ್ನು ಕಳವು ಮಾಡಲಾಗಿದೆ. ವಿಷಯ ತಿಳಿದು ಶ್ರೀಮಂಗಲ ಪೊಲೀಸರು ಘಟನಾ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು.

ಶ್ರೀಮಂಗಲ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಪ.ಪಂ ಸಭೆಗೆ ಬಿಜೆಪಿ ಸದಸ್ಯರ ಗೈರು ಸಂವಿಧಾನಕ್ಕೆ ವಿರೋಧ

ವಿರಾಜಪೇಟೆ, ಮೇ 29– ವಿರಾಜಪೇಟೆ ಪಟ್ಟಣ ಪಂಚಾಯಿತಿಯ ಸಾಮಾನ್ಯ ಸಭೆಗೆ ಆಡಳಿತ ಪಕ್ಷದ ಬಿಜೆಪಿ ಸದಸ್ಯರುಗಳು ಗೈರು ಆಗಿರುವುದು ಇವರ ಒಳಜಗಳ ಅಧಿಕಾರದ ವ್ಯಾಮೋಹ ಸಂವಿಧಾನಕ್ಕೆ ವಿರೋಧವಾಗಿದೆ ಎಂದು ಜೆಡಿಎಸ್ ತಾಲೂಕು ಅಧ್ಯಕ್ಷ ಪಿ.ಎ.ಮಂಜುನಾಥ್ ದೂರಿದರು.



ಡಾ.ಬಿ.ಆರ್.ಅಂಬೇಡ್ಕರ್ ರಚಿಸಿದಂತ ಸಂವಿಧಾನದಡಿಯಲ್ಲಿ ಗೆದ್ದು ಬಂದ ಪಪಂ ಅಧ್ಯಕ್ಷೆ ಆಡಳಿತದಲ್ಲಿ ಯಾರದೋ ಕೈಗೊಂಬೆಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಆದರೆ ಪಂಚಾಯಿತಿ ಅಧ್ಯಕ್ಷರು, ಅಧಿಕಾರಿಗಳು ಸೇರಿ ಸಭೆ ಕರೆದು ದಿನಾಂಕ ಗೊತ್ತುಮಾಡಿ ಸಭೆಗೆ ಬಾರದೆ ಇರುವಂತ ಬಿಜೆಪಿ ಅಧ್ಯಕ್ಷರು ಮತ್ತು ಸದಸ್ಯರ ಆಡಳಿತಕ್ಕೆ ಜನರು ಏನು ಹೇಳಬೇಕು ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಜನತೆಯ ಸಮಸ್ಯೆಗಳನ್ನು ಆಲಿಸುವ ಬಗ್ಗೆ ಅರಿವಿಲ್ಲದ ಬಿಜೆಪಿ ಸದಸ್ಯರ ಒಳಜಗಳದಿಂದ ಪಟ್ಟಣದಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿಲ್ಲ. ಮೂರು ತಿಂಗಳಿಂದ ಸಾಮಾನ್ಯ ಸಭೆ ನಡೆಸಿಲ್ಲ, ಜನರ ಸಮಸ್ಯೆಗಳನ್ನು ಬಗೆಹರಿಸಿಲ್ಲ. ಇವರಿಗೆ ಮತ ಹಾಕಿದವರು ಯೋಚಿಸುವ ಕಾಲಬಂದಿದೆ. ಪಂಚಾಯಿತಿಯ ಸ್ಥಾಯಿ ಸಮಿತಿ ಅಧ್ಯಕ್ಷರ ಆಯ್ಕೆ ಬಿಜೆಪಿ ಸದಸ್ಯರ ದೊಂಬರಾಟ ಪ್ರಜಾಪ್ರಭುತ್ವದಲ್ಲಿ ವಿರೋಧಿ ನಡೆಯಾಗಿದೆ ಎಂದು ಜೆಡಿಎಸ್‌ನ ಮಂಜುನಾಥ್ ಬಿಜೆಪಿ ಸದಸ್ಯರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಜೆಡಿಎಸ್ ನಗರ ಅಧ್ಯಕ್ಷ ಯೋಗೇಶ್ ನಾಯ್ಡು ಮಾತನಾಡಿ ಸ್ಥಾಯಿ ಸಮಿತಿ ಅಧ್ಯಕ್ಷರ ಆಯ್ಕೆ ಮಾಡಲು ಪಂಚಾಯಿತಿಯಿಂದ ಸಭೆ ಕರೆದು ಗೈರುಹಾಜರಾಗಲು ಕಾರಣ ಬಿಜೆಪಿ ಆಡಳಿತದ ಸದಸ್ಯರಿಗೆ ಸೋಲುವ ಭಯ ಉಂಟಾಗಿದೆ ಎಂದರು. ಈ ಸಂದರ್ಭ ಪಕ್ಷದ ಅಶ್ರಾಫ್ ಆಲಿ, ಪಣತ್ತಲೆ ಸತ್ಯ, ಹೆಚ್.ಆರ್.ಕಿಶೋರ್ ಇತರರಿದ್ದರು.

ಕೊಡಗು ಗೌಡ ಫೆಡರೇಷನ್ ಅಧ್ಯಕ್ಷರಾಗಿ ಸೂರ್ತಲೆ ಆರ್.ಸೋಮಣ್ಣ ಆಯ್ಕೆ

ಮಡಿಕೇರಿ ಮೇ 29– ಕೊಡಗು ಗೌಡ ಫೆಡರೇಷನ್ ಅಧ್ಯಕ್ಷರಾಗಿ ಸೂರ್ತಲೆ ಆರ್.ಸೋಮಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ನಗರದಲ್ಲಿರುವ ಫೆಡರೇಷನ್ ಕಚೇರಿಯಲ್ಲಿ ನಡೆದ ಚುನಾಯಿತ 21 ನಿರ್ದೇಶಕರುಗಳ ಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. 2022–23 ರಿಂದ 2024–25ನೇ ಸಾಲಿಗೆ ಸೂರ್ತಲೆ ಆರ್.ಸೋಮಣ್ಣ 3ನೇ ಬಾರಿಗೆ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾದರು.


ಆರ್.ಸೋಮಣ್ಣ

ಉಪಾಧ್ಯಕ್ಷರಾಗಿ ಪೊನ್ನಚ್ಚನ ಮೋಹನ್, ಕಾರ್ಯದರ್ಶಿ ಪೇರಿಯನ ಕೆ.ಉದಯ, ಖಜಾಂಚಿ ಆನಂದ ಕರಂದ್ಲಾಜೆ, ಜಂಟಿ ಕಾರ್ಯದರ್ಶಿಯಾಗಿ ನವೀನ್ ಅಂಬೆಕಲ್ಲು, ನಿರ್ದೇಶಕರುಗಳಾಗಿ ತೇನನ ಎಸ್.ರಾಜೇಶ್, ಚಿಲ್ಲನ ಗಣಿಪ್ರಸಾದ್, ಕೊಲ್ಯದ ಆರ್.ಗಿರೀಶ್, ತೋಟಂಬೈಲು ಈ.ಮನೋಹರ್, ದಂಬೆಕೋಡಿ ಎಸ್.ಹರೀಶ್, ಮನೋಹರ್ ಪೈಕೇರ, ಪಳಂಗಪ್ಪ ಪಾಣತ್ತಲೆ, ತಡಿಯಪ್ಪನ ನರೇಂದ್ರ, ಕುದುಪಜೆ ಮೋಹನ್, ಕೊಡಗನ ತೀರ್ಥ ಪ್ರಸಾದ್, ಡಾ.ಕೂಡಕಂಡಿ ದಯಾನಂದ, ಕೊಟ್ಟಕೇರಿಯನ ಕೆ.ದಯಾನಂದ, ತಳೂರು ದಿನೇಶ್, ಪೋರಿಯನ ನೇಹ ರೋಷನ್, ಜಪ್ಪೆಕೋಡಿ ಶುಭಾಷಿಣಿ, ದೇವಾಯಿರ ಗಿರೀಶ್ ಆಯ್ಕೆಯಾಗಿದ್ದಾರೆ.

ಬಾಲ್ಯ ವಿವಾಹ: ನಾಲ್ವರ ವಿರುದ್ಧ ಕೇಸ್ ದಾಖಲು

ತಿ.ನರಸೀಪುರ, ಮೇ 29–ಬಾಲ್ಯ ವಿವಾಹ ಪ್ರಕರಣಕ್ಕೆ ಸಂಬಂಧಿಸಿದಂತೆ ಮದುಮಗ ಸೇರಿ ನಾಲ್ವರ ವಿರುದ್ಧ ತಿ.ನರಸೀಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಿ.ನರಸೀಪುರ ತಾಲೂಕಿನ ಗ್ರಾಮವೊಂದರ ಅಪ್ರಾಪ್ತ ಬಾಲಕಿಗೆ ಮದುವೆಯಾಗುತ್ತಿರುವ ಬಗ್ಗೆ ಮಕ್ಕಳ ಸಹಾಯವಾಣಿಗೆ 2021ರ ಜೂನ್ 28ರಂದು ದೂರು ಬಂದಿತ್ತು. ಈ ಹಿನ್ನೆಲೆಯಲ್ಲಿ ತಾಲೂಕು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮೇಲ್ವಿಚಾರಕಿ ತಾರಾ 2021ರ ಜೂ.29ರಂದು ಗ್ರಾಮಕ್ಕೆ ಭೇಟಿ ನೀಡಿದ್ದಲ್ಲದೇ, ಜುಲೈ 2ರಂದು ಮಕ್ಕಳ ಕಲ್ಯಾಣ ಸಮಿತಿಗೆ ಪೋಷಕರನ್ನು ಕರೆಸಿ ಮುಚ್ಚಳಿಕೆ ಬರೆಸಿಕೊಂಡಿದ್ದಾರೆ.

ಬಾಲ್ಯ ವಿವಾಹದ ಬಗ್ಗೆ ದೂರು ಬಂದರೆ ಸದರಿ ಬಾಲಕಿಯು ಪ್ರಾಪ್ತಳಾಗುವವರೆಗೆ ಮಹಿಳೆ ಮತ್ತು ಕಲ್ಯಾಣ ಇಲಾಖೆಯು ನಿಗಾ ವಹಿಸುತ್ತದೆ. ಅದರಂತೆ ಇತ್ತೀಚೆಗೆ ಅಧಿಕಾರಿಗಳು ಗ್ರಾಮಕ್ಕೆ ತೆರಳಿ ಬಾಲಕಿಯ ತಾಯಿಯನ್ನು ವಿಚಾರಿಸಿದಾಗ ಅವರು, ಆಕೆ ಗಂಡನ ಮನೆಯಲ್ಲಿರುವುದಾಗಿ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಬಾಲಕಿ ಮದುವೆಯಾಗಿದ್ದಾಳೆ ಎನ್ನಲಾದ ಗ್ರಾಮಕ್ಕೆ ತೆರಳಿ ಪರಿಶೀಲನೆ ನಡೆಸಿದಾಗ ಅಪ್ರಾಪ್ತ ಬಾಲಕಿಯು 2021ರ ಡಿ.18ರಂದು ಚಾಮರಾಜನಗರ ಜಿಲ್ಲೆ ತೆರಕಣಾಂಬಿ ದೇವಸ್ಥಾನದಲ್ಲಿ ವಿವಾಹವಾಗಿರುವುದು ಬಯಲಾಗಿದೆ. ಈ ಹಿನ್ನೆಲೆಯಲ್ಲಿ ತಿ.ನರಸೀಪುರ ತಾಲೂಕು ಸಿಡಿಪಿಓ ಲಕ್ಷ್ಮಿ ಅವರು ನೀಡಿದ ದೂರಿನ ಮೇರೆಗೆ ಅಪ್ರಾಪ್ತ ಬಾಲಕಿಯನ್ನು ಮದುವೆಯಾದ ಯುವಕ, ಆತನ ತಂದೆ–ತಾಯಿ ಮತ್ತು ಬಾಲಕಿಯ ತಂದೆ ವಿರುದ್ಧ ತಿ.ನರಸೀಪುರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಸಂಗೀತ ವಿವಿ ಹಂಗಾಮಿ ಬೋಧಕೇತರ ಜಾಥಾ ಅನುಮತಿ ಕೋರಿ ಪೊಲೀಸ್ ಆಯುಕ್ತರಿಗೆ ಪತ್ರ

ಮೈಸೂರು, ಮೇ 29– ತಮ್ಮನ್ನು ಸೇವೆಯಿಂದ ವಜಾಗೊಳಿಸಿರುವುದನ್ನು ಖಂಡಿಸಿ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರಾದೇಶಿಕ ಕಲೆಗಳ ವಿಶ್ವವಿದ್ಯಾನಿಲಯದ ಹಂಗಾಮಿ ಬೋಧಕೇತರ ಸಿಬ್ಬಂದಿ ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ಮೇ 30ರಂದು 100ನೇ ದಿನಕ್ಕೆ ಕಾಲಿಡುತ್ತಿರುವ ಹಿನ್ನೆಲೆಯಲ್ಲಿ ವಿವಿ ಆವರಣದಿಂದ ಡಿಸಿ ಕಚೇರಿಯವರೆಗೆ ಜಾಥಾ ನಡೆಸಿ ಪ್ರತಿಭಟನೆ ನಡೆಸಲು ನೌಕರರು ನಿರ್ಧರಿಸಿದ್ದಾರೆ.

ಈ ಸಂಬಂಧ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ಆಯುಕ್ತರಿಗೆ ಅನುಮತಿ ಕೋರಿ ಪತ್ರ ಬರೆದಿರುವ ವಜಾಗೊಂಡಿರುವ ಹಂಗಾಮಿ ಬೋಧಕೇತರ ಸಿಬ್ಬಂದಿ ತಾವು ಕಳೆದ 13 ವರ್ಷಗಳಿಂದಲೂ ವಿವಿಯಲ್ಲಿ ಹಂಗಾಮಿ ಬೋಧಕೇತರ ಸಿಬ್ಬಂದಿಯಾಗಿ ಅತ್ಯಂತ ಜವಾಬ್ದಾರಿಯಿಂದ ಕಾರ್ಯನಿರ್ವಹಿಸುತ್ತಿದ್ದರೂ ತಮ್ಮನ್ನು ಫೆ.21ರಿಂದ ಕೆಲಸದಿಂದ ತೆಗೆದಿದ್ದಾರೆ ಹಾಗೂ 13 ತಿಂಗಳ ಬಾಕಿ ವೇತನ ನೀಡದೇ ಅನ್ಯಾಯ ಮಾಡಿದ್ದಾರೆ ಎಂದು ತಿಳಿಸಿದ್ದಾರೆ. ಬಾಕಿ ವೇತನ ನೀಡಬೇಕು ಹಾಗೂ ತಮ್ಮನ್ನು ಸೇವೆಯಲ್ಲಿ ಮುಂದುವರಿಸಬೇಕು ಎಂದು ಆಗ್ರಹಿಸಿ ಪ್ರತಿಭಟಿಸುವುದಾಗಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಒಂದನೇ ಪುಟದಿಂದ

ಮೋದಿ ಪ್ರಶಂಸೆ

ಪರಿಕಲ್ಪನೆಯನ್ನು ಸಾಕ್ಷೀಕರಿಸಿದೆ. ಅವರು ಪ್ರಸ್ತುತ ಕರ್ನಾಟಕದಲ್ಲಿ 10ನೇ ತರಗತಿ ಪರೀಕ್ಷೆಯನ್ನು ಬರೆದು ಉತ್ತೀರ್ಣವಾಗಿದ್ದಾರೆ. ಆದರೆ ಅವರ ಸಫಲತೆಯಲ್ಲಿ ತುಂಬಾ ವಿಶೇಷವಾದ ವಿಚಾರವಿದೆ. ಅದೇನೆಂದರೆ ಇದಕ್ಕೂ ಮುನ್ನ ಅವರಿಗೆ ಕನ್ನಡ ಬರುತ್ತಿರಲಿಲ್ಲ. ಕೇವಲ 3 ತಿಂಗಳಲ್ಲಿ ಕನ್ನಡ ಕಲಿತು, ಆ ವಿಷಯದಲ್ಲಿ 92 ಅಂಕ ಗಳಿಸಿದ್ದಾರೆ. ನಿಮಗೆ ಆಶ್ಚರ್ಯವೆನಿಸಿದರೂ ಇದು ಸತ್ಯ ಎಂದರು.

ಕಲ್ಪನಾರ ಮತ್ತಷ್ಟು ವಿಚಾರಗಳು ಆಶ್ಚರ್ಯಚಕಿತಗೊಳಿಸುವುದರ ಜೊತೆಗೆ ಪ್ರೇರಣಾತ್ಮಕವಾಗಿವೆ. ಕಲ್ಪನಾ ಮೂಲತಃ ಉತ್ತರಾಖಂಡ ಜೋಶಿಮಠದ ನಿವಾಸಿಯಾಗಿದ್ದು, ಅವರು ಟಿಬಿ ಪೀಡಿತರಾಗಿದ್ದಾರೆ. 3ನೇ ತರಗತಿಯಲ್ಲಿದ್ದಾಗ ಅವರು ದೃಷ್ಟಿಯನ್ನೂ ಕಳೆದುಕೊಂಡಿದ್ದಾರೆ. ಆದರೂ ಅವರು ತನ್ನ ಪ್ರಯತ್ನ ಬಿಟ್ಟಿಲ್ಲ. ಮನಸ್ಸಿದ್ದರೆ ಮಾರ್ಗ ಎನ್ನುವಂತೆ ಮುನ್ನಡೆದಿದ್ದಾರೆ. ಮೈಸೂರಿನ ಪ್ರೊ.ತಾರಾ ಮೂರ್ತಿ ಅವರ ಸಂಪರ್ಕ ಸಿಕ್ಕಿದೆ. ತಾರಾ ಮೂರ್ತಿ ಅವರು ಕಲ್ಪನಾಗೆ ಕೇವಲ ಪ್ರೋತ್ಸಾಹಿಸಿದ್ದಲ್ಲದೆ ತುಂಬಾ ಸಹಾಯ ಮಾಡಿದ್ದಾರೆ. ಒಟ್ಟಾರೆ ಕಲ್ಪನಾ ತನ್ನ ಛಲ, ಪರಿಶ್ರಮದಿಂದ ಈ ದಿನ ನಮ್ಮೆಲ್ಲರ ಮುಂದೆ ಉತ್ತಮ ಉದಾಹರಣೆಯಾಗಿ ನಿಂತಿದ್ದಾಳೆ ಎಂದು ಪ್ರಧಾನಿ ಮೋದಿ ಬಣ್ಣಿಸಿದರು.

'ಮೈಸೂರು ಮಿತ್ರ' ಹಾಗೂ ಸೋದರ ಪತ್ರಿಕೆ ಸಂಜೆ ಇಂಗ್ಲಿಷ್ ದೈನಿಕ 'ಸ್ಟಾರ್ ಆಫ್ ಮೈಸೂರ್'ನ ಮೇ 20ರ ಸಂಚಿಕೆಯಲ್ಲಿ ಕಲ್ಪನಾಳ ಸಾಧನೆ ಹಾಗೂ ಅದಕ್ಕೆ ಕಾರಣರಾದ ಪ್ರೊ.ತಾರಾ ಮೂರ್ತಿ ಅವರ ಕುರಿತಾದ ಸಮಗ್ರ ವರದಿಯನ್ನು ಪ್ರಕಟಿಸಲಾಗಿತ್ತು.

ಹೆಚ್ಚು ಹಣ ಸಂಗ್ರಹ

ಬಹಳ ಮುಖ್ಯ, ಗ್ರಾಮೀಣ ಯುವಕರನ್ನು ಸ್ಟಾರ್ಟ್‌ಅಪ್ ಜಗತ್ತಿಗೆ ಸಂಪರ್ಕಿಸುತ್ತಿರುವ ಶ್ರೀಧರ್ ವೆಂಬು ಅಂತಹ ಒಂದು ಉದಾಹರಣೆ. ವೆಂಬು ಇತ್ತೀಚೆಗೆ ಪದ್ಮ ಪ್ರಶಸ್ತಿಯನ್ನು ಪಡೆದಿದ್ದಾರೆ. ಅವರು ಸ್ವತಃ ಯಶಸ್ವಿ ಉದ್ಯಮಿ, ಆದರೆ ಈಗ ಅವರು ಸಹ ಇತರ ಉದ್ಯಮಿಗಳನ್ನು ರೂಪಿಸುವ ಕೆಲಸವನ್ನು ಸ್ವತಃ ವಹಿಸಿಕೊಂಡರು. ಶ್ರೀಧರ್ ಅವರು ಗ್ರಾಮೀಣ ಪ್ರದೇಶದಿಂದ ತಮ್ಮ ಕೆಲಸವನ್ನು ಪ್ರಾರಂಭಿಸಿದ್ದಾರೆ ಎಂದು ಹೇಳಿದರು.

ಅಂತೆಯೇ ಗ್ರಾಮೀಣ ಉದ್ಯಮಿಗಳನ್ನು ಉತ್ತೇಜಿಸಲು ಒನ್–ಬ್ರಿಡ್ಜ್‌ನಿಂದ ಮದನ್ ಪದಕಿ ಅವರ ಬಗ್ಗೆ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದರು. ಮದನ್ ಪದಕಿ ಜಿ ಅವರು ಗ್ರಾಮೀಣ ಉದ್ಯಮಿಗಳನ್ನು ಪ್ರೋತ್ಸಾಹಿಸಲು '1 ಬ್ರಿಡ್ಜ್' ಎಂಬ ವೇದಿಕೆಯನ್ನು ಪ್ರಾರಂಭಿಸಿದರು. 9000 ಕ್ಕೂ ಹೆಚ್ಚು ಗ್ರಾಮೀಣ ಉದ್ಯಮಿಗಳು ಈ ವೇದಿಕೆಯ ಮೂಲಕ ಗ್ರಾಹಕರಿಗೆ ತಮ್ಮ ಸೇವೆಗಳನ್ನು ವಿಸ್ತರಿಸುತ್ತಿದ್ದಾರೆ ಎಂದು ಅವರು ಹೇಳಿದರು.

ಇದೇ ವೇಳೆ ಪ್ರಸ್ತುತ ನಮ್ಮ ದೇಶದಲ್ಲಿ ಚಾರ್ ಧಾಮ್ ಯಾತ್ರೆ ನಡೆಯುತ್ತಿದೆ. ಚಾರ್ ಧಾಮ್ ಮತ್ತು ಕೇದಾರನಾಥಕ್ಕೆ ಪ್ರತಿದಿನ ಸಾವಿರಾರು ಭಕ್ತರು ಆಗಮಿಸುತ್ತಿದ್ದಾರೆ. ಜನರು ತಮ್ಮ ಆಹ್ಲಾದಕರ ಪ್ರಯಾಣದ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಇದೇ ವೇಳೆ ಕೆಲ ಪ್ರಯಾಣಿಕರು ಕೊಳಕು ಎರಚುವಂಥ ಚಿತ್ರಗಳೂ ಬರುತ್ತಿವೆ. ಇದು ಸರಿಯಲ್ಲ. ಕೆಲವರು ಅಲ್ಲಿ ಸ್ವಚ್ಛತಾ ಅಭಿಯಾನ ನಡೆಸುತ್ತಿದ್ದಾರೆ. ತೀರ್ಥೋದ್ಭವ ಸೇವೆಯ ಮಹತ್ವವನ್ನೂ ಇಲ್ಲಿ ಹೇಳಲಾಗಿದೆ. ಎಲ್ಲೇ ಹೋದರೂ ಘನತೆ ಕಾಯ್ದುಕೊಳ್ಳಬೇಕು ಎಂದರು.

ಜೂನ್ 5 ವಿಶ್ವ ಪರಿಸರ ದಿನ ಎಂದು ಹೇಳಿದ ಮೋದಿ, ಪರಿಸರ ದಿನದ ಬಗ್ಗೆ ನಮ್ಮ ಸುತ್ತ ಪ್ರಚಾರ ಮಾಡಬೇಕು. ಗಿಡಗಳನ್ನು ನೆಡುವುದು ಮತ್ತು ಪರಿಸರ ಉಳಿಸುವ ಸಂಬಂಧ ಅಭಿಯಾನಗಳನ್ನು ನಡೆಸಬಹುದು. ಮುಂದಿನ ತಿಂಗಳು ಜೂನ್ 21 ರಂದು ನಾವು 8ನೇ ಅಂತರಾಷ್ಟ್ರೀಯ ಯೋಗ ದಿನವನ್ನು ಆಚರಿಸುತ್ತಿದ್ದೇವೆ. ಯೋಗ ದಿನವನ್ನು ಉತ್ಸಾಹದಿಂದ ಆಚರಿಸಲು ನಾನು ನಿಮ್ಮೆಲ್ಲರನ್ನು ಕೋರುತ್ತೇನೆ. ಜಗತ್ತಿನಾದ್ಯಂತ ಯೋಗ ದಿನಾಚರಣೆಗೆ ಭರದ ಸಿದ್ಧತೆಗಳು ನಡೆಯುತ್ತಿವೆ. ಈ ಸಮಯದಲ್ಲಿ, ಕೊರೊನಾ ಮಾರ್ಗಸೂಚಿಗಳನ್ನು ಸಹ ಅನುಸರಿಸಬೇಕು. ಆರೋಗ್ಯಕ್ಕೆ ಯೋಗ ಎಷ್ಟು ಮುಖ್ಯ ಎಂಬುದನ್ನು ಕೊರೋನಾ ನಮಗೆ ಅರಿವು ಮೂಡಿಸಿದೆ.

ನಮ್ಮ ದೇಶದಲ್ಲಿ ಈ ಬಾರಿ ಅಮೃತ ಮಹೋತ್ಸವವನ್ನು ಗಮನದಲ್ಲಿಟ್ಟುಕೊಂಡು 15 ಸ್ಥಳಗಳಲ್ಲಿ ಯೋಗ ಉತ್ಸವಗಳನ್ನು ಆಯೋಜಿಸಲಾಗಿದೆ. ಪ್ರಸ್ತುತ ಯೋಗ ದಿನಾಚರಣೆಗೆ 100 ದಿನಗಳ ಕೌಂಟ್‌ಡೌನ್ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ನೀವು ಈಗಿನಿಂದಲೇ ಯೋಗ ದಿನದ ತಯಾರಿಯನ್ನು ಪ್ರಾರಂಭಿಸಬೇಕು. ಎಲ್ಲರೂ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು.

ಜೈರಾಂ ರಮೇಶ್ ಅಭ್ಯರ್ಥಿಗಳು

ಜಯ ಗಳಿಸಿದ್ದರು. ಯಡಿಯೂರಪ್ಪನವರು ಮೊದಲ ಬಾರಿಗೆ ಮುಖ್ಯ ಮಂತ್ರಿಯಾದಾಗ ಜಗ್ಗೇಶ್ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿ ಸೇರ್ಪಡೆ ಗೊಂಡರು. ನಂತರ ಉಪಚುನಾವಣೆಯಲ್ಲಿ ಅವರಿಗೆ ಸ್ಪರ್ಧಿಸಲು ಬಿಜೆಪಿ ಅವಕಾಶ ನೀಡಿಲ್ಲವಾದರೂ, ಕೆಎಸ್‌ಆರ್‌ಟಿಸಿ ಅಧ್ಯಕ್ಷರಾಗಿ ಅವರನ್ನು ನೇಮಿಸಲಾಗಿತ್ತು. ಯಶವಂತಪುರ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಜಗ್ಗೇಶ್ ಪರಾಭವಗೊಂಡಿದ್ದರು. ಇದೀಗ ಅವರಿಗೆ ರಾಜ್ಯಸಭಾ ಸದಸ್ಯ ಸ್ಥಾನ ಒಲಿದು ಬಂದಿದೆ. ಕಾಂಗ್ರೆಸ್ ಜೈರಾಂ ರಮೇಶ್ ಅವರನ್ನು 2ನೇ ಬಾರಿಗೆ ರಾಜ್ಯಸಭಾ ಸದಸ್ಯತ್ವಕ್ಕೆ ಅಭ್ಯರ್ಥಿಯಾಗಿ ಘೋಷಿಸಿದ್ದು, 4ನೇ ಅಭ್ಯರ್ಥಿ ಯಾರು ಎಂಬುದು ಇನ್ನೂ ನಿಗೂಢವಾಗಿ ಉಳಿದಿದೆ. ಕಳೆದ ಚುನಾವಣೆಯಲ್ಲಿ ಬಿಜೆಪಿ 4ನೇ ಅಭ್ಯರ್ಥಿಯಾಗಿದ್ದ ಕೆ.ಸಿ.ರಾಮಮೂರ್ತಿ ಅವರಿಗೆ ಬೆಂಬಲ ನೀಡಿತ್ತು.

> “ ಆತ್ಮೀಯ ಕನ್ನಡದ ಬಂಧುಗಳೆ, 42 ವರ್ಷ ತಪಸ್ಸಿನಂತೆ ಕಲಾರಂಗದಲ್ಲಿ ಸೇವೆ ಮಾಡಿ, ಕಾಯ ವಾಚ ಮನಸ ಸತ್ಯಮಾರ್ಗದಲ್ಲಿ ಬದುಕಿದ್ದೇನೆ. ನನ್ನ ನೆಚ್ಚಿನ ಭಾಜಪ ರಾಜ್ಯದ ಮುಖ್ಯಮಂತ್ರಿಗಳು, ಮಂತ್ರಿ ಗಳು, ಶಾಸಕ ಮಿತ್ರರು, ರಾಜ್ಯ ರಾಷ್ಟ್ರದ ಸಂಘದ ಹಿರಿಯರ ಆಶೀರ್ವಾದದಿಂದ ರಾಜ್ಯಸಭೆಗೆ ಆಯ್ಕೆ ಆಗಿರುವೆ. ತಮಗೆ ಶಿರಬಾಗಿ ವಂದಿ ಸುವೆ.. ರಾಯರ ಕೃಪೆ ಅವರ ಪವಾಡಕ್ಕೆ ಧನ್ಯ – ನಟ ಜಗ್ಗೇಶ್

ಕಸದ ರಾಶಿಯ ಸ್ವಾಗತ

ರಸ್ತೆಯ ಜಂಕ್ಷನ್‌ನಲ್ಲಿ ಕಸದ ರಾಶಿಯೇ ಸುರಿಯಲಾಗಿದೆ. ರಿಂಗ್ ರಸ್ತೆಯ ಹಲವೆಡೆ ಕಸ ಹಾಗೂ ಕಟ್ಟಡ ತ್ಯಾಜ್ಯ ಕಂಡು ಬರುತ್ತಿದೆ. ಕೂಡಲೇ ರಸ್ತೆ ಬದಿ ಸುರಿಯಲಾಗಿರುವ ಕಸವನ್ನು ತೆರವುಗೊಳಿಸಬೇಕು. ಮೈಸೂರಿಗೆ ಸಂಪರ್ಕ ಕಲ್ಪಿಸುವ ಎಲ್ಲಾ ರಸ್ತೆಗಳ ಬದಿಯಲ್ಲಿರುವ ಕಸದ ರಾಶಿ ತೆರವುಗೊಳಿಸುವ ಮೂಲಕ ಮೈಸೂರಿಗೆ ಬರುವ ಪ್ರವಾಸಿಗರಿಗೆ ಉತ್ತಮ ವಾತಾವರಣ ಕಲ್ಪಿಸುವಂತಾಗಬೇಕು ಒತ್ತಾಯಿಸಿದರು.

ರಸ್ತೆ ಗುಂಡಿ ಮುಚ್ಚಿ: ಮೈಸೂರಿನ ಬಹುತೇಕ ರಸ್ತೆಗಳು ಗುಂಡಿ ಬಿದ್ದಿದ್ದು, ವಾಹನ ಸವಾರರು ಪರದಾಡುವಂತಾಗಿದೆ. ಕಳೆದ ಎರಡು ತಿಂಗಳ ಹಿಂದಷ್ಟೇ ಒಂದು ವಾರ್ಡ್‌ಗೆ 10 ಲಕ್ಷ ರೂ. ವೆಚ್ಚ ಮಾಡಿ ಗುಂಡಿ ಬಿದ್ದಿದ್ದ ರಸ್ತೆಗಳನ್ನು ದುರಸ್ತಿ ಮಾಡಲಾಗಿತ್ತು. ಆದರೆ, ಇತ್ತೀಚೆಗೆ ಸುರಿದ ಮಳೆಗೆ ರಸ್ತೆ ಗುಂಡಿಗಳು ಬಾಯಿ ತೆರೆದುಕೊಂಡಿವೆ. ರಾತ್ರಿ ವೇಳೆ ರಸ್ತೆಯಲ್ಲಿರುವ ಗುಂಡಿ ಕಾಣದೇ ದ್ವಿಚಕ್ರ ವಾಹನ ಸವಾರರು ಬೀಳುತ್ತಿದ್ದಾರೆ. ಅದರಲ್ಲೂ ನಜರ್‌ಬಾದ್‌ನಿಂದ ಹಾಲಿನ ಡೈರಿವರೆಗೂ ರಸ್ತೆ ಗುಂಡಿ ಬಿದ್ದಿದೆ. ಈ ರಸ್ತೆಯಲ್ಲಿ ಆಂಬುಲೆನ್ಸ್‌ಗಳ ಸಂಚಾರ ಹೆಚ್ಚಾಗಿವೆ. ರಸ್ತೆಯಲ್ಲಿನ ಗುಂಡಿಗಳು ಆಂಬುಲೆನ್ಸ್ ಸಂಚಾರಕ್ಕೆ ತೊಡಕಾಗುತ್ತಿದೆ ಎಂದು ಆರೋಪಿಸಿದರು.

ಸುತ್ತೂರು ಮಠದಲ್ಲಿ ಅಂತಾರಾಷ್ಟ್ರೀಯ ಯೋಗ ಪ್ರದರ್ಶನದ 2ನೇ ಯೋಗ ತಾಲೀಮು

ಮೈಸೂರಲ್ಲಿ ಹೊಸ ಉತ್ಸಾಹ, ಹಬ್ಬದ ವಾತಾವರಣ ಉಂಟು ಮಾಡಿರುವ ಮೋದಿ ಭೇಟಿ: ಸುತ್ತೂರು ಶ್ರೀ ಅಭಿಮತ

1,500ಕ್ಕೂ ಹೆಚ್ಚು ಯೋಗಪಟುಗಳು ಭಾಗಿ



ಚಾಮುಂಡಿಬೆಟ್ಟದ ರಮಣೀಯ ಪರಿಸರದ ಹಿನ್ನೆಲೆಯಲ್ಲಿ ಯೋಗ ಪ್ರದರ್ಶಿಸಿದ ಯೋಗಪಟುಗಳು



ಸುತ್ತೂರು ಶ್ರೀಗಳ ಸಮ್ಮುಖದಲ್ಲಿ ಯೋಗಪಟುಗಳ ನಡುವೆ ಯೋಗಪ್ರದರ್ಶನದಲ್ಲಿ ನಿರತರಾಗಿದ್ದ ಶಾಸಕ ಎಸ್.ಎ.ರಾಮದಾಸ್.

ಮೈಸೂರು, ಮೇ 29(ಆರ್‌ಕೆಬಿ)– ಅಂತಾರಾಷ್ಟ್ರೀಯ ಯೋಗ ದಿನೋತ್ಸವ ಜೂ.21 ರಂದು ಮೈಸೂರಿನಲ್ಲಿ ನಡೆಸಲು ಉದ್ದೇಶಿಸಿದ್ದು, ಅದರ ಪೂರ್ವಭಾವಿ ಮೈಸೂರಿನ ಸುತ್ತೂರು ಮಠದ ಬೃಹತ್ ಸಭಾ ಭವನ ಹಾಗೂ ಸುತ್ತಮುತ್ತಲಿನ ಸ್ಥಳಗಳಲ್ಲಿ ಭಾನುವಾರ ಆಯೋಜಿಸಿದ್ದ ಎರಡನೇ ಯೋಗ ತಾಲೀಮಿನಲ್ಲಿ ಒಂದೂವರೆ ಸಾವಿರಕ್ಕೂ ಹೆಚ್ಚು ಮಂದಿ ನಾನಾ ಯೋಗ ಆಸನಗಳು, ಪ್ರಾಣಾಯಾಮ, ಧ್ಯಾನ ಮತ್ತು ಸಂಕಲ್ಪದಲ್ಲಿ ಸಾಮೂಹಿಕವಾಗಿ ಭಾಗವಹಿಸಿ ಯೋಗ ಪ್ರದರ್ಶಿಸಿದರು.

ಮೈಸೂರಿನ ಯೋಗ ಫೆಡರೇಷನ್ ಆಫ್ ಮೈಸೂರು ಇನ್ನಿತರೆ ಯೋಗ ಸಂಸ್ಥೆಗಳ ಸಹಯೋಗದಲ್ಲಿ ಜೂ.21ರಂದು ನಡೆಸಲು ಉದ್ದೇಶಿಸಿರುವ ಯೋಗ ದಿನೋತ್ಸವದ ಯಶಸ್ಸಿಗಾಗಿ ಪ್ರತಿ ಭಾನುವಾರ ಒಂದೊಂದು ಸ್ಥಳದಲ್ಲಿ ಯೋಗ ತಾಲೀಮು ನಡೆಸುತ್ತಿದೆ. ಅಂತಾರಾಷ್ಟ್ರೀಯ ಯೋಗ ದಿನದಂದು 2 ಲಕ್ಷಕ್ಕೂ ಹೆಚ್ಚು ಮಂದಿ ಯೋಗ ಪಟುಗಳನ್ನು ಸೇರಿಸಿ ದಾಖಲೆ ನಿರ್ಮಿಸುವ ಸಂಕಲ್ಪ ಹೊಂದಿದೆ. ಇದರ ಮೊದಲ ಅಭ್ಯಾಸ ಕಳೆದ ವಾರ ಮೈಸೂರಿನ ಮಹಾರಾಜ ಕಾಲೇಜು ಕ್ರಿಕೆಟ್ ಮೈದಾನದಲ್ಲಿ ನಡೆಸಲಾಗಿತ್ತು.

ಮುಂದಿನ ತಾಲೀಮು ಜೂ.5 ರಂದು ಮೈಸೂರು ಅರಮನೆ ಮೈದಾನದಲ್ಲಿ 30,000 ಜನರನ್ನು ಒಟ್ಟುಗೂಡಿಸುವ ಗುರಿಯೊಂದಿಗೆ ನಡೆಯಲಿದೆ. ಜೂ.12 ಮತ್ತು 19 ರಂದು ಮೈಸೂರು ರೇಸ್ ಕೋರ್ಸ್ ಮೈದಾನದಲ್ಲಿ ನಡೆಯಲಿದೆ.

ಸುತ್ತೂರು ಮಠಾಧೀಶ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಉಪಸ್ಥಿತಿಯಲ್ಲಿ ನಡೆದ ಸಾಮಾನ್ಯ ಯೋಗ ಶಿಷ್ಟಾಚಾರದಲ್ಲಿ ಯೋಗಾಸಕ್ತರು ಚಿಂತನ ಮಂಥನದಲ್ಲಿ ಪಾಲ್ಗೊಂಡರು. ಪೂರ್ವಾಭ್ಯಾಸವು ಪ್ರಾರ್ಥನೆ, ಚಲನ ಕ್ರಿಯೆ (ವಾರ್ಮ್–ಅಪ್), ಸಮಸ್ಥಿತಿ, ತಾಡಾಸನ, ವೃಕ್ಷಾಸನ, ಪಾದಹಸ್ತಾಸನ, ಭದ್ರಾಸನ, ವಜ್ರಾಸನ, ಮಕರಾಸನ, ಅರ್ಧ ಹಲಾಸನ, ಶವಾಸನ ಇನ್ನಿತರೆ ಆಸನಗಳನ್ನು ಒಳಗೊಂಡಿತ್ತು, ಕಪಾಲಭಾತಿ, ಪ್ರಾಣಾಯಾಮ, ಧ್ಯಾನ ಮತ್ತು ಸಂಕಲ್ಪ ಯೋಗದ ಸಾಮಾನ್ಯ ಯೋಗದೊಂದಿಗೆ ಒಂದೂವರೆ ತಾಸು ನಡೆದ ತಾಲೀಮು ಅಂತ್ಯಗೊಂಡಿತು.

ಸ್ವಯಂ ಯೋಗ ಪ್ರದರ್ಶಿಸಿದ ಶಾಸಕ ಎಸ್.ಎ.ರಾಮದಾಸ್

ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ಅವರು ಒಂದೂವರೆ ಗಂಟೆ ಕಾಲ ಸತತವಾಗಿ ಯೋಗ ಪ್ರದರ್ಶನದಲ್ಲಿ ಸ್ವಯಂ ಪಾಲ್ಗೊಂಡು ಗಮನ ಸೆಳೆದರು. ಚಲನಕ್ರಿಯೆ, ವಿವಿಧ ಆಸನಗಳು, ಪ್ರಾಣಾಯಾಮ, ಧ್ಯಾನ ಮತ್ತು ಸಂಕಲ್ಪದಲ್ಲಿ ಆಸಕ್ತಿಯಿಂದ ಭಾಗವಹಿಸಿದ್ದರು. ಕಪ್ಪು ಸಮವಸ್ತ್ರ ಧರಿಸಿದ್ದ ಅವರು, ಯೋಗ ತಾಲೀಮಿನಲ್ಲಿ ಭಾಗವಹಿಸಿದ್ದ ಎಲ್ಲ ಯೋಗಪಟುಗಳಿಗೆ ಸಮನಾಗಿ ವಿವಿಧ ಆಸನಗಳನ್ನು ಪ್ರದರ್ಶಿಸಿ ಗಮನ ಸೆಳೆದರು.

ಪ್ರಧಾನಿ ನರೇಂದ್ರ ಮೋದಿಯವರು ಮೈಸೂರಿಗೆ ಭೇಟಿ ನೀಡುತ್ತಿರುವುದು ಹೊಸ ಆಕರ್ಷಣೆ ಮತ್ತು ಉತ್ಸಾಹವನ್ನು ತಂದಿದೆ. ದೇಶದ ಪ್ರಾಚೀನ ಇತಿಹಾಸ ಮತ್ತು ಪರಂಪರೆಗೆ ಮೈಸೂರು ಅಪಾರ ಕೊಡುಗೆ ನೀಡಿದೆ ಎಂದು ಸುತ್ತೂರು ಶ್ರೀಗಳು ಹೇಳಿದರು.

ಪ್ರಧಾನಿ ಮೋದಿ ಯೋಗವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯುತ್ತಿದ್ದಾರೆ ಎಂದು ಹೇಳಿದ ಅವರು, ಭಾರತವು ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸುತ್ತಿರುವ ಈ ವರ್ಷ ಮೋದಿ ಮೈಸೂರಿಗೆ ಭೇಟಿ ನೀಡುತ್ತಿರುವುದು ಮೈಸೂರಿಗೆ ದೊಡ್ಡ ಗೌರವ ದೊರೆಯಲಿದೆ. ಅವರು ಖಂಡಿತವಾಗಿ ಮತ್ತೊಂದು ಅಂತಾರಾಷ್ಟ್ರೀಯ ದಾಖಲೆ ನಿರ್ಮಿಸಲು ಭೇಟಿ ನೀಡುತ್ತಿದ್ದಾರೆ. ಅದಕ್ಕಾಗಿ ಎಲ್ಲಾ ಸಕಲ ಸಿದ್ಧತೆಗಳು ಭರದಿಂದ ನಡೆಯುತ್ತಿದ್ದು, ಮೈಸೂರಿನಲ್ಲಿ ಹಬ್ಬದ ವಾತಾವರಣ ಮೂಡಿದೆ ಎಂದು ತಿಳಿಸಿದರು.

ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ. ರಾಮದಾಸ್ ಮಾತನಾಡಿ, ಪ್ರಧಾನಿ ಮೋದಿಯವರ ಮೈಸೂರು ಪ್ರವಾಸವು ಇಡೀ ಪ್ರದೇಶವನ್ನು ಅಭಿವೃದ್ಧಿಪಡಿಸಲು ಸಹಾಯಕವಾಗುತ್ತದೆ. ಮೈಸೂರು ಅಂತರರಾಷ್ಟ್ರೀಯ ಗಮನವನ್ನು ಸೆಳೆಯುತ್ತದೆ. ಜೂ.21 ರಂದು ಮೈಸೂರಿನ ಪ್ರತಿ ಬೀದಿ, ರಸ್ತೆಗಳು, ಉದ್ಯಾನವನಗಳು ಮತ್ತು ಮನೆಗಳಲ್ಲಿ ಯೋಗ ನಡೆಯಬೇಕು ಎಂದು ತಿಳಿಸಿದರು.

ಯೋಗ ಫೆಡರೇಶನ್ ಆಫ್ ಮೈಸೂರು ಅಧ್ಯಕ್ಷ ಮತ್ತು ಜೆಎಸ್‌ಎಸ್ ಫೌಂಡೇಶನ್ ಮುಖ್ಯಸ್ಥ ಡಿ.ಶ್ರೀಹರಿ ಮಾತನಾಡಿ, ಯೋಗ ಫೆಡರೇಶನ್ ಆಫ್ ಮೈಸೂರು ಅಡಿಯಲ್ಲಿ ವಿವಿಧ ಯೋಗ ಸಂಸ್ಥೆಗಳು ಮತ್ತು ಸಕ್ರಿಯವಾಗಿ ಭಾಗವಹಿಸಿ, ಜೂ.21 ರಂದು ಹೊಸ ದಾಖಲೆ ಮಾಡಲು ಒಟ್ಟಾಗಿ ಕೆಲಸ ಮಾಡುತ್ತಿವೆ, ಯೋಗ ಸಂಸ್ಥೆಗಳು ಪ್ರತಿದಿನ ಬೆಳಗ್ಗೆ ಇತರ ಸಂಸ್ಥೆಗಳ ತರಬೇತುದಾರರಿಗೆ ತರಬೇತಿ ನೀಡುತ್ತಿವೆ. ಹೆಚ್ಚು ಯೋಗ ಪಟುಗಳನ್ನು ಜೂ.21ರ ಯೋಗ ದಿನೋತ್ಸವದಲ್ಲಿ ಪಾಲ್ಗೊಳ್ಳುವಂತೆ ಮಾಡಲು ಶ್ರಮಿಸುತ್ತಿವೆ. ಒಟ್ಟಾರೆ ಪ್ರಧಾನಿ ಮೋದಿ ಭೇಟಿಯ ಬಳಿಕ 'ಮೈಸೂರು ಯೋಗ' ವಿಶ್ವಮಟ್ಟದಲ್ಲಿ ಬ್ರಾಂಡ್ ಆಗಿ ಹೊರ ಹೊಮ್ಮಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸುತ್ತೂರು ಮಠದ ಕಿರಿಯ ಮಠಾಧೀಶ ಶ್ರೀ ಜಯರಾಜೇಂದ್ರ ಸ್ವಾಮೀಜಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ಸಿಇಓ ಡಾ.ಸಿ.ಜಿ. ಬೆಟ್‌ಸೂರ್‌ಮಠ್, ಯೋಗ ಒಕ್ಕೂಟದ ಮೈಸೂರಿನ ಉಪಾಧ್ಯಕ್ಷ ಸತ್ಯನಾರಾಯಣ, ಖಜಾಂಚಿ ಬಿ.ಪಿ. ಮೂರ್ತಿ, ಕಾರ್ಯದರ್ಶಿ ಡಾ.ಪಿ.ಎನ್. ಗಣೇಶ್ ಕುಮಾರ್, ಸಂಘಟನಾ ಕಾರ್ಯದರ್ಶಿ ಎಸ್.ಶಶಿಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಶಿಕ್ಷಕರಿಗೆ 'ಜೀವನದಿ ಕಾವೇರಿ' ಪ್ರಶಸ್ತಿ ಪ್ರದಾನ



ಮೈಸೂರು,ಮೇ 29(ಜಿಎ)– ಶಿಕ್ಷಕರಿಗೆ ಇರುವ ಘನತೆ ಮತ್ತು ಗೌರವ ಬೇರೆ ಯಾರಿಗೂ ಇಲ್ಲ ಎಂದು ಹಿರಿಯ ಸಾಹಿತಿ ಬನ್ನೂರು ಕೆ. ರಾಜು ಅವರು ಅಭಿಪ್ರಾಯಪಟ್ಟಿದ್ದಾರೆ.

ನಗರದ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲ್ಯಾಣ ಮಂಟಪದಲ್ಲಿ ಕಾವೇರಿ ಬಳಗ ಮತ್ತು ಹಿರಣ್ಮಯಿ ಪ್ರತಿಷ್ಠಾನ ವತಿಯಿಂದ ಶಿಕ್ಷಕರಿಗಾಗಿ ಆಯೋಜಿಸಿದ್ದ 'ಜೀವನದಿ ಕಾವೇರಿ' ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಎಲ್ಲಾ ವೃತ್ತಿಗಳಿಗಿಂತ ಶಿಕ್ಷಕರ ವೃತ್ತಿಯೂ ಶ್ರೇಷ್ಠವಾದ್ದು, ಕಾವೇರಿ ನದಿ ಹೇಗೆ ಶಾಶ್ವತವಾಗಿ ಹರಿಯುತ್ತದೆಯೋ ಹಾಗೇ ಶ್ರೇಷ್ಠ ಶಿಕ್ಷಕರು ಸಹ ಶಾಶ್ವತವಾಗಿ ಉಳಿದುಕೊಳ್ಳುತ್ತಾರೆ. ಏಕೆಂದರೆ ಜೀವನದಿ ಕಾವೇರಿಯೂ ಹೇಗೆ ಎಲ್ಲರಿಗೂ ಜೀವ ನೀಡುತ್ತದೆ. ಹಾಗೇ ಶಿಕ್ಷಕರು ಪಾಠಗಳನ್ನು ಮಾಡಿ ವಿದ್ಯಾರ್ಥಿಗಳ ಜ್ಞಾನ ಹೆಚ್ಚಿಸುತ್ತಾರೆ ಮತ್ತು ಎಲ್ಲಾ ಕ್ಷೇತ್ರದಲ್ಲಿಯೂ ಅವರ ವಿದ್ಯಾರ್ಥಿಗಳು ಇರುತ್ತಾರೆ ಎಂದರು.

ಉನ್ನತ ಶಿಕ್ಷಣ ವ್ಯಾಸಂಗ ಮಾಡುವವರಿಗೆ ಯಾರು ಬೇಕಾದರೂ ಪಾಠ ಮಾಡಬಹುದು ಆದರೆ ಪ್ರಾಥಮಿಕ ಶಿಕ್ಷಣದ ವೇಳೆ ಪೋಷಕರು ಮಕ್ಕಳನ್ನು ಶಾಲೆ ದಾಖಲಾತಿ ಮಾಡುವುದಷ್ಟೇ. ಅವರಿಗೆ ಅಕ್ಷರ ಅಭ್ಯಾಸ ಮಾಡಿಸಿ ಅವರ ಜ್ಞಾನವನ್ನು ಹೆಚ್ಚಿಸುತ್ತಾರೆ. ಖಾಸಗಿ ಶಾಲೆಗಳಲ್ಲಿ ಮಕ್ಕಳಿಗೆ ಹೋಂ ವರ್ಕ್ ನೀಡುತ್ತಾರೆ. ಅದನ್ನು ಮಕ್ಕಳ ಪೋಷಕರು ರಾತ್ರಿ ಪೂರ್ತಿ ಮಾಡಿಸಿ ಮಕ್ಕಳನ್ನು ತಯಾರು ಮಾಡುತ್ತಾರೆ. ಆದರೇ ಸರ್ಕಾರಿ ಶಾಲೆಗಳಲ್ಲಿ ಅತ್ಯಂತ ಪ್ರತಿಭಾವಂತ ಶಿಕ್ಷಕರು ಇದ್ದಾರೆ. ಅವರನ್ನು ಜನರು ಬಳಸಿಕೊಳ್ಳಬೇಕಿದೆ ಅಷ್ಟೆ ಎಂದರು.

ಯಾವುದೇ ಸರ್ಕಾರ ಬಂದರೂ ಶಿಕ್ಷಕರನ್ನು ಶಿಕ್ಷಣದ ವಿಚಾರಗಳಿಗೆ ಬಿಟ್ಟು ಬೇರೆ ಯಾವುದೇ ಹೆಚ್ಚಿನ ಹೊರೆ ನೀಡಬಾರದು. ಸರ್ಕಾರಗಳ ಯಾವುದೇ ಕಾರ್ಯಕ್ರಮವಾದರೂ ಶಿಕ್ಷಕರು ಬೇಕು ಅದರಲ್ಲೂ ಚುನಾವಣಾ ಕರ್ತವ್ಯಕ್ಕೆ ನೇಮಿಸುವುದು ವಾಡಿಕೆಯಾಗಿದೆ ಅದು ನಿಲ್ಲಬೇಕು. ಶಿಕ್ಷಕರಿಗೆ ಯಾವುದೇ ಹೆಚ್ಚುವರಿ ಹೊರೆ ಇಲ್ಲದಿದ್ದರೆ ಅವರು ಇನ್ನೂ ಉತ್ತಮ ಸೇವೆ ಸಲ್ಲಿಸುತ್ತಾರೆ ಎಂದ ಅವರು ನಿವೃತ್ತಿಯಾದ ನಂತರವು ಶಿಕ್ಷಕರು ತಮ್ಮಲ್ಲಿರುವ ಜ್ಞಾನವನ್ನು ಮತ್ತಷ್ಟು ಜನರಿಗೆ ಧಾರೆ ಎರೆಯಬೇಕು ಎಂದು ತಿಳಿಸಿದರು.

ಇದೇ ವೇಳೆ ಸಾರ್ವಜನಿಕ ಶಿಕ್ಷಣ ಇಲಾಖೆ ವಿಶ್ರಾಂತ ಉಪನಿರ್ದೇಶಕಿ ಮಂಜುಳಾ ಮಿರ್ಲೆ ಮಾತನಾಡಿ, ಇತ್ತೀಚಿನ ಶಿಕ್ಷಣ ಕ್ಷೇತ್ರ ವ್ಯವಸ್ಥೆಯಲ್ಲಿ ಅಂಕ ಗಳಿಕೆ ಸ್ಪರ್ಧೆಯಲ್ಲಿ ಮಾನವೀಯ ಮೌಲ್ಯಗಳನ್ನು ಕಲಿಸಲಾಗುತ್ತಿಲ್ಲ. ಅಂಕ ಗಳಿಕೆಯೇ ಬೇರೆ ಮಾನವೀಯ ಮೌಲ್ಯವೇ ಬೇರೆ. ಈ ನಿಟ್ಟಿನಲ್ಲಿ ನಾವು ಎಂಥಾ ಶಿಕ್ಷಣ ನೀಡುತ್ತಿದ್ದೇವೆಂದು ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳಬೇಕಾಗಿದೆ ಎಂದರು.

ಹೆಚ್.ಡಿ. ಕೋಟೆ ತಾಲ್ಲೂಕಿನ ಜಿ.ಬಿ. ಸರಗೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಸಿ.ಪಿ. ಸುಧಾಮಣಿ, ಬಾಚೇಗೌಡನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಮರಿಕಾಳಯ್ಯ, ಮೈಸೂರು ತಾಲ್ಲೂಕಿನ ದೇವಯ್ಯನಹುಂಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಎಂ.ಕೆ. ಪೂವಮ್ಮ, ಹುಣಸೂರು ತಾಲೂಕಿನ ಹಳ್ಳದಕೊಪ್ಪಲು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಎಂ.ಎಂ. ಲತಾ, ಅರಸು ಕಲ್ಲಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕಿ ಎಂ.ಕೆ. ಕಾವೇರಿಯಮ್ಮ, ನಂಜನಗೂಡು ತಾಲೂಕಿನ ತಾಯೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕಿ ಎಂ. ಕಲ್ಪನಾ, ಮೈಸೂರು ನಗರದ ತೊಣಚಿಕೊಪ್ಪಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕಿ ಎ. ಸಬಿತಾ ಬಾಯಿ, ಹಳೆಕೆಸರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಸಿ. ಸೋಮಶೇಖರ್ ಅವರುಗಳಿಗೆ 'ಜೀವನದಿ ಕಾವೇರಿ ಪ್ರಶಸ್ತಿ' ಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ವಿಶ್ರಾಂತ ಉಪನಿರ್ದೇಶಕಿ ಮಂಜುಳಾ ಮಿರ್ಲೆ ಅವರು ಪ್ರದಾನ ಮಾಡಿ ಗೌರವಿಸಿದರು.

ಕಾರ್ಯಕ್ರಮದಲ್ಲಿ ಶಿಕ್ಷಕಿ ಫಾತಿಮ ಅವರು ಶಿವ ಗೀತೆಗಳನು ಹಾಡುವುದರ ಮೂಲಕ ಎಲ್ಲರ ಗಮನ ಸೆಳೆದರು. ಕಲಾವಿದೆ ಜಮುನಾರಾಣಿ ಮಿರ್ಲೆ, ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ. ಕಾವೇರಮ್ಮ, ಹಿರಣ್ಮಯಿ ಪ್ರತಿಷ್ಠಾನ ಅಧ್ಯಕ್ಷ ಎ. ಸಂಗಪ್ಪ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಬಾರ್‌ನಲ್ಲಿ ರೋಲ್‌ಕಾಲ್ ಮಾಡಲು ಹೋದ ಹೆಡ್ ಕಾನ್‌ಸ್ಟೇಬಲ್ ವಿರುದ್ಧ ಕ್ರಿಮಿನಲ್ ಕೇಸ್

ಮೈಸೂರು, ಮೇ 29–ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ರೋಲ್‌ಕಾಲ್ ಮಾಡಲು ಹೋಗಿ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ ಆರೋಪದ ಮೇರೆಗೆ ಹೆಡ್ ಕಾನ್ಸ್‌ಟೇಬಲ್‌ರೊಬ್ಬರ ವಿರುದ್ಧ ಇಲವಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೇಟಗಳ್ಳಿ ಠಾಣೆಯ ಹೆಡ್ ಕಾನ್ಸ್‌ಟೇಬಲ್ ಕೆ.ಎನ್.ಹರೀಶ ಆರೋಪಕ್ಕೆ ಗುರಿಯಾದವನಾಗಿದ್ದು, ಈತ ಮೇ 26ರಂದು ರಾತ್ರಿ 11 ಗಂಟೆ ಸುಮಾರಿನಲ್ಲಿ ಮೈಸೂರು ತಾಲೂಕು ಮಾದಗಳ್ಳಿ ಗ್ರಾಮದ ಅನುಗ್ರಹ ಬಾರ್ ಅಂಡ್ ರೆಸ್ಟೋರೆಂಟ್ ಮುಂಭಾಗ ಕಾರಿನ ಹಾರ್ನ್ ಅನ್ನು ನಿರಂತರವಾಗಿ ಹೊಡೆದು ಕ್ಯಾಶಿಯರ್ ಹೊರ ಬರುವಂತೆ ಕಿರುಚಾಡಿದ್ದಾರೆ. ನಂತರ ಬಾರ್‌ನ ಕೌಂಟರ್ ಬಳಿ ಬಂದು ಉಚಿತವಾಗಿ ಮದ್ಯ ನೀಡುವಂತೆ ಹಾಗೂ ಪ್ರತೀ ದಿನ ತನಗೆ ಮಾಮೂಲಿ ನೀಡಬೇಕೆಂದು ಒತ್ತಾಯಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಬಾರ್ ಅಂಡ್ ರೆಸ್ಟೋರೆಂಟ್‌ನ ಕಿಚನ್ ನಿರ್ವಾಹಕ ಎಸ್.ಮಹೇಶ್, ಉಚಿತವಾಗಿ ಮದ್ಯ ನೀಡಲು ಸಾಧ್ಯವಿಲ್ಲ ಹಾಗೂ ಮಾಮೂಲಿಯನ್ನೂ ಕೊಡುವುದಿಲ್ಲ ಎಂದು ಹೇಳಿದಾಗ, ಆತನ ಮೇಲೆ ಹಲ್ಲೆ ನಡೆಸಿದ್ದಲ್ಲದೇ ಪ್ರಾಣ ಬೆದರಿಕೆ ಹಾಕಿದ್ದಾರೆ. ಹೆಡ್ ಕಾನ್ಸ್‌ಟೇಬಲ್‌ನ ಈ ವರ್ತನೆಯನ್ನು ಮಹೇಶ್ ವೀಡಿಯೋ ಮಾಡಲು ಮುಂದಾದಾಗ ಹರೀಶ ಮೊಬೈಲ್ ಅನ್ನು ಕಿತ್ತು ಬಿಸಾಡಿದ್ದಲ್ಲದೇ ಕಲ್ಲಿನಿಂದ ಹಲ್ಲೆ ನಡೆಸಿದ್ದಾರೆ ಎಂದು ಮಹೇಶ್ ನೀಡಿದ ದೂರಿನನ್ವಯ ಇಲವಾಲ ಠಾಣೆ ಪೊಲೀಸರು ಭಾರತೀಯ ದಂಡ ಸಂಹಿತೆ 324, 323, 504, 506ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಅಪರಿಚಿತ ಸಾವು

ಮೈಸೂರು, ಮೇ 29–ನಗರದ ಇರ್ವಿನ್ ರಸ್ತೆಯಲ್ಲಿ ಅಪರಿಚಿತ ವ್ಯಕ್ತಿಯೋರ್ವ ಸಾವನ್ನಪ್ಪಿದ್ದು, ಲಷ್ಕರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸುಮಾರು 55–60 ವರ್ಷದ ಈ ವ್ಯಕ್ತಿ ಕಿತ್ತಳೆ ಬಣ್ಣದ ತುಂಬು ತೋಳಿನ ಶರ್ಟ್, ಕಾಫಿ ಬಣ್ಣದ ಸ್ಯಾಂಡೋ ಬನಿಯನ್, ನೀಲಿ–ಕೆಂಪು–ಬಿಳಿ ಬಣ್ಣಗಳ ಮಿಶ್ರಿತ ಚೆಕ್ಸ್ ಲುಂಗಿ ಧರಿಸಿದ್ದು, ಬಲ ಕತ್ತಿನ ಬಳಿ ಸಾಸಿವೆ ಗಾತ್ರದ ಕಪ್ಪು ಕಾರಳ್ಳು, ಹೊಟ್ಟೆಯ ಬಳಿ ಹಳೆ ಗಾಯದ ಗುರುತು ಇದೆ. ವಾರಸುದಾರರು ದೂ: 0821–2418339, 2418340, 9480802232, 2418307 ಮೂಲಕ ಸಂಪರ್ಕಿಸಲು ಕೋರಲಾಗಿದೆ.

ಗೃಹಿಣಿ ಆತ್ಮಹತ್ಯೆ

ಮೈಸೂರು, ಮೇ 28– ಗೃಹಿಣಿಯೊಬ್ಬರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿ ಕೊಂಡಿರುವ ಘಟನೆ ಮೈಸೂರಿನ ಆಲನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ನಾಡನಹಳ್ಳಿ ಸಮೀಪದ ಖಾಸಗಿ ಬಡಾವಣೆಯೊಂದರ ನಿವಾಸಿ ನಾಗರತ್ನ(29) ಶುಕ್ರವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರು 10 ವರ್ಷಗಳ ಹಿಂದೆ ಪ್ರೀತಿಸಿ ಮದುವೆಯಾಗಿದ್ದು, ದಂಪತಿಗೆ 6 ವರ್ಷದ ಪುತ್ರನಿದ್ದಾನೆ. ಈ ಸಂಬಂಧ ಆಲನಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಹೊಸ ಶಿಕ್ಷಣ ನೀತಿ ನಮ್ಮನ್ನು ಬಲಪಡಿಸುತ್ತದೆ

● ಎನ್‌ಸಿಇಆರ್‌ಟಿ ನಿರ್ದೇಶಕ ದಿನೇಶ್ ಪ್ರಸಾದ್ ಸಕ್ಲಾನಿ ಅಭಿಮತ

● ಪ್ರಾದೇಶಿಕ ಶಿಕ್ಷಣ ಸಂಸ್ಥೆಯಲ್ಲಿ ಮಹಿಳಾ ಹಾಸ್ಟೆಲ್, ಶಾಪಿಂಗ್ ಕಟ್ಟಡದ ಉದ್ಘಾಟನೆ



ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಮಹಿಳೆಯರ ಹಾಸ್ಟೆಲ್ (ಸರಸ್ವತಿ ಹಾಸ್ಟೆಲ್)ನ ನೋಟ.



ನೂತನವಾಗಿ ನಿರ್ಮಾಣಗೊಂಡಿರುವ ಮಹಿಳೆಯರ ಹಾಸ್ಟೆಲ್ ಅನ್ನು ಎನ್‌ಸಿಇಆರ್‌ಟಿ ನಿರ್ದೇಶಕ ಪ್ರೊ.ದಿನೇಶ್ ಪ್ರಸಾದ್ ಸಕ್ಲಾನಿ ಉದ್ಘಾಟಿಸಿದರು.

ಮೈಸೂರು, ಮೇ 29 (ಆರ್‌ಕೆಬಿ)– ಹೊಸ ಶಿಕ್ಷಣ ನೀತಿಯು (ಎನ್‌ಇಪಿ) ನಮ್ಮೆಲ್ಲರನ್ನು ಬಲಪಡಿಸುತ್ತದೆ. ಒಮ್ಮೆ ಎನ್‌ಇಪಿ ಸಂಪೂರ್ಣವಾಗಿ ಜಾರಿಗೆ ಬಂದರೆ ಅದು ನಮ್ಮ ಬೇರುಗಳನ್ನು ಕಂಡು ಕೊಳ್ಳಲು ಮತ್ತು ನಮ್ಮನ್ನು ಉತ್ತಮವಾಗಿ ರೂಪಿಸಲು ಸಹಾಯಕವಾಗುತ್ತದೆ ಎಂದು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ನಿರ್ದೇಶಕ ಪ್ರೊ ದಿನೇಶ್ ಪ್ರಸಾದ್ ಸಕ್ಲಾನಿ ಅಭಿಪ್ರಾಯಪಟ್ಟರು.

ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಆವರಣದಲ್ಲಿ 10.5 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಾಣವಾಗಿರುವ ಮಹಿಳೆಯರ ಹಾಸ್ಟೆಲ್ (ಸರಸ್ವತಿ ಹಾಸ್ಟೆಲ್) ಹಾಗೂ ಶಾಪಿಂಗ್ ಕಾಂಪ್ಲೆಕ್ಸ್ ಅನ್ನು ಭಾನುವಾರ ಉದ್ಘಾಟಿಸಿ ಬಳಿಕ ಅವರು ಎ.ವಿ.ಹಾಲ್‌ನಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಶಿಕ್ಷಣ ಸಂಸ್ಥೆಗಳು ಉತ್ತಮ ಮನುಷ್ಯರನ್ನು ಹುಟ್ಟು ಹಾಕಬೇಕು. ರಾಷ್ಟ್ರಕ್ಕೆ ವಿಶಿಷ್ಟ ಸೇವೆ ಸಲ್ಲಿಸಬೇಕು. ಸಂಸ್ಥೆಗಳನ್ನು ನಿರ್ಮಿಸುವುದು ರಾಷ್ಟ್ರನಿರ್ಮಾಣಕ್ಕಾಗಿಯೇ ಹೊರತು ಬೇರೇನೂ ಇಲ್ಲ. ನೈತಿಕತೆ ಮತ್ತು ಮೌಲ್ಯಗಳು ಶಿಕ್ಷಣದ ವಿಶಾಲ ಅಂಶಗಳಾಗಿವೆ ಎಂದು ಹೇಳಿದರು.

ದೇಶವು ಶಿಕ್ಷಣದ ಹೊಸ ಯುಗವನ್ನು ಪ್ರವೇಶಿಸುತ್ತಿದೆ. ಹೊಸ ಶಿಕ್ಷಣ ನೀತಿ ನಮ್ಮನ್ನು ಬಲಪಡಿಸುತ್ತದೆ. ಆ ಪ್ರಕ್ರಿಯೆಯಲ್ಲಿ ನಾವು ಕ್ರಿಯಾಶೀಲರಾಗಿದ್ದೇವೆ. ಒಮ್ಮೆ ನಾವು ಅದನ್ನು ಕಾರ್ಯಗತಗೊಳಿಸಿದರೆ ನಮ್ಮ ಬೇರುಗಳನ್ನು ನಾವು ಕಂಡುಕೊಳ್ಳಬಹುದು. ಈ ದೇಶವು ದೊಡ್ಡ ಬಿಕ್ಕಟ್ಟಿನಿಂದ ಹೇಗೆ ಬೆಳೆಯುತ್ತಿದೆ ಎಂಬುದನ್ನು ತಿಳಿಯಬಹುದು ಎಂದು ತಿಳಿಸಿದರು.

ಎನ್‌ಸಿಇಆರ್‌ಟಿ ದೊಡ್ಡ ಮರ ಇದ್ದಂತೆ. ಅದರ ಬಿಳಲುಗಳು ಶಿಕ್ಷಣ ವ್ಯವಸ್ಥೆಯಲ್ಲಿನ ಬದಲಾವಣೆಗಳು ಮತ್ತು ಎನ್‌ಇಪಿ ಅನುಷ್ಠಾನಕ್ಕೆ ಅದನ್ನು ಸಿದ್ಧಪಡಿಸುವ ವಿಷಯಗಳಿಗೆ ಆದ್ಯತೆ ನೀಡಿದೆ. ಎನ್‌ಇಪಿಗೆ ಅನುಗುಣವಾಗಿ ಹೊಸ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು (ಎನ್ಸಿಎಫ್) ಅಭಿವೃದ್ಧಿಪಡಿಸುವ ಪ್ರಕ್ರಿಯೆಯು ಪ್ರಾರಂಭವಾಗಿದೆ ಮತ್ತು ಪ್ರಸ್ತುತ 25 ಕೇಂದ್ರೀಕೃತ ಗುಂಪುಗಳನ್ನು ರಚಿಸಲಾಗಿದ್ದು, ಅದರ ಆಧಾರದ ಮೇಲೆ ಪಠ್ಯಕ್ರಮವನ್ನು ಸಿದ್ಧಪಡಿಸಲಾಗುವುದು" ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲ ಯಜ್ಞಮೂರ್ತಿ ಶ್ರೀಕಾಂತ್, ಡೀನ್ ಜಿ.ವಿ.ಗೋಪಾಲ್ ಇನ್ನಿತರರು ಉಪಸ್ಥಿತರಿದದ್ದರು.

ರೋಮಾಂಚನ ಮೂಡಿಸಿದ ಎತ್ತಿನಗಾಡಿ ಓಟದ ಸ್ಪರ್ಧೆ!

• 5ನೇ ವರ್ಷದ ರಾಜ್ಯಮಟ್ಟದ ಸ್ಪರ್ಧೆ • ನೂರಾರು ಯುವಕರು, ರೈತರು ಭಾಗಿ • ಸ್ಪರ್ಧೆಯಲ್ಲಿ ಮಿಂಚಿನಂತೆ ಓಡಿದ 75 ಜೋಡೆತ್ತುಗಳು



ತಿ.ನರಸೀಪುರ ಮೇ.29(ಎಸ್‌ಕೆ)– ಎತ್ತುಗಳ ಓಟ ನೋಡುಗರಲ್ಲಿ ರೋಮಾಂಚನ ಸೃಷ್ಟಿಸಿತು. ಮೈನವಿರೇಳಿಸುವ ಓಟದಲ್ಲಿ ಗ್ರಾಮೀಣ ಯುವ ರೈತರು ಸ್ಪರ್ಧಾ ಮನೋಭಾವ ಮೆರೆದರು. 75 ಜೋಡಿ ರಾಸುಗಳು ಸ್ಪರ್ಧಿಸಿದ್ದ ಎತ್ತಿನಗಾಡಿ ಓಟದಲ್ಲಿ ಗ್ರಾಮೀಣ ಸೊಗಡು ಅನಾವರಣಗೊಂಡಿತು.

ಪಟ್ಟಣದ ಹೊರವಲಯದ ತಾಯೂರು ರಸ್ತೆಯಲ್ಲಿ ಭಾನುವಾರ ಶ್ರೀಚೌಡೇಶ್ವರಿ ಅಮ್ಮನವರ ಯುವಕರ ಸ್ನೇಹ ಬಳಗದಿಂದ ಹಮ್ಮಿಕೊಂಡಿದ್ದ 5ನೇ ವರ್ಷದ ರಾಜ್ಯ ಮಟ್ಟದ ಜೋಡಿ ಎತ್ತಿನಗಾಡಿ ಓಟದ ಸ್ಪರ್ಧೆ ನಡೆಯಿತು. ಸುತ್ತಲಿನ ಗ್ರಾಮಗಳ ರೈತರು, ಯುವಕರು ಸೇರಿದಂತೆ ನೂರಾರು ಮಂದಿ ಪಾಲ್ಗೊಂಡಿದ್ದ ಸ್ಪರ್ಧೆಯು ಮಕ್ಕಳು, ಮಹಿಳೆಯರು ಸೇರಿದಂತೆ ನೆರೆದಿದ್ದ ಜನರನ್ನು ರಂಜಿಸಿತು.

ಹಳ್ಳಿಗಾಡಿನ ಸೊಗಡು ಹೆಚ್ಚಿಸುವ ಎತ್ತಿನ ಓಟ: ವರ್ಷದಲ್ಲೊಮ್ಮೆ ರೈತರನ್ನು ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಉತ್ತೇಜನ ನೀಡುವ ಜೋಡಿ ಎತ್ತಿನಗಾಡಿ ಓಟದ ಸ್ಪರ್ಧೆಗಳು ಹಳ್ಳಿಗಾಡಿನ ಸೊಗಡನ್ನು ಹೆಚ್ಚಿಸುತ್ತವೆ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ಹೇಳಿದರು.

ಸ್ಪರ್ಧೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಎತ್ತಿನಗಾಡಿ ಓಟದ ಸ್ಪರ್ಧೆಯಂತಹ ಕ್ರೀಡಾಕೂಟಗಳು ಗ್ರಾಮೀಣ ಸೊಗಡನ್ನು ಜೀವಂತವಾಗಿಡುತ್ತಿವೆ. ರೈತರನ್ನೂ ಕ್ರೀಡಾಕೂಟಗಳತ್ತ ಆಕರ್ಷಿಸುತ್ತವೆ ಎಂದರು.

> ಹಿಂದಿನ ವರ್ಷದ ಎತ್ತಿನಗಾಡಿ ಓಟದ ಸ್ಪರ್ಧೆಯಲ್ಲಿ ನಡೆದ ಅಹಿತಕರ ಘಟನೆಗೆ ಕೆಲವರು ಕ್ರೀಡಾಕೂಟದ ಕಥೆ ಮುಗಿಯಿತು ಎನ್ನುತ್ತಿದ್ದರು. ನನ್ನ ಉಸಿರು ನಿಂತರೂ ಎತ್ತಿನಗಾಡಿ ಓಟದ ಸ್ಪರ್ಧೆ ನಿಲ್ಲೋದಿಲ್ಲ. ಈ ಕ್ರೀಡಾಕೂಟದ ಮೂಲಕ ತಿರುಮಕೂಡಲು ನರಸೀಪುರದ ಹೆಸರು ಎಲ್ಲೆಡೆ ಗುರುತಿಸಿಕೊಳ್ಳುವಂತೆ ಮಾಡಿರುವುದು ಹೆಮ್ಮೆಯಿದೆ.
>
> – ಆರ್.ಮಣಿಕಂಠರಾಜ್ ಗೌಡ, ಸ್ಪರ್ಧೆಯ ಆಯೋಜಕ

ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, ಕ್ರೀಡಾಕೂಟಗಳು ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಉತ್ಸಾಹ ಹಾಗೂ ಚೈತನ್ಯ ತುಂಬಲಿಕ್ಕೆ ಸಹಕಾರಿಯಾಗಿವೆ. ಸರ್ಕಾರದ ಯಾವುದೇ ನೆರವನ್ನು ಪಡೆಯದೇ ಸಂಘ–ಸಂಸ್ಥೆಯನ್ನು ಕಟ್ಟಿಕೊಂಡು ಕ್ರೀಡಾಕೂಟಗಳನ್ನು ಆಯೋಜಿಸುತ್ತಿರುವ ಆರ್.ಮಣಿಕಂಠರಾಜ್‌ಗೌಡ ಹಾಗೂ ಸ್ನೇಹಿತರ ತಂಡದ ಕಾರ್ಯ ಶ್ಲಾಘನೀಯ. ರೈತರೂ ಇಂತಹ ಕ್ರೀಡಾಕೂಟ ಯಶಸ್ವಿಗೊಳಿಸಬೇಕು ಎಂದರು.

ಸ್ಪರ್ಧೆ ಉದ್ಘಾಟಿಸಿದ ಜಿಪಂ ಮಾಜಿ ಸದಸ್ಯ ಮಂಜುನಾಥನ್ ಮಾತನಾಡಿ, ಆಧುನಿಕತೆಗೆ ಮಾರು ಹೋಗುತ್ತಲೇ ಜಾಗತೀಕರಣದ ಭರಾಟೆಯಲ್ಲಿ ನೆಲದ ಮೂಲ ಕ್ರೀಡಾಕೂಟಗಳನ್ನು ಮರೆತು ಬಿಡುತ್ತಿದ್ದೇವೆ. ಇಂತಹ ಸನ್ನಿವೇಶದಲ್ಲಿ ಎತ್ತಿನಗಾಡಿ ಓಟದ ಸ್ಪರ್ಧೆಗಳು ಗ್ರಾಮೀಣ ಕ್ರೀಡೆಗಳ ಉಳಿವಿನ ಪ್ರತೀಕವಾಗಿವೆ ಎಂದು ತಿಳಿಸಿದರು. ಹಿರಿಯ ಮುಖಂಡ, ಖಾಸಗಿ ಬಸ್ ಏಜೆಂಟ್ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು ಸ್ಪರ್ಧೆಗಳ ಅಂಕಣದ ಟೇಪ್ ಕತ್ತರಿಸುವ ಮೂಲಕ ಪಂದ್ಯಾವಳಿಗೆ ವಿಧ್ಯುಕ್ತವಾಗಿ ಚಾಲನೆ ನೀಡಿದರು. ಸಾರ್ವಜನಿಕ ಆಸ್ಪತ್ರೆಯ ಶಸ್ತ್ರಚಿಕಿತ್ಸಾ ತಜ್ಞ ಡಾ.ರೇವಣ್ಣ ಮಾತನಾಡಿದರು. ವಾಟಾಳು ಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು.

ಈ ವೇಳೆ ಕೊಡಗಹಳ್ಳಿ ಗ್ರಾಪಂ ಅಧ್ಯಕ್ಷ ಕೆ.ಎಸ್.ಧನಂಜಯಗೌಡ, ಪುರಸಭೆ ಸದಸ್ಯ ವಿ.ಮೋಹನ್, ಶ್ರೀಚೌಡೇಶ್ವರಿ ಅಮ್ಮನವರ ಯುವಕರ ಸ್ನೇಹ ಬಳಗದ ಅಧ್ಯಕ್ಷ ಆರ್.ಮಣಿಕಂಠರಾಜ್‌ಗೌಡ, ಹಳ್ಳಿಕಾರ್ ಸಂಘದ ಅಧ್ಯಕ್ಷ ವರ್ತೂರ್ ಸಂತೋಷ, ಬಿಜೆಪಿ ಎಸ್‌ಸಿ ಮೋರ್ಚಾದ ಜಿಲ್ಲಾ ಕಾರ್ಯದರ್ಶಿ ಸಾಮ್ರಾಟ್ ಸುಂದರೇಶನ್, ರಾಜ್ಯ ಕಾರ್ಯಕಾರಿ ಸದಸ್ಯ ಕರೋಹಟ್ಟಿ ಮಹದೇವಯ್ಯ, ಭಾರತೀಯ ಪರಿವರ್ತನಾ ಸಂಘದ ಜಿಲ್ಲಾಧ್ಯಕ್ಷ ಕೆ.ಎನ್.ಪ್ರಭುಸ್ವಾಮಿ, ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮಲ್ಲಣ್ಣ, ನಿರ್ದೇಶಕ ಅಂಗಡಿ ಎನ್.ಶೇಖರ್, ಪೂಜಿತ್ ಮೆಡಿಕಲ್‌ನ ಪಿ.ಕುಮಾರ್, ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಕಾರ್ಯದರ್ಶಿ ಕಿರಗಸೂರು ಶಂಕರ್, ಗ್ರಾಪಂ ಸದಸ್ಯ ಮನ್ನೇಹುಂಡಿ ನಾಗರಾಜು, ಏಳುಮಲೆ ಮಂಜ, ಉಪನ್ಯಾಸಕ ಕುಮಾರಸ್ವಾಮಿ, ದಸಂಸ ಒಕ್ಕೂಟದ ಸಂಚಾಲಕ ಆಲಗೂಡು ಡಾ.ಚಂದ್ರಶೇಖರ್, ಮುಖಂಡರಾದ ಮಂಜುಕುಮಾರ್, ಚಂದ್ರು ಸುರೇಶ್, ನಿಲಸೋಗೆ ದಿನೇಶ್, ನವಿಲೂರು ಶಶಿ ಸೇರಿದಂತೆ ಇನ್ನಿತರರು ಹಾಜರಿದ್ದರು.

ಗ್ರಾಮೀಣಾಭಿವೃದ್ಧಿಗೆ ಗ್ರಾಪಂ ಸದಸ್ಯರ ಪಾತ್ರ ಮುಖ್ಯ



ಹೆಚ್.ಡಿ.ಕೋಟೆ, ಮೇ 29(ಮಂಜು)– ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮ ಪಂಚಾಯಿತಿ ಸದಸ್ಯರ ಪಾತ್ರ ಮಹತ್ತರವಾದದ್ದು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಳಹಂತದಲ್ಲಿ ಚುನಾಯಿತರಾಗಿ ಕಾರ್ಯನಿರ್ವಹಿಸುತ್ತಿರುವ ಗ್ರಾಪಂ ಸದಸ್ಯರು ರಾಷ್ಟ್ರದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ ಎಂದು ಗ್ರಾಮ ಪಂಚಾಯತಿ ಸದಸ್ಯರ ಮಹಾ ಒಕ್ಕೂಟದ ರಾಜ್ಯ ಅಧ್ಯಕ್ಷ ಕಾಡಶೆಟ್ಟಿಹಳ್ಳಿ ಸತೀಶ್ ಅಭಿಪ್ರಾಯಪಟ್ಟರು.

ತಾಲೂಕಿನ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ನಡೆದ ಜಿಲ್ಲಾ ಮಟ್ಟದ ಗ್ರಾಮ ಪಂಚಾಯತಿ ಸದಸ್ಯರ ಸಂಘಟನಾ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಆಡಳಿತ ನಡೆಸುವ ಸಂದರ್ಭದಲ್ಲಿ ಎದುರಿಸುತ್ತಿರುವ ಎಲ್ಲಾ ರೀತಿಯ ಸಮಸ್ಯೆಗಳಿಗೆ ಸಂಘಟಿತ ಪ್ರಯತ್ನದ ಮುಖಾಂತರ ಪರಿಹಾರ ಕಂಡುಕೊಳ್ಳಬೇಕು ಎಂದು ತಿಳಿಸಿದರು.

ಯಾವುದೇ ಪಕ್ಷದ, ಜಾತಿ, ಧರ್ಮ, ಭಾಷೆಯ ಹಂಗಿಲ್ಲದೆ ಸ್ವಸಾಮರ್ಥ್ಯದಿಂದ ಗ್ರಾಮೀಣಾಭಿವೃದ್ಧಿಯನ್ನು ಮಾಡುವ ನಿಟ್ಟಿನಲ್ಲಿ ಸ್ವಾಭಿಮಾನಿಗಳಾಗಿ ಆಯ್ಕೆಯಾಗಿ ಬಂದಿರುವ ಗ್ರಾಪಂ ಸದಸ್ಯರು ತಮ್ಮ ಅರಿವಿನ ಮತ್ತು ಕೌಶಲ್ಯದ ಕೊರತೆಯಿಂದಾಗ ಹಲವು ಸಮಸ್ಯೆ ಎದುರಿಸುತ್ತಿದ್ದಾರೆ ಎಂದರು.

ಗ್ರಾಪಂ ಸದಸ್ಯರನ್ನು ರಾಜ್ಯಾದ್ಯಂತ ಸಂಘಟಿಸಿ ಹಕ್ಕುಗಳಿಗಾಗಿ ಹೋರಾಟ ರೂಪಿಸಲಿದ್ದು, ಜೊತೆಗೆ ಪಂಚಾಯಿತಿ ಸದಸ್ಯರ ಜ್ಞಾನವನ್ನು ಹೆಚ್ಚಿಸುವ ಮತ್ತು ಕೌಶಲ್ಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ನಂತರ ಮೈಸೂರು ಜಿಲ್ಲೆಯಲ್ಲಿ ಗ್ರಾಪಂ ಸದಸ್ಯರ ಸಂಘಟನೆ ಸಮರ್ಥವಾಗಿ ಕಟ್ಟುವ ನಿಟ್ಟಿನಲ್ಲಿ ನೂತನ ಜಿಲ್ಲಾ ಸಮಿತಿಯನ್ನು ಅಸ್ತಿತ್ವಕ್ಕೆ ತರಲಾಯಿತು. ಜಿಲ್ಲಾ ಘಟಕದ ಅಧ್ಯಕ್ಷ ನಾಗರಾಜು, ಪ್ರಧಾನ ಕಾರ್ಯದರ್ಶಿ ಎಡತೊರೆ ಮಹೇಶ್, ಖಜಾಂಚಿ ಬೇಬಿ ಮಹೇಶ್, ಉಪಾಧ್ಯಕ್ಷರು ಹಾಗೂ ಸಂಘಟನಾ ಕಾರ್ಯದರ್ಶಿಗಳು ಸೇರಿದಂತೆ 25 ಜನರ ಕಾರ್ಯಕಾರಿ ಸಮಿತಿ ಆಯ್ಕೆ ಮಾಡಲಾಯಿತು.

ರಾಜ್ಯ ಉಪಾಧ್ಯಕ್ಷೆ ಬೃಂದಾಕೃಷ್ಣೆಗೌಡ, ರಾಜ್ಯ ಸಂಘಟನಾ ಕಾರ್ಯದರ್ಶಿ ನಿಶಾಂತ, ಜಿಲ್ಲಾ ಸಹಸಂಚಾಲಕ ಛಾಯಾ, ನಾಗರಾಜ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲೆಯ 8 ತಾಲೂಕುಗಳಿಂದ ನೂರಕ್ಕೂ ಹೆಚ್ಚು ಗ್ರಾಪಂ ಸದಸ್ಯರು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸಂಪನ್ಮೂಲ ವ್ಯಕ್ತಿ ರಾಜಾ ಹುಣಸೂರು ಹಾಜರಿದ್ದರು.

ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರ ಪರ ಪ್ರಚಾರ



ನಂಜನಗೂಡು, ಮೇ 29(ಸುದರ್ಶನ್)– ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಮಧು ಜಿ.ಮಾದೇಗೌಡರ ಪರವಾಗಿ ತಾಲೂಕಿನ ಹೊರಳವಾಡಿ, ದೇವರಸನಹಳ್ಳಿ, ಕಳಲೆ, ಹೆಮ್ಮರಗಾಲ ಗ್ರಾಪಂ ವ್ಯಾಪ್ತಿಯಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮತಯಾಚಿಸಿದರು.

ಬಳಿಕ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಶೈಕ್ಷಣಿಕ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಅಪಾರವಾಗಿದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧಿಕಾರ ಅವಧಿಯಲ್ಲಿ ರಾಜ್ಯ ಸರ್ಕಾರಿ ನೌಕರರ ವೇತನ ತಾರತಮ್ಯ ನಿವಾರಿಸಲು 6ನೇ ವೇತನ ಆಯೋಗ ಜಾರಿಗೊಳಿಸಿದ್ದಲ್ಲದೆ, ನೂರಾರು ಪಿಯು ಕಾಲೇಜು, ಪದವಿ ಕಾಲೇಜುಗಳನ್ನು ಮಂಜೂರು ಮಾಡಿದ್ದಾರೆ. ಪಕ್ಷದ ಅಭ್ಯರ್ಥಿ ಮಧು ಜಿ.ಮಾದೇಗೌಡ ಅವರು ಕೂಡ ಅನೇಕ ಶಿಕ್ಷಣ ಸಂಸ್ಥೆಗಳನ್ನು ತೆರೆದು ಲಕ್ಷಾಂತರ ಜನರಿಗೆ ಶಿಕ್ಷಣ ಜೊತೆಗೆ ಪದವೀಧರರಿಗೆ ಉದ್ಯೋಗವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಅವರ ತಂದೆ ಕೂಡ ಕನ್ನಡ ನಾಡು ನೆಲ, ಜಲಕ್ಕಾಗಿ ಹೋರಾಟ ನಡೆಸಿದ್ದಾರೆ. ಅಂತಹ ಕೌಟುಂಬಿಕ ಹಿನ್ನೆಲೆಯುಳ್ಳ ಸರಳ, ಸಜ್ಜನಿಕೆಗೆ ಹೆಸರಾದ ಮಧು ಜಿ.ಮಾದೇಗೌಡ ಪರವಾಗಿ ಹೆಚ್ಚಿನ ಮತ ಚಲಾಯಿಸುವ ಮೂಲಕ ಅವರನ್ನು ಜಯಶೀಲರನ್ನಾಗಿ ಮಾಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ರಾಜ್ಯ ಎಸ್‌ಟಿ ಕಾರ್ಯದರ್ಶಿ ಹೆಡತಲೆ ದೊರೆಸ್ವಾಮಿನಾಯಕ, ಎಸ್‌ಸಿ ಬ್ಲಾಕ್ ಅಧ್ಯಕ್ಷ ಉಪ್ಪನಹಳ್ಳಿ ಶಿವಣ್ಣ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ, ಜಯಮಾಲಾ ಬೀರೇಗೌಡ, ಮುಖಂಡರಾದ ವಕೀಲ ನಾಗರಾಜಯ್ಯ, ಕಳಲೆ ರಾಜೇಶ್, ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಶಿವಪ್ಪ ದೇವರು ಮುಂತಾದವರಿದ್ದರು.



ರೆಬೆಲ್‌ಸ್ಟಾರ್ ಅಂಬರೀಶ್ ಅವರ 70ನೇ ಜನ್ಮದಿನದ ಅಂಗವಾಗಿ ಬನ್ನೂರು ಸಮೀಪದ ಯಾಚೇನಹಳ್ಳಿ ಗ್ರಾಮದಲ್ಲಿರುವ ತಾಯಿ ಮಡಿಲು ವೃದ್ಧಾಶ್ರಮದಲ್ಲಿ ಭಾನುವಾರ ಡಾ.ಅಂಬರೀಶ್ ಅಭಿಮಾನಿ ಸಂಘದಿಂದ ವೃದ್ಧರಿಗೆ ವಸ್ತ್ರ ವಿತರಿಸಿ, ಊಟದ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ನಾದಾನಂದ ಸ್ವಾಮೀಜಿ, ಸಂಘದ ಅಧ್ಯಕ್ಷ ನಂದೀಶ್, ರವಿ, ಬಸವರಾಜು, ಸಂತೋಷ್, ನಾಗೇಂದ್ರ, ನಂದೀಶ್, ಪ್ರಸನ್ನ, ಜಗದೀಶ್, ರಂಗಸ್ವಾಮಿ, ವೆಂಕಟೇಶ್, ನಂದೀಶ್, ಸಂತೋಷ್‌ಗೌಡ, ಚನ್ನಕೇಶವ, ಪ್ರಸನ್ನ, ಟಿ.ಪ್ರಸನ್ನ, ಮಹದೇವು, ಲಿಂಗರಾಜು, ರಾಜು, ಶಿವಕುಮಾರ್, ಮಹೇಶ್, ಎಸ್.ನಂದಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಆರ್. ಜೀವಿತಾಗೆ 610 ಅಂಕ



ಬೆಟ್ಟದಪುರ, ಮೇ 29– ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಬೆಟ್ಟದಪುರದ ಡಿಟಿಎಂಎನ್ ಶಾಲೆಯ ವಿದ್ಯಾರ್ಥಿನಿ ಜೀವಿತಾ ಆರ್ 610 ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಪ್ರಧಾನಿಗೆ ಗೆಲುವು ಸಮರ್ಪಿಸಲು ಬಿಜೆಪಿ ಅಭ್ಯರ್ಥಿ ಬೆಂಬಲಿಸಿ

ಸುದ್ದಿಗೋಷ್ಠಿಯಲ್ಲಿ ರಘು ಆರ್.ಕೌಟಿಲ್ಯ ಮನವಿ



ತಿ.ನರಸೀಪುರ, ಮೇ 29(ಎಸ್‌ಕೆ)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಗೆಲುವನ್ನು ಪ್ರಧಾನಿ ಮೋದಿ ಅವರಿಗೆ ಸಮರ್ಪಿಸಲು ಮತದಾರರು ಪಕ್ಷದ ಅಭ್ಯರ್ಥಿಯನ್ನು ಬೆಂಬಲಿಸಬೇಕು ಎಂದು ಬಿಜೆಪಿ ಹಿರಿಯ ಮುಖಂಡ ಹಾಗೂ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ರಘು ಆರ್.ಕೌಟಿಲ್ಯ ಮನವಿ ಮಾಡಿದರು.

ಪಟ್ಟಣದ ಗೋಪಾಲಪುರದಲ್ಲಿರುವ ಪುರಸಭಾ ಸದಸ್ಯ ಅರ್ಜುನ್‌ರಮೇಶ್ ಅವರ ಜನಸಂಪರ್ಕ ಕಚೇರಿಯಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂ.21ರಂದು ವಿಶ್ವ ಯೋಗ ದಿನದ ಅಂಗವಾಗಿ ಮೈಸೂರಿಗೆ ಭೇಟಿ ನೀಡುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮೈ.ವಿ.ರವಿಶಂಕರ್ ಅವರ ಗೆಲುವನ್ನು ಸಮರ್ಪಿಸುವ ನಿಟ್ಟಿನಲ್ಲಿ ಮತದಾರರು ಪಕ್ಷವನ್ನು ಬೆಂಬಲಿಸಬೇಕು ಎಂದು ತಿಳಿಸಿದರು.

ಮೈ.ವಿ.ರವಿಶಂಕರ್ ಅವರು ಪದವೀಧರ ಕ್ಷೇತ್ರದ ಆಳ–ಅಗಲ ತಿಳಿದವರು. ಅವರಿಗೆ ಪದವೀಧರರ ಎಲ್ಲಾ ಸಮಸ್ಯೆಗಳ ಅರಿವಿದೆ. ಹಾಗಾಗಿ, ಅವರು ಸಮಸ್ಯೆಯನ್ನು ಅರಿತು ನಿವಾರಣೆಗೆ ಶ್ರಮಿಸುತ್ತಾರೆ. ವಿದ್ಯಾ ವಂತರು, ಸರಳ, ಸಜ್ಜನಿಕೆಯ ವ್ಯಕ್ತಿತ್ವ ಉಳ್ಳವರಾದ ಅವರು ಕಳೆದ ಬಾರಿ ಕಡಿಮೆ ಮತಗಳ ಅಂತರದಲ್ಲಿ ಸೋಲು ಅನುಭವಿಸಿದ್ದಾರೆ. ಈ ಬಾರಿ ಅವರನ್ನು ಗೆಲ್ಲಿಸುವ ಮೂಲಕ ಪಕ್ಷವನ್ನು ಮುಂಬರುವ ಸ್ಥಳೀಯ ಹಾಗೂ ಸಾರ್ವತ್ರಿಕ ಚುನಾವಣೆಗಳಿಗೆ ಶಕ್ತಿ ತುಂಬುವ ಕೆಲಸವನ್ನು ಮಾಡಬೇಕು ಎಂದು ಮನವಿ ಮಾಡಿದರು.

ಸೋಲಿನ ನೋವು ಮರೆಸಲು ಬೆಂಬಲಿಸಿ: ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರನ್ನು ಆಯ್ಕೆ ಮಾಡುವ ಮೂಲಕ ಕಳೆದ ವಿಧಾನಪರಿಷತ್ ಚುನಾವಣೆಯಲ್ಲಿ ನನಗಾದ ಸೋಲಿನ ನೋವನ್ನು ಮರೆಸಬೇಕು ಎಂದು ರಘು ಆರ್.ಕೌಟಿಲ್ಯ ಮನವಿ ಮಾಡಿದರು.

ಕಳೆದ ವಿಧಾನಪರಿಷತ್ ಚುನಾವಣೆಯಲ್ಲಿ ಅಲ್ಪಮತಗಳ ಅಂತರದಿಂದ ನನಗೆ ಸೋಲಾಯಿತಾದರೂ ಈಗಲೂ ನಾನು ಗ್ರಾಪಂ ಸದಸ್ಯರ ಜೊತೆ ನಿರಂತರ ಸಂಪರ್ಕದಲ್ಲಿದ್ದೇನೆ. ಅಲ್ಲಿಯೂ ಕೂಡ ಅನೇಕ ಪದವೀಧರಿದ್ದಾರೆ. ಪದವೀಧರ ಕ್ಷೇತ್ರ ಪ್ರಬುದ್ಧತೆಯ ಕ್ಷೇತ್ರ. ವಿದ್ಯಾವಂತರು, ಪ್ರಜ್ಞಾವಂತರು, ಉದ್ಯಮಿಗಳು ಸೇರಿ ಅನೇಕ ವರ್ಗದ ಪ್ರಬುದ್ಧ ಮತದಾರರಿದ್ದಾರೆ. ಈ ಕ್ಷೇತ್ರ ಚಿಂತಕರ ಚಾವಡಿ ಎಂದೇ ಪ್ರಸಿದ್ಧಿಯಾಗಿದ್ದು, ಸಮರ್ಥರಾದ ಮೈ.ವಿ.ರವಿಶಂಕರ್ ಅವರನ್ನು ಆಯ್ಕೆ ಮಾಡಬೇಕು ಎಂದು ತಿಳಿಸಿದರು.

ಪುರಸಭಾ ಸದಸ್ಯ ಅರ್ಜುನ್ ರಮೇಶ್ ಮಾತನಾಡಿ, ಪ್ರಬುದ್ಧ ಮತದಾರರ ಕ್ಷೇತ್ರವಾದ ಪದವೀಧರರ ಕ್ಷೇತ್ರದಲ್ಲಿ ನಾನು ವಿದ್ಯಾರ್ಥಿದೆಸೆಯಿಂದಲೂ ನೋಡಿರುವ ಸರಳ ವ್ಯಕ್ತಿಯಾಗಿರುವ ಮೈ.ವಿ.ರವಿಶಂಕರ್ ಅವರು ಯಾವುದೇ ಅಧಿಕಾರದ ಜವಾಬ್ದಾರಿ ನೀಡಿದರೂ ಬದಲಾವಣೆಯಾಗದಂತಹ ವ್ಯಕ್ತಿತ್ವವುಳ್ಳವರು. ಸಮರ್ಥ ನಾಯಕತ್ವವಿರುವ ಅವರನ್ನು ಮತದಾರರು ಗೆಲ್ಲಿಸುವ ಮೂಲಕ ಪಕ್ಷಕ್ಕೆ ಉತ್ತಮ ಸಂಘಟಕರನ್ನು ಆಯ್ಕೆ ಮಾಡಬೇಕಿದೆ ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಬನ್ನೂರು ಪುರಸಭಾ ಸದಸ್ಯ ಶಿವಣ್ಣ, ಬೈರಾಪುರ ಜಿ.ಗುಂಡಾಶೆಟ್ಟಿ ಹಾಜರಿದ್ದರು.

ಮೈ.ವಿ.ರವಿಶಂಕರ್ ಗೆಲುವು ಖಚಿತ



ಮಲ್ಕುಂಡಿ, ಮೇ 29(ಚನ್ನಪ್ಪ)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರ ಗೆಲುವು ಖಚಿತವಾಗಿದೆ ಎಂದು ಕಾಂಪೋಸ್ಟ್ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಶೈಕ್ಷಣಿಕ ಪ್ರಗತಿಯ ಬಗ್ಗೆ ಮತ್ತು ಮತದಾರರ ಕಷ್ಟ–ಸುಖಗಳಿಗೆ ಸ್ಪಂದಿಸುವಂತಹ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರನ್ನು ಮತದಾರರು ಗೆಲ್ಲಿಸಬೇಕು ಎಂದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನಪರ ಯೋಜನೆಗಳೇ ಪಕ್ಷದ ಅಭ್ಯರ್ಥಿ ಗೆಲುವಿಗೆ ಸಹಕಾರಿಯಾಗಿದೆ. ಪ್ರತಿಯೊಬ್ಬ ಕಾರ್ಯಕರ್ತರು ಸರ್ಕಾರದ ಜನಪರ ಯೋಜನೆಗಳನ್ನು ಮನೆ ಮನೆಗೂ ತಲುಪಿಸುವ ಕೆಲಸ ಮಾಡಬೇಕಾಗಿದೆ. ಮೈ.ವಿ.ರವಿಶಂಕರ್ ಅವರು ಸದನದಲ್ಲಿ ಶಿಕ್ಷಕರ ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸುತ್ತಾರೆ ಎಂದರು.

ಪುಟ್ಟಸ್ವಾಮಚಾರ್ ನಿಧನ



ಹಿರೀಕ್ಯಾತನಹಳ್ಳಿ, ಮೇ 29– ಗಾವಡಗೆರೆ ಹೋಬಳಿಯ ಹಿರೀಕ್ಯಾತನಹಳ್ಳಿ ಗ್ರಾಮದ ನಿವಾಸಿ ಪುಟ್ಟಸ್ವಾಮಚಾರ್(70) ಶನಿವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಪುತ್ರರಾದ ಸಾರಿಗೆ ಇಲಾಖೆಯ ನೌಕರರ ರವಿ, ಆರೋಗ್ಯ ಇಲಾಖೆಯ ವಾಹನ ಚಾಲಕ ಮಧು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಗ್ರಾಮದ ಜಮೀನಿನಲ್ಲಿ ನಡೆಯಿತು.

ಎಂ.ಎನ್.ಕುಮಾರ್



ಮೂಗೂರು, ಮೇ 29– ಗ್ರಾಮದ ಕನಕ ಬಡಾವಣೆಯ ನಿವಾಸಿ ಎಂ.ಎನ್.ಕುಮಾರ್ (48) ಶನಿವಾರ ರಾತ್ರಿ ನಿಧನರಾದರು. ಮೃತರು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ನೆರವೇರಿತು.

ಪಿಎಸ್‌ಐ ಶ್ರವಣ್‌ದಾಸ್‌ರೆಡ್ಡಿ ನೇತೃತ್ವದಲ್ಲಿ ಎಸ್‌ಸಿ, ಎಸ್‌ಟಿ ಕುಂದುಕೊರತೆ ಸಭೆ

ಪ್ರತಿಧ್ವನಿಸಿದ ಫುಟ್‌ಪಾತ್ ಒತ್ತುವರಿ, ಅಕ್ರಮ ಮದ್ಯ ಮಾರಾಟ



ಸರಗೂರು, ಮೇ 29(ನಾಗೇಶ್)– ಪಟ್ಟಣದ ಪೊಲೀಸ್ ಠಾಣೆಯಲ್ಲಿ ಭಾನುವಾರ ಪಿಎಸ್‌ಐ ಶ್ರವಣ್‌ದಾಸ್‌ರೆಡ್ಡಿ ನೇತೃತ್ವದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಕುಂದುಕೊರತೆ ಸಭೆ ನಡೆಯಿತು.

ಸಭೆಯಲ್ಲಿ ಪಪಂ ಸದಸ್ಯ ಶ್ರೀನಿವಾಸ್ ಮಾತನಾಡಿ, ರಸ್ತೆ ಬದಿಯಲ್ಲಿ ಫಾಸ್ಟ್‌ಫುಡ್‌ಗಳು ಹೆಚ್ಚಾಗಿದ್ದು, ಅಲ್ಲಿಯೇ ಕೆಲವರು ಮದ್ಯಪಾನ ಮಾಡುತ್ತಾರೆ. ಸ್ವಚ್ಛತೆಯಂತು ಗೌಣವಾಗಿದೆ. ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿದೆ. ಹಾಗಾಗಿ, ರಸ್ತೆ ಬದಿಯ ಫುಟ್‌ಪಾತ್‌ನಲ್ಲಿ ಅನಧಿಕೃತವಾಗಿ ತಲೆ ಎತ್ತಿರುವ ಅಂಗಡಿಗಳು ಹಾಗೂ ಒತ್ತುವರಿ ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ಮನವಿ ಮಾಡಿದರು. ಶಾಲಾ– ಕಾಲೇಜು ಪ್ರಾರಂಭವಾಗಿದ್ದು, ಬಿಡುವ ವೇಳೆಯಲ್ಲಿ ಪೊಲೀಸ್ ಸಿಬ್ಬಂದಿ ಗಸ್ತು ನಡೆಸಬೇಕು. ಪಟ್ಟಣದ ಬಾರ್‌ಗಳ ಮುಂಭಾಗ ಕೆಲವರು ಅಡ್ಡಾದಿಡ್ಡಿಯಾಗಿ ತಮ್ಮ ದ್ವಿಚಕ್ರ, ನಾಲ್ಕು ಚಕ್ರದ ವಾಹನ ನಿಲ್ಲಿಸುತ್ತಿದ್ದು, ಪಾದಚಾರಿಗಳು, ವಾಹನ ಸವಾರರಿಗೆ ತುಂಬಾ ತೊಂದರೆಯಾಗುತ್ತಿದೆ. ಅಡ್ಡಾದಿಡ್ಡಿ ನಿಲ್ಲಿಸುವ ವಾಹನಗಳ ಮಾಲೀಕರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಪಪಂ ಮಾಜಿ ಅಧ್ಯಕ್ಷ ಶಿವಣ್ಣ, ಮುಖಂಡ ಪುರದಕಟ್ಟೆ ಬಸವರಾಜು ಮಾತನಾಡಿ, ತಾಲೂಕಿನ ಪೊಲೀಸ್ ಠಾಣಾ ವ್ಯಾಪ್ತಿಯ ಗ್ರಾಮಾಂತರ ಪ್ರದೇಶಗಳಲ್ಲಿ ಅಕ್ರಮ ಮದ್ಯ ಮಾರಾಟ ಮಿತಿಮೀರಿ ನಡೆಯುತ್ತಿದ್ದು, ಇದಕ್ಕೆ ಕೂಡಲೇ ಕಡಿವಾಣ ಹಾಕಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪಿಎಸ್‌ಐ ಶ್ರವಣ್ ದಾಸ್ ರೆಡ್ಡಿ, ಬಾರ್‌ಗಳ ಮುಂದೆ ಅಡ್ಡಾದಿಡ್ಡಿಯಾಗಿ ವಾಹನಗಳನ್ನು ನಿಲ್ಲಿಸುವುದು ಅಪರಾಧ ಅಂಥ ವಾಹನಗಳ ಮೇಲೆ ಮೊಕದ್ದಮೆ ದಾಖಲಿಸಲಾಗುವುದು. ಮದ್ಯವ್ಯಸನಿಗಳು ಕುಡಿದು ಅಡ್ಡಾದಿಡ್ಡಿಯಾಗಿ ಓಡಾಡಿದರೆ ಅಂಥವರ ಮೇಲೆ ಕೇಸು ದಾಖಲು ಮಾಡಲಾಗುವುದು. ಅಕ್ರಮ ಮದ್ಯ ಮಾರಾಟ ಮಾಡುವವರ ಮೇಲೆ ಕೇಸು ದಾಖಲಿಸಲಾಗುವುದು. ಕಾನೂನಿನಡಿ ಕೆಲಸ ಮಾಡಲು ಎಲ್ಲರ ಸಹಕಾರ ಅಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಎಲ್ಲರೂ ಕಾರ್ಯಪ್ರವೃತ್ತರಾಗಬೇಕು. 112 ಪೊಲೀಸ್ ತುರ್ತು ವಾಹನ ಪಟ್ಟಣ ಹಾಗೂ ಗ್ರಾಮೀಣ ಭಾಗದಲ್ಲೂ ಸಂಚರಿಸುತ್ತಿದ್ದು, ಸಾರ್ವಜನಿಕರು ಇದರ ಉಪಯೋಗ ಪಡೆದು ದೂರವಾಣಿ ಮೂಲಕ ಮಾಹಿತಿ ನೀಡಿ ಎಂದು ಸಲಹೆ ನೀಡಿದರು.

ಸಭೆಯಲ್ಲಿ ಪಪಂ ಸದಸ್ಯರಾದ ಎಸ್.ಎಲ್.ರಾಜಣ್ಣ, ಶ್ರೀನಿವಾಸ್, ಸಂವಿಧಾನ ಸಂರಕ್ಷಣಾ ಸಮಿತಿ ಅಧ್ಯಕ್ಷ ಶಿವಣ್ಣ, ನಾಯಕ ಸಮಾಜದ ತಾಲೂಕು ಅಧ್ಯಕ್ಷ ಪುರದಕಟ್ಟೆ ಬಸವರಾಜು, ದಸಂಸ ಸಂಚಾಲಕ ಇಟ್ನ ರಾಜಣ್ಣ ಮುಖಂಡರಾದ ಚೆನ್ನಿಪುರ ಮಲ್ಲೇಶ್, ಸೋಮಣ್ಣ, ಬಸಾಪುರ ರವಿ, ಶಿವರಾಜು, ಕಂದೇಗಾಲ ನಾಗರಾಜು, ಪೊಲೀಸ್ ಸಿಬ್ಬಂದಿ ಇಮ್ರಾನ್ ಅಹಮ್ಮದ್, ಸೋಮನಾಯಕ, ಆನಂದ್, ನಾಗನಾಯಕ, ಗೋವಿಂದ, ಶ್ರೀಕಂಠಸ್ವಾಮಿ ಸೇರಿದಂತೆ ಮುಖಂಡರು ಹಾಜರಿದ್ದರು.

ನೇರಳಕುಪ್ಪೆ ಪಿಎಚ್‌ಸಿಯಲ್ಲಿ ಮೀನು ಸಾಕಾಣಿಕೆ ತೊಟ್ಟಿ ಉದ್ಘಾಟನೆ



ಹನಗೋಡು, ಮೇ 29 (ಮಹೇಶ್)– ಹುಣಸೂರು ತಾಲೂಕಿನ ನೇರಳಕುಪ್ಪೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮೀನು ಸಾಕಾಣಿಕೆ ತೊಟ್ಟಿಯನ್ನು ಜಿಲ್ಲಾ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಚಿದಂಬರಂ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಮೀನು ಸಾಕಣೆ ತೊಟ್ಟಿ ನಿರ್ಮಾಣದಿಂದ ಮಲೇರಿಯಾ, ಡೆಂಘೀ ಹಾಗೂ ಚಿಕೂನ್‌ಗುನ್ಯಾ ತಡೆಗೆ ಸಹಕಾರಿಯಾಗಲಿದೆ ಎಂದು ಅವರು ಹೇಳಿದರು. ರಾಜ್ಯಾದ್ಯಂತ ಇಂತಹ ಯೋಜನೆಯನ್ನು ಸರಕಾರ ಜಾರಿಗೆ ತಂದಿದ್ದು, ಮೈಸೂರು ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಯೋಜನೆಯನ್ನು ಅನುಷ್ಠಾನಕ್ಕೆ ತಂದಿದೆ. ಜಿಲ್ಲೆಯ ವಿವಿಧ ತಾಲೂಕಿನಲ್ಲಿ ಒಟ್ಟು 16 ಪ್ರಾಥಮಿಕ ಕೇಂದ್ರಗಳಲ್ಲಿ ಈ ಯೋಜನೆ ಅಳವಡಿಸಲಾಗಿದೆ. ಹುಣಸೂರು ತಾಲೂಕಿನ 22 ಆರೋಗ್ಯ ಕೇಂದ್ರಗಳ ಪೈಕಿ 20 ಆರೋಗ್ಯ ಕೇಂದ್ರಗಳಲ್ಲಿ ಚಾಲನೆ ನೀಡಿದ್ದು, ಉಳಿದ ಎರಡು ಆರೋಗ್ಯ ಕೇಂದ್ರಗಳಲ್ಲಿ ಸ್ಥಳವಕಾಶ ಇರುವ ಕಡೆ ಮಾಡಲಾಗುತ್ತದೆ ಎಂದರು. ಈ ಸಂದರ್ಭದಲ್ಲಿ ಡಾ. ಶಿಲ್ಪಾಶ್ರೀ ಆರೋಗ್ಯ ಸಹಾಯಕ ಚಂದ್ರು ಮತ್ತಿತರರು ಉಪಸ್ಥಿತರಿದ್ದರು.

ಟ್ರ್ಯಾಕ್ಟರ್ ಉರುಳಿ ಚಾಲಕ ಸಾವು

ಹೆಚ್.ಡಿ.ಕೋಟೆ, ಮೇ 29(ಮಂಜು)– ಟ್ರ್ಯಾಕ್ಟರ್ ಉರುಳಿ ಚಾಲಕ ಸಾವನ್ನಪ್ಪಿರುವ ಘಟನೆ ಪಟ್ಟಣದ ಮೇಟಿಕುಪ್ಪೆ ರಸ್ತೆಯ ಮಹದೇಶ್ವರ ದೇವಸ್ಥಾನದ ಬಳಿ ಭಾನುವಾರ ನಡೆದಿದೆ. ತಾಲೂಕಿನ ಕೈಲಾಸಪುರ ಗ್ರಾಮದ ನಿವಾಸಿ ಶಿವು(26) ಮೃತಪಟ್ಟ ಚಾಲಕ. ಈತ ಹೆಚ್.ಡಿ.ಕೋಟೆ ಪಟ್ಟಣದಿಂದ ಸಮೀಪದ ಜಮೀನೊಂದಕ್ಕೆ ಉಳುಮೆ ಮಾಡಲು ತೆರಳುತ್ತಿದ್ದ ಸಂದರ್ಭದಲ್ಲಿ ರಸ್ತೆ ಏರಿ ಕೆಳಗೆ ಟ್ರ್ಯಾಕ್ಟರ್ ಚಾಲಕನ ನಿಯಂತ್ರಣ ಕಳೆದುಕೊಂಡು ಉರುಳಿ ಬಿದ್ದಿದೆ. ಈ ವೇಳೆ ಟ್ರ್ಯಾಕ್ಟರ್ ಕೆಳಗೆ ಸಿಲುಕಿದ ಚಾಲಕ ಶಿವು ತೀವ್ರ ಗಾಯಗೊಂಡು ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ.

ವಿಷಯ ತಿಳಿದು ಸ್ಥಳಕ್ಕೆ ಹೆಚ್.ಡಿ.ಕೋಟೆ ಸರ್ಕಲ್ ಇನ್‌ಸ್ಪೆಕ್ಟರ್ ಬಸವರಾಜು ಹಾಗೂ ಸಿಬ್ಬಂದಿ ಭೇಟಿ ನೀಡಿ, ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಿದರು. ಈ ಸಂಬಂಧ ಹೆಚ್.ಡಿ.ಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಮೊಮ್ಮಗಳ ಅಗಲಿಕೆಗೆ ಸಾಂತ್ವನ ಸೂಚಿಸಿದ್ದ ಪ್ರಧಾನಿ ಮೋದಿಗೆ ಜಿಟಿಡಿ ಧನ್ಯವಾದ



ಪ್ರಧಾನಿ ಮೋದಿ ಜಿ.ಟಿ. ದೇವೇಗೌಡ

ಮೈಸೂರು, ಮೇ 29(ಎಸ್‌ಬಿಡಿ)– ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರ ಮೊಮ್ಮಗಳು ಗೌರಿಯ ಅಕಾಲಿಕ ಮರಣದ ಹಿನ್ನೆಲೆಯಲ್ಲಿ ಪತ್ರದ ಮೂಲಕ ಸಾಂತ್ವನ ಸೂಚಿಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಜಿಟಿಡಿ ಧನ್ಯವಾದ ತಿಳಿಸಿದ್ದಾರೆ.

ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದಿರುವ ಜಿಟಿಡಿ, 'ನನ್ನ ಪ್ರೀತಿಯ ಮೊಮ್ಮಗಳು ಗೌರಿಯ ಅಕಾಲಿಕ ಮರಣಕ್ಕೆ ನಿಮ್ಮ ಸಂತಾಪವನ್ನು ಸ್ವೀಕರಿಸಿದ್ದೇನೆ. ನನ್ನ ಕುಟುಂಬದ ಸದಸ್ಯರೊಂದಿಗೆ ನಾನು ಅತೀವ ದುಃಖದಲ್ಲಿದ್ದ ಸಮಯದಲ್ಲಿ ನಿಮ್ಮ ಸಹಾನುಭೂತಿಯ ಅಭಿವ್ಯಕ್ತಿಯನ್ನು ವಿನಮ್ರವಾಗಿ ಅಂಗೀಕರಿಸಿದ್ದೇನೆ. ನಿಮ್ಮಂತಹ ಶ್ರೇಷ್ಠ ಮತ್ತು ಉನ್ನತ ವ್ಯಕ್ತಿತ್ವಕ್ಕೆ ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಲು ಪದಗಳಿಲ್ಲ. ಅತೀವ ದುಃಖದ ಸಮಯದಲ್ಲಿ ಪ್ರತಿಕ್ರಿಯಿಸುವ ಮೂಲಕ ನೀವು ಎಷ್ಟು ಶ್ರೇಷ್ಠರು ಹಾಗೂ ಸಂತರು ಎನ್ನುವುದನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದೀರಿ. ಖಂಡಿತವಾಗಿ, ನಿಮ್ಮ ಸಹಾನುಭೂತಿ ಮತ್ತು ಸಾಂತ್ವನದ ಮಾತುಗಳು ನೋವಿನಿಂದ ಕುಸಿದಿದ್ದ ನನ್ನ ಕುಟುಂಬದ ಮನೋಬಲ ಮತ್ತು ಆಧ್ಯಾತ್ಮಿಕ ಶಕ್ತಿಯನ್ನು ಹೆಚ್ಚಿಸುತ್ತದೆ' ಎಂದು ಪ್ರತಿಕ್ರಿಯಿಸಿದ್ದಾರೆ.



G T Devegowda
Former Minister, Government of Karntaka
MLA, Chamundeshwari Assembly Constituency
Mysuru

No. 509, New Kalidasa Road,
Vijayanagara 1st Stage,
Mysuru - 570 017.
Mob. : +91 99002 60968

Date : 28th May 2022

Shri Narendra Modi ji
Hon'ble Prime Minister Of India
New Delhi

Hon'ble Modi ji,

Received your condolences on the untimely death of my beloved Granddaughter Gowri.

I along with my family members deeply and gratefully acknowledge your kind and heartfelt expression of sympathy to us at the time of deep grief.

I am at loss of words to express my gratitude to a great and towering personality like you.

By responding to us during this hour of sorrow, once again you have proved that how great and saintly, a person you are.

Definitely, your words of sympathy and solace will boost morale and spiritual strength of my crestfallen family.

With high regards,

(G T Devegowda)

ಆಮ್ ಆದ್ಮಿಯಿಂದ ಗ್ರಾಮ ಸಂಪರ್ಕ ಅಭಿಯಾನ

ದೆಹಲಿ, ಪಂಜಾಬ್ ನಂತರ ಜನರಿಗೆ ಕರ್ನಾಟಕದಲ್ಲೂ ಆಮ್ ಆದ್ಮಿ ಮೇಲೆ ಒಲವು



ಮೈಸೂರು, ಮೇ 29(ಎಂಟಿವೈ)– ಗ್ರಾಮೀಣ ಪ್ರದೇಶದತ್ತ ಗಮನ ಹರಿಸಿರುವ ಆಮ್ ಆದ್ಮಿ ಪಕ್ಷವು ಭಾನುವಾರ ಗ್ರಾಮ ಸಂಪರ್ಕ ಅಭಿಯಾನ ಆರಂಭಿಸಿತು.

ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ ಪಂಡಿತ್ ನಾರಾಯಣಾಚಾರ್ಯ ಕಲ್ಯಾಣ ಮಂದಿರದ ಭವನದಲ್ಲಿ ಇಂದು ಬೆಳಗ್ಗೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರ ಸಭೆ ನಡೆಸಿದ ಬಳಿಕ ಗ್ರಾಮ ಸಂಪರ್ಕ ಅಭಿಯಾನಕ್ಕೆ ಪಕ್ಷದ ರಾಜ್ಯ ಸಂಘಟನಾ ಉಸ್ತುವಾರಿ ಡಾ. ದಾಮೋದರನ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಡಾ. ದಾಮೋದರನ್, ಆಮ್ ಆದ್ಮಿ ಪಕ್ಷವು ಉತ್ತಮ ಸಂಘಟನೆಯಿಂದಾಗಿ ದೆಹಲಿ ನಂತರ ಪಂಜಾಬ್‌ನಲ್ಲಿ ಅಧಿಕಾರಕ್ಕೇರಿದೆ. ಉತ್ತಮ ಆಡಳಿತ, ಪಾರದರ್ಶಕತೆ, ಭ್ರಷ್ಟಾಚಾರ ಮುಕ್ತ ಆಡಳಿತದಿಂದಾಗಿ ಜನರು ಪಕ್ಷದ ಮೇಲೆ ವಿಶ್ವಾಸ ಇಟ್ಟಿದ್ದಾರೆ. ಇದರಿಂದ ಪಕ್ಷಕ್ಕೆ ನಿರೀಕ್ಷೆಗಿಂತ ಹೆಚ್ಚಾಗಿ ಬೆಂಬಲ ದೊರೆಯುತ್ತಿದೆ. ದೆಹಲಿ ಮತ್ತು ಪಂಜಾಬ್ ರಾಜ್ಯದಲ್ಲಿ ಗಳಿಸಿದ ಅಪೂರ್ವ ಯಶಸ್ಸು ಕರ್ನಾಟಕದತ್ತ ಸಾಗುತ್ತಿದೆ. ಕರ್ನಾಟಕ ದಲ್ಲೂ ಆಮ್ ಆದ್ಮಿ ಪಕ್ಷಕ್ಕೆ ವ್ಯಾಪಕ ಬೆಂಬಲ ದೊರೆಯುತ್ತಿದೆ. ಗ್ರಾಮ ಸಂಪರ್ಕ ಅಭಿಯಾನದ ಮೂಲಕ ಗ್ರಾಮೀಣ ಪ್ರದೇಶದಲ್ಲೂ ಪಕ್ಷವನ್ನು ಸಂಘಟಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು. ಕಾರ್ಯಾಗಾರದಲ್ಲಿ ಜಂಟಿ ಕಾರ್ಯದರ್ಶಿ ದರ್ಶನ್ ಜೈನ್ ಮಾತನಾಡಿ, ಪಕ್ಷದ ಸಂಘಟನೆ, ಸ್ವರೂಪ ಹೇಗಿರಬೇಕು. ಗ್ರಾಮ ಸಂಪರ್ಕ ಅಭಿಯಾನ ಹೇಗಿರುತ್ತದೆ. ಹೇಗೆ ಪದಾಧಿಕಾರಿಗಳ ಜವಾಬ್ದಾರಿ ಮರು ಹಂಚಿಕೆಯಾಗುತ್ತದೆ. ಹೊಸ ಸಮಿತಿಗಳ ರಚನೆ ಮತ್ತು ಕಾರ್ಯಸೂಚಿಗೆ ವೇಳಾಪಟ್ಟಿ ಪ್ರಕಟಿಸಿದರು.

ಸಭೆಯಲ್ಲಿ ದೆಹಲಿಯಿಂದ ಬಂದಿದ್ದ ವಲಯ 7 ಮತ್ತು 8 ರ ಉಸ್ತುವಾರಿ ರಾಜೀವ್ ಖೇರಾ, ಮಂಡ್ಯದ ಉಸ್ತುವಾರಿ ಬೂದನೂರ ಬೊಮ್ಮಯ್ಯ, ಕೊಡಗಿನ ವೀಕ್ಷಕ ಕೆ.ಸಿ. ವೆಂಕಟೇಶ್, ಸಿವೈಎಸ್‌ಎಸ್ ಯುವ ಮುಖಂಡ ಅಬ್ದುಲ್ ರಜಾಕ್ ಮರ್ದಾಲಾ ಪಕ್ಷದ ಸಂಘಟನೆ ಹಾಗೂ ತಮ್ಮ ಜಿಲ್ಲೆಗಳಲ್ಲಿ ಪಕ್ಷಕ್ಕೆ ಸಿಗುತ್ತಿರುವ ಬೆಂಬಲದ ಬಗ್ಗೆ ವಿವರಿಸಿದರು. ಜಿಲ್ಲಾಧ್ಯಕ್ಷೆ ಮಾಲವಿಕ ಗುಬ್ಬಿವಾಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಸಂಸ್ಥಾಪಕ ಸದಸ್ಯೆ ಪದ್ಮಮ್ಮ, ಮಾಲಿನಿ ಪಾಲಾಕ್ಷ, ಧರ್ಮಶ್ರೀ, ಅಬ್ದುಲ್, ಪ್ರೇಮ್ ರಾಜ್, ಸಿದ್ದೇಗೌಡ, ಜಿಲ್ಲಾ ಮಾಧ್ಯಮ ಸಂಯೋಜಕ ಜಿ.ಆರ್.ವಿದ್ಯಾರಣ್ಯ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು